ಸಂಪುಟ: 15 Volume ಸಂಚಿಕೆ: 04 Issue ಪುಟಗಳು 08 Pages ಶನಿವಾರ 04 ಏಪ್ರಿಲ್ 2026 ₹4 PRGINO.120927 (RNINO:KARKAN/2011/48371) BDR/054/2026-2027 www.mallammanudi.in mallammanudi@gmail.com 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

**ಬೆಳಗು**
ಪ್ರೀತಿಯಿಂದಾಡಿದ
ಪ್ರತಿಯೊಂದು ನುಡಿಯು
ಸಿಡಿಲಿನಂತೆ ಪರಿಣಾಮಕಾರಿ.
–ಸ್ವಾಮಿ ವಿವೇಕಾನಂದ

ಸಿಡಗಿನ ಮೊಳೆಯಲ್ಲಿ ಓಂಕಾರೇಶ್ವರ ರಥೋತ್ಸವ 6
ದೇಶಕ್ಕೆ ಬಿಜೆಪಿ ಕೊಡುಗೆ ಶೂನ್ಯ 7
ಮಂಗಗಳ ಕಾಟಕ್ಕೆ ಬೇಸತ್ತ ಗ್ರಾಮಸ್ಥರು 8



ಜೆ. ಎಸ್. ಎಸ್ ಚಿತ್ರ ಕಲಾ ಶಿಬಿರ – 26 ಅನ್ನು ಜಂಟಿ ನಿರ್ದೇಶಕರ ಕಛೇರಿಯ ಚಿತ್ರಕಲಾ ಪರಿವೀಕ್ಷಕರಾದ ಲಿಂಗಪ್ಪ ಪೂಜಾರ್ ಉದ್ಘಾಟಿಸಿದರು. ಚಿತ್ರದಲ್ಲಿ ಉಪ ನಿರ್ದೇಶಕ ಎಂ ಶಿವಮಾದಪ್ಪ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಶಿಬಿರ ಸಂಚಾಲಕ ಎಸ್. ಎಂ. ಜಂಬುಕೇಶ್ವರ, ಶಿಕ್ಷಕರಾದ ಸಲಬಣ್ಣನವರ್, ಹಾಗು ನಾಗರಾಜಪ್ಪ ನವರನ್ನು ಕಾಣಬಹುದು.



ಗುರುಮಠಕಲ್ ತಾಲೂಕ ತಹಸೀಲ್ದಾರ ಶ್ರೀ ಚನ್ನಮಲ್ಲಪ್ಪ ಘಂಟಿ ಅವರು ಯುಗಾದಿ ವಿಶೇಷಾಂಕ ಸಂಚಿಕೆಗೆ ಶುಭ ಹಾರೈಸಿದರು.

## ಲವ್‌ಜಿಹಾದ್: ಹುಬ್ಬಳ್ಳಿ ಉದ್ವಿಗ್ನ

**ಹುಬ್ಬಳ್ಳಿ:** ನಗರದಲ್ಲಿ ಲವ್‌ಜಿಹಾದ್ ಸುದ್ದಿ ಸದ್ದು ಮಾಡಿದೆ. ಇದರಿಂದ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲಿನ ವಿಜಯನಗರ ನಿವಾಸಿಯಾಗಿರುವ ಸಮೀರ್ ಹಾಗು ಜಿಮ್ ಟ್ರೈನರ್ ಆಗಿದ್ದ ಈ ಯುವಕನನ್ನು ಕಾರ್ಯಕರ್ತರು ಹಿಡಿದು, ಹಳೆ ಹುಬ್ಬಳ್ಳಿ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ. ಯುವತಿ ಮತ್ತು ಸಮೀರ್ ನಡುವೆ ಜಿಮ್‌ನಲ್ಲಿ ಪರಿಚಯವಾಗಿದ್ದು, ಅದನ್ನೇ ಲವ್ ಜಿಹಾದ್ ಎಂದು ಆರೋಪಿಸಲಾಗಿದೆ.

## ದಾವಣಗೆರೆ ಪ್ರಚಾರ ಕಣಕ್ಕೆ ಜಮೀರ್?

**ಬೆಂಗಳೂರು:** ದಾವಣಗೆರೆ ಹಾಗೂ ಬಾಗಲಕೋಟೆ ಉಪಚುನಾವಣೆ ಪ್ರಚಾರದಿಂದ ದೂರ ಉಳಿದಿದ್ದ ವಸತಿ ಸಚಿವ ಜಮೀರ್‌ಅಹ್ಮದ್‌ಖಾನ್, ಇದೀಗ ಕಾಂಗ್ರೆಸ್ ಹೈಕಮಾಂಡ್ ಸೂಚನೆ ಮೇರೆಗೆ ಅಸಮಾಧಾನ ಬದಿಗಿಟ್ಟು ಪ್ರಚಾರಕ್ಕಿಳಿಯಲು ಮುಂದಾಗಿದ್ದಾರೆಂದು ತಿಳಿದುಬಂದಿದೆ.


ಮುಸ್ಲಿಂ ಮತಗಳನ್ನು ಸೆಳೆಯಲು ಜಮೀರ್ ಅಗತ್ಯವಿಲ್ಲ ಎಂಬ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರ ಹೇಳಿಕೆಯಿಂದ ಜಮೀರ್ ಅವರು ಅಸಮಾಧಾನಗೊಂಡಿದ್ದರು. ಈ ಹಿನ್ನೆಲೆಯಲ್ಲಿ ಪ್ರಚಾರದಿಂದ ದೂರ ಉಳಿದು ಕೇರಳ ವಿಧಾನಸಭೆ ಚುನಾವಣಾ ಕಾರ್ಯದಲ್ಲಿ ತೊಡಗಿಕೊಂಡಿದ್ದರು.

## ಮಾರಕಾಸ್ತ್ರಗಳಿಂದ ಕೊಚ್ಚಿ ಭೀಕರ ಕೊಲೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ನಗರದ ಹಳೇ ಜೇವರ್ಗಿ ರಸ್ತೆಯ ಪಿಅಂಡ್‌ಟಿ ಕಾಲೊನಿಯಲ್ಲಿ ವ್ಯಕ್ತಿಯೊಬ್ಬರನ್ನು ದುಷ್ಕರ್ಮಿಗಳು ಮಾರಾಕಾಸ್ತ್ರಗಳಿಂದ ಕೊಲೆ ಮಾಡಿದ್ದಾರೆ.

ಅನಿಲ್ ರಾಠೋಡ್ ಅವರು ತಮ್ಮ ಕಚೇರಿಯಲ್ಲಿದ್ದಾಗ, ಆಟೊದಲ್ಲಿ ಬಂದ ಮೂವರು ದುಷ್ಕರ್ಮಿಗಳ ತಂಡ, ನೇರವಾಗಿ ಕಚೇರಿ ಒಳಗೆ ನುಗ್ಗಿದೆ. ಮಾರಕಾಸ್ತ್ರಗಳಿಂದ ಅನಿಲ್ ಅವರ ಮೇಲೆ ಮನಬಂದಂತೆ ಹಲ್ಲೆ ನಡೆಸಿದೆ. ತೀವ್ರರಕ್ತಸ್ರಾವದಿಂದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕೃತ್ಯ ಎಸಗಿದ ಬಳಿಕ ಹಂತಕರು ಅದೇ ಆಟೋದಲ್ಲಿ ಸ್ಥಳದಿಂದ ಪರಾರಿಯಾಗಿದ್ದಾರೆ. ಅನಿಲ ಅವರು ಫೈನಾನ್ಸ್ ಕೆಲಸದಲ್ಲಿ ತೊಡಗಿಸಿಕೊಂಡಿದ್ದರು. ಇವರು ಮಾಜಿ ಸಚಿವ ರೇವೂನಾಯಕ ಬೆಳಮಗಿ ಅವರ



ಅಳಿಯನಾಗಿದ್ದರು. ರಿಯಲ್ ಎಸ್ಟೇಟ್ ಮತ್ತು ಫೈನಾನ್ಸ್ ವ್ಯವಹಾರದಲ್ಲೂ ಸಕ್ರಿಯರಾಗಿದ್ದರು. ಇವರ ಹತ್ಯೆಗೆ ಹಣಕಾಸಿನ ವಿಚಾರವೇ ಪ್ರಮುಖ ಕಾರಣವಿರಬಹುದು ಎಂದು ಪೊಲೀಸರು ಪ್ರಾಥಮಿಕವಾಗಿ ಶಂಕಿಸಿದ್ದಾರೆ. ವೈಯಕ್ತಿಕ ಅಥವಾ ವ್ಯವಹಾರಿಕ ದ್ವೇಷದ ಹಿನ್ನೆಲೆಯಲ್ಲಿ ಈ ಕೃತ್ಯ ನಡೆದಿದೆಯೇ ಎಂಬ ಬಗ್ಗೆ ಕೂಲಂಕಶ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ತೆರಿಗೆ ಸಂಗ್ರಹ: 2ನೇ ಸ್ಥಾನದಲ್ಲಿ ರಾಜ್ಯ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ತಲಾ ಆದಾಯದಲ್ಲಿ ನಾವು ದೇಶದಲ್ಲೇ ನಂಬರ್ ಒನ್ ಆಗಿದ್ದೇವೆ. ತೆರಿಗೆ ಸಂಗ್ರಹದಲ್ಲಿ ರಾಜ್ಯ ಎರಡನೇ ಸ್ಥಾನದಲ್ಲಿದೆ. ಇದಕ್ಕಾಗಿ ನೀವು ಕಾಂಗ್ರೆಸ್ ಗೆಲ್ಲಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.



ಬೇವಿನಮಟ್ಟಿ ಗ್ರಾಮದಲ್ಲಿ ನಡೆದ ಉಪ ಚುನಾವಣೆ ಪ್ರಚಾರ ಸಭೆಯಲ್ಲಿ ಮಾತನಾಡಿ, ಉಮೇಶ್‌ಮೇಟಿ ಗೆದ್ದು ಬಂದರೆ ನಿಮ್ಮ ಪ್ರತಿನಿಧಿಯಾಗಿ ಉತ್ತಮ ಕೆಲಸ ಮಾಡ್ತಾರೆ ಎನ್ನುವ ವಿಶ್ವಾಸ ನನಗಿದೆ. ಐದು ಬಾರಿ ಶಾಸಕರಾಗಿ, ಎರಡು ಬಾರಿ ಸಚಿವರಾಗಿ, ಸಂಸದರಾಗಿ ತಳ ಸಮುದಾಯ ಮತ್ತು ಬಡವರ ಪರವಾಗಿ ಕೆಲಸ ಮಾಡುತ್ತಿದ್ದರು. ಇದೇ ಕೆಲಸವನ್ನು ಉಮೇಶ್ ಮೇಟಿ ಮುಂದುವರೆಸುತ್ತಾರೆ ಎಂದಿದ್ದಾರೆ.

ಅಧಿಕಾರದಲ್ಲಿದ್ದಾಗ ಅಭಿವೃದ್ಧಿ ಕೆಲಸ ಮಾಡದ ಬಿಜೆಪಿ ಈಗ ಕಾಂಗ್ರೆಸ್ ಸರ್ಕಾರದ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ. ಈ ಸುಳ್ಳುಗಳನ್ನು ನೀವು ಅರ್ಥ ಮಾಡಿಕೊಳ್ಳಬೇಕು. ನಮ್ಮ ಸರ್ಕಾರ ಸಾಲ ಮಾಡಿದೆ ಎಂದು ಬಿಜೆಪಿ ನಾಯಕರು ಟೀಕಿಸುತ್ತಿದ್ದಾರೆ. ಆರ್ಥಿಕ ನಿರ್ವಹಣಾ ಕಾಯ್ದೆಯ ಮಾನದಂಡಗಳನ್ನು ಮೀರಿ ನಾವು ಸಾಲ ಮಾಡಿಲ್ಲ. ಈ ಸತ್ಯವನ್ನು ಬಿಜೆಪಿ ಹೇಳುತ್ತಿಲ್ಲ. ರಾಜ್ಯಕ್ಕೆ ಬರಬೇಕಾದ ಜಿಎಸ್ ಟಿ ಪಾಲು ಬರಲಿಲ್ಲ. ಜೊತೆಗೆ ಜಿಎಸ್ ಟಿ ಮೂಲಕ ನಮಗೆ ಬರಬೇಕಿದ್ದ ತೆರಿಗೆ ಕೇಂದ್ರದ ಅವೈಜ್ಞಾನಿಕ ನೀತಿಯಿಂದಾಗಿ 10 ಸಾವಿರ ಕೋಟಿ ಕಡಿಮೆಯಾಯಿತು ಎಂದು ನುಡಿದಿದ್ದಾರೆ.

# ಇಕ್ಕಟ್ಟು ತಂದಿಟ್ಟ ಎಲ್‌ಪಿಜಿ

### ಅಮೆರಿಕ, ಇಸ್ರೇಲ್, ಇರಾನ್ ಯುದ್ಧದಿಂದಾಗಿ ಅನಿಲ ಬಿಕ್ಕಟ್ಟು | ಅಟೊ, ಹೋಟೆಲ್‌ಗಳಿಗೆ ಸಂಕಷ್ಟ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಅಮೆರಿಕ, ಇಸ್ರೇಲ್ ಹಾಗೂ ಇರಾನ್ ಯುದ್ಧದಿಂದಾಗಿ ಅನಿಲ ಬಿಕ್ಕಟ್ಟು ಸೃಷ್ಟಿಯಾಗಿದೆ. ಇದರಿಂದ ರಾಜ್ಯಾದ್ಯಂತ, ಆಟೊ, ಹೋಟೆಲ್‌ಗಳು ಮುಚ್ಚುವ ಹಂತ ತಲುಪಿವೆ.

ಬೆಂಗಳೂರು, ರಾಜ್ಯದ ಇತರೆ ಭಾಗಗಳಲ್ಲಿ ಹಲವಾರು ಖಾಸಗಿ ಆಟೊ ಎಲ್ಪಿಜಿ ಔಟ್ಲೆಟ್‌ಗಳಲ್ಲಿ ಅನಿಲ ಪೂರೈಕೆಯಲ್ಲಿ ವ್ಯತ್ಯಯವುಂಟಾಗಿದೆ.

**ಸಮಸ್ಯೆ ಪರಿಹಾರಕ್ಕೆ ಮುಂದು:** ಎಲ್ಲೆಲ್ಲೂ ಎಲ್‌ಪಿಜಿ ಸಮಸ್ಯೆ ತೀವ್ರಗೊಂಡಿರುವ ಹಿನ್ನೆಲೆಯಲ್ಲಿ ಇದನ್ನು ಪರಿಹರಿಸಲು ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ (ಇಂಡಿಯನ್ ಆಯಿಲ್) ಮುಂದಾಗಿರುವುದು ಸಮಾಧಾನಕ್ಕೆ ಕಾರಣವಾಗಿದೆ. ಬೇಡಿಕೆಗೆ ಅನುಗುಣವಾಗಿ ರಾಜ್ಯದಲ್ಲಿ ಇಂಡಿಯನ್ ಆಯಿಲ್ ಎಲ್‌ಪಿ ವಿತರಣೆ ಹೆಚ್ಚಿಸಿದೆ.

**ಇಂಧನ ಪೂರೈಕೆಗೆ ಅಸ್ತು:** ಡಿಮ್ಯಾಂಡ್‌ಗೆ ತಕ್ಕಂತೆ ಕರ್ನಾಟಕದಾದ್ಯಂತ ತನ್ನ ಆಟೊ ಎಲ್ಪಿಜಿ ಸರಬರಾಜನ್ನು ಇಂಡಿಯನ್ ಆಯಿಲ್ ಗಮನಾರ್ಹವಾಗಿ ಹೆಚ್ಚಿಸಿದೆ. ನಾಡಿನಾದ್ಯಂತ ಹರಡಿರುವ 55 ಆಟೋ ಎಲ್ಪಿಜಿ ವಿತರಣಾ ಕೇಂದ್ರಗಳ ವ್ಯಾಪಕ ಜಾಲದ ಮೂಲಕ ಆಟೊ, ಎಲ್ಪಿಜಿ ಚಾಲಿತ ಕಾರುಗಳ ಇಂಧನ ಅಗತ್ಯವನ್ನು ಪೂರೈಸುತ್ತಿದೆ.




### ಮುಚ್ಚಿದ ಮುನ್ನೂರು ಮಳಿಗೆ

ಖಾಸಗಿ ಸಂಸ್ಥೆಗಳು ನಿರ್ವಹಿಸುವ 300ಕ್ಕೂ ಹೆಚ್ಚು ಮಳಿಗೆಗಳು ಬಹುತೇಕ ಮುಚ್ಚಲ್ಪಟ್ಟಿವೆ.

ಈ ಕುರಿತು ಚೆನ್ನೈನ ದಕ್ಷಿಣ ಪ್ರಾದೇಶಿಕ ಕಚೇ–ರಿಯ ಇಂಡಿಯನ್ ಆಯಿಲ್‌ನ ಮುಖ್ಯ ಮಹಾಪ್ರಬಂಧಕ ವೆಟ್ರಿಸೆಲ್ವಕ್ಕುಮಾರ್ ಪತ್ರಿಕಾ ಹೇಳಿಕೆ ನೀಡಿ, ತನ್ನ ಮೂಲಸೌಕರ್ಯದ ಮೇಲೆ ಹೆಚ್ಚಿದ ಕಾರ್ಯಾಚರಣೆಯ ಹೊರೆಯ ಹೊರತಾಗಿಯೂ, ಎಲ್ಪಿಜಿಚಾಲಿತ ವಾಹನಗಳಿಗೆ ನಿರಂತರ ಪೂರೈಕೆಗೆ ಒತ್ತು ನೀಡಲಾಗುತ್ತಿದೆ ಎಂದಿದ್ದಾರೆ.

### ಮೋದಿ ಮನೆಗೆ ಮುತ್ತಿಗೆ ಹಾಕಿ

ರಾಜ್ಯದಲ್ಲಿ ಎಲ್‌ಪಿಜಿ ಅಭಾವ ಇರುವ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನಿವಾಸಕ್ಕೆ ಮುತ್ತಿಗೆ ಹಾಕಲು ಸಿಎಂ ಸಿದ್ದರಾಮಯ್ಯ ಕರೆ ನೀಡಿದ್ದಾರೆ. ಈ ಬಗ್ಗೆ ಬಾಗಲ ಕೋಟೆಯಲ್ಲಿ ಮಾತನಾಡಿ, ಗ್ಯಾಸ್ ಸಿಲಿಂಡರ್ ಅಭಾವದ ಬಗ್ಗೆ ಮಾತನಾಡಿ ಕೇಂದ್ರ ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳಬೇಕು. ಗ್ಯಾಸ್ ಸಿಲಿಂಡರ್ ಅಭಾವದ ಕ್ರಮ ಕೈಗೊಳ್ಳಬೇಕಾಗಿರುವುದು ಕೇಂದ್ರ ಸರ್ಕಾರದ ಕರ್ತವ್ಯವಾಗಿದೆ.

### ವಿತರಣೆಯಲ್ಲಿ ವಿಶೇಷ ಪ್ರಗತಿ

ಕರ್ನಾಟಕದಲ್ಲಿ ಇಂಡಿಯನ್ ಆಯಿಲ್‌ನ ಎಲ್ಡಿಎಸ್ ನಲ್ಲಿ ಸರಾಸರಿ ದೈನಂದಿನ ಮಾರಾಟವು 59.53 ಮೆಟ್ರಿಕ್ ಟನ್‌ಗಳಿಗೆ ಏರಿಕೆಯಾಗಿದೆ. ಸರ್ಕಾರಿ ನಿರ್ದೇಶನದಂತೆ ಸಮಾನ ವಿತರಣೆಯನ್ನು ಕಾಯ್ದುಕೊಳ್ಳುವಾಗ, ಸುಗಮ ಇಂಧನ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಇಂಡಿಯನ್ ಆಯಿಲ್ ತನ್ನ ಅಚಲ ಬದ್ಧತೆಯನ್ನು ಪುನರುಚ್ಚರಿಸುತ್ತದೆ ಎಂದು ಇಂಡಿಯನ್ ಆಯಿಲ್‌ನ ಮುಖ್ಯ ಪ್ರಬಂಧಕ ವೆಟ್ರಿಸೆಲ್ವಕ್ಕುಮಾರ್ ತಿಳಿಸಿದ್ದಾರೆ.

### ಅನಿಲ ನೀಡಲು ರಷ್ಯಾ ಸಿದ್ಧ

ಯುದ್ಧ ಭೀತಿ ನಡುವೆ ರಷ್ಯಾ ಭಾರತಕ್ಕೆ ಹೆಚ್ಚಿನ ಕಚ್ಚಾ ತೈಲ, ನೈಸರ್ಗಿಕ ಅನಿಲವನ್ನು ಪೂರೈಸಲು ಮುಂದಾಗಿದೆ. ಎರಡೂ ದೇಶಗಳು ತಮ್ಮ ಒಟ್ಟಾರೆ ಸಂಬಂಧವನ್ನು ಬಲಪಡಿಸಲು ಒಪ್ಪಿಕೊಂಡಿವೆ. ರಷ್ಯಾದ ಉಪ ಪ್ರಧಾನಿ ಡೆನಿಸ್ ಮಾಂಟುರೊವ್ ಅವರು ವಿದೇಶಾಂಗ ಸಚಿವ ಜೈಶಂಕರ್ ಅವರೊಂದಿಗೆ ನಡೆಸಿದ ಸಭೆಗಳಲ್ಲಿ ಇಂಧನ ಸಹಕಾರವು ಪ್ರಮುಖ ವಿಚಾರವಾಗಿದೆ ಎಂದು ಮೂಲಗಳು ತಿಳಿಸಿವೆ.

## ಸಿಎಂ ಸಿದ್ದರಾಮಯ್ಯಗೆ ಸಚಿವ ತಿರುಗೇಟು

• ಮಲ್ಲಮ್ಮ ನುಡಿ ವಾರ್ತೆ ಮಂಡ್ಯ

ಕುಟುಂಬ ರಾಜಕಾರಣದ ವಿಷಯದಲ್ಲಿ ದೇವೇಗೌಡರ ಕುಟುಂಬವನ್ನು ಎಳೆದು ತಂದು ಅನಗತ್ಯ ಟೀಕೆ ಮಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಕಟುವಾಗಿ ತಿರುಗೇಟು ನೀಡಿದ್ದಾರೆ.



ಈ ಬಗ್ಗೆ ಮಾಧ್ಯಮಗಳು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ಕೇಂದ್ರ ಸಚಿವ; ಸಿದ್ದರಾಮಯ್ಯ ಅವರಿಗೆ ಕುಟುಂಬ ರಾಜಕಾರಣದ ಬಗ್ಗೆ ಮಾತನಾಡುವ ಯಾವುದೇ ನೈತಿಕ ಹಕ್ಕಿಲ್ಲ. ಅವರ ಮೊದಲ ಮಗ ಅಕಾಲಿಕವಾಗಿ ಮರಣ ಹೊಂದಿದರು. ಅದರ ಬಗ್ಗೆ ನನಗೆ ನೋವಿದೆ. ಇನ್ನೊಬ್ಬ ಮಗನನ್ನು ಅವರು ರಾಜಕಾರಣಕ್ಕೆ ಏಕೆ ಕರೆ ತಂದರು? ಸಮಾಜಸೇವೆ ಮಾಡಲಿಕ್ಕೆ ಅವರನ್ನು ಕರೆತಂದರಾ ಹೇಗೆ ಎಂಬ ಬಗ್ಗೆ ಅವರೇ ಉತ್ತರ ನೀಡಬೇಕಿದೆ ಎಂದು ಕುಟುಕಿದ್ದಾರೆ.

ಈಗ ರಾಜಕೀಯ ಮಾಡುತ್ತಿರುವ ಮಗ ಏನು ಮಾಡುತ್ತಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ ಎಂದಿದ್ದಾರೆ.

# ಶೈಕ್ಷಣಿಕ ಕ್ರಾಂತಿಗೆ ಸೈನಿಕ ಶಾಲೆ ಸಾಕ್ಷಿ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ರಾಯಚೂರು ಜಿಲ್ಲೆಯ ಶೈಕ್ಷಣಿಕ ಕ್ಷೇತ್ರದಲ್ಲಿ ಇಂದು ಹೊಸ ಕ್ರಾಂತಿ ಆರಂಭವಾಗುತ್ತಿದೆ. ಸಿಂಧನೂರು ತಾಲೂಕಿನ ಹೊಸಳ್ಳಿ ಇಜೆ ಕ್ಯಾಂಪ್ನ ಶ್ರೀ ಕೃಷ್ಣದೇವರಾಯ ಶಿಕ್ಷಣ ಸಂಸ್ಥೆಯಲ್ಲಿ ನೂತನವಾಗಿ ಆರಂಭಿಸಲಾಗಿರುವ ಸೈನಿಕ ಶಾಲೆಯನ್ನು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಉದ್ಘಾಟಿಸಲಿದ್ದಾರೆ.

ಈ ಮಹತ್ವದ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಚಿವರು ಸೇರಿದಂತೆ ಗಣ್ಯಾತಿಗಣ್ಯರ ದಂಡೇ ಸಿಂಧನೂರಿಗೆ ಆಗಮಿಸುತ್ತಿದ್ದು, ಆಂಧ್ರಪ್ರದೇಶದ ಸಚಿವ ನಾರಾ ಲೋಕೇಶ್, ಕೇಂದ್ರ ರಕ್ಷಣಾ ರಾಜ್ಯ ಸಚಿವ ಸಂಜಯ್ ಶೇಠ್, ರಾಜ್ಯ ಸಚಿವರಾದ ಶಿವರಾಜ್ ತಂಗಡಗಿ, ಶರಣಪ್ರಕಾಶ್ ಪಾಟೀಲ್, ಎನ್.ಎಸ್. ಬೋಸರಾಜು, ಸಂಸದರಾದ ರಾಜಶೇಖರ್ ಹಿಟ್ನಾಳ್, ಜಿ. ಕುಮಾರ್ ನಾಯಕ್ ಹಾಗೂ ವಿಶಾಖಪಟ್ಟಣಂ ಸಂಸದ ಶ್ರೀಭರತ್ ಸೇರಿದಂತೆ ಹಲವು ಶಾಸಕರು ಮತ್ತು ಮಾಜಿ ಜನಪ್ರತಿನಿಧಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

**ವಿದ್ಯಾರ್ಥಿಗಳಿಗೆ ವರದಾನ:** ಕೃಷ್ಣದೇವರಾಯ ಸಂಸ್ಥೆಯು ಈಗಾಗಲೇ ಗುಣಮಟ್ಟದ ಶಿಕ್ಷಣಕ್ಕೆ ಹೆಸರಾಗಿದ್ದು, ಇದೀಗ ಸೈನಿಕ ಶಾಲೆಯ ಮೂಲಕ ದೇಶಸೇವೆಗೆ ಸಜ್ಜಾಗುವ ಯುವಕರನ್ನು ತಯಾರು ಮಾಡಲು ಹೊಸ ಹೆಜ್ಜೆ ಇಟ್ಟಿದೆ. ಈ ಭಾಗದ ವಿದ್ಯಾರ್ಥಿಗಳು ಸೈನಿಕ ಶಿಕ್ಷಣ ಪಡೆಯಲು ಈ ಹಿಂದೆ ಕೊಡಗು ಅಥವಾ ವಿಜಯಪುರಕ್ಕೆ ಹೋಗಬೇಕಿತ್ತು. ಆದರೆ ಈಗ ಸಿಂಧನೂರಿನಲ್ಲೇ ಸೈನಿಕ ಶಾಲೆ ಆರಂಭವಾಗಿರುವುದು ಕಲ್ಯಾಣ ಕರ್ನಾಟಕದ ಪೋಷಕರು ಮತ್ತು ವಿದ್ಯಾರ್ಥಿಗಳಿಗೆ ದೊಡ್ಡ ವರದಾನವಾಗಿದೆ. ಶೈಕ್ಷಣಿಕವಾಗಿ ಹಿಂದುಳಿದಿರುವ ಈ ಭಾಗದಲ್ಲಿ ಇಂತಹದೊಂದು ಶಾಲೆ ಆರಂಭವಾಗಿರುವುದು ಜಿಲ್ಲೆಯ ಅಭಿವೃದ್ಧಿಗೆ ಪೂರಕವಾಗಿದೆ.



**ಹೊಸಹಳ್ಳಿ ಇಜೆ ಕ್ಯಾಂಪನಲ್ಲಿ ಇಂದು ಸೈನಿಕ ಶಾಲೆ ಲೋಕಾರ್ಪಣೆ: ಕುಮಾರಸ್ವಾಮಿ, ನಾರಾ ಲೋಕೇಶ್ ಭಾಗಿ**

### ಕಾರ್ಯಕ್ರಮಕ್ಕೆ ಅದ್ದೂರಿಯ ಸಿದ್ಧತೆ

ಹಬ್ಬದ ವಾತಾವರಣದಂತೆ ಶಾಲಾ ಆವರಣವನ್ನು ಸಿಂಗರಿಸಲಾಗಿದ್ದು, ಸಮಾರಂಭಕ್ಕೆ ಭರ್ಜರಿ ಸಿದ್ದಗೊಂಡಿದೆ. ಕಾರ್ಯಕ್ರಮದ ಸ್ವಾಗತಕ್ಕಾಗಿ ಕನ್ನಡ ಧ್ವಜಗಳನ್ನು ಹಿಡಿದು ಬೃಹತ್ ಬೈಕ್ ರ್ಯಾಲಿ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಶಾಲೆ ಆವರಣದಲ್ಲಿ ಮಹನೀಯರ ಪುತ್ಥಳಿಗಳನ್ನು ಅನಾವರಣಗೊಳಿಸಲಾಗುತ್ತಿದೆ.




**ಮುಖ್ಯಮಂತ್ರಿಗಳೇ, ಒಳ್ಳೆಯ ಕಾರಣಕ್ಕೆ ನಿಮ್ಮ ಸರಕಾರ ಯಾವಾಗ ಸುದ್ದಿಯಾಗಿದೆ ಹೇಳಿ: ಬಿಜೆಪಿ ರಾಷ್ಟ್ರೀಯ ಮಾಜಿ ಪ್ರಧಾನ ಸಿ.ಟಿ. ರವಿ ಪ್ರಶ್ನೆ**

# ಆರ್‌ಬಿಐ ಸ್ಥಾಪನೆಗೆ ಅಂಬೇಡ್ಕರ್ ಸಂಶೋಧನೆ ಮೂಲ ತಳಹದಿ: ಮಹೇಶ



• ಮಲ್ಲಮ್ಮ ನುಡಿ ವಾರ್ತೆ ಬೀದರ್

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸ್ಥಾಪನೆಗೆ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಂಶೋಧನಾ ಪ್ರಬಂಧವೇ ಮೂಲ ಅಡಿಪಾಯವಾಗಿದೆ ಎಂದು ಆರ್.ಪಿ.ಐ (ಅಂಬೇಡ್ಕರ್) ರಾಜ್ಯ ಸಂಯೋಜಕ ಮಹೇಶ ಗೋರನಾಳಕರ್ ತಿಳಿಸಿದ್ದಾರೆ.

1935ರ ಏಪ್ರಿಲ್ 1ರಂದು ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಯಾದ ದಿನದ ಅಂಗವಾಗಿ ಅವರು ಮಾತನಾಡಿದರು. ಅಂಬೇಡ್ಕರ್ ಅವರು ಲಂಡನ್ ಸ್ಕೂಲ್ ಆಫ್ ಇಕಾನೊಮಿಕ್ಸ್‌ನಲ್ಲಿ ಅರ್ಥಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿ ಪಡೆದ ಪ್ರಮುಖ ಅರ್ಥಶಾಸ್ತ್ರಜ್ಞರಾಗಿದ್ದರು ಎಂದು ಹೇಳಿದರು.

1925ರಲ್ಲಿ 'ರಾಯಲ್ ಕಮಿಷನ್ ಆನ್ ಇಂಡಿಯನ್ ಕರೆನ್ಸಿ ಅಂಡ್ ಫೈನಾನ್ಸ್'(ಹಿಲ್ಟನ್ ಯಂಗ್ ಆಯೋಗ) ಮುಂದೆ ಅಂಬೇಡ್ಕರ್ ಮಂಡಿಸಿದ "ದಿ ಪ್ರಾಬ್ಲಮ್ ಆಫ್ ದ ರೂಪಿ: ಇಟ್ಸ್ ಆರಿಜಿನ್ ಅಂಡ್ ಇಟ್ಸ್ ಸಲ್ಯೂಷನ್" ಎಂಬ ಸಂಶೋಧನಾ ಪ್ರಬಂಧವು ಭಾರತೀಯ ಕರೆನ್ಸಿ ವ್ಯವಸ್ಥೆಗೆ ಮಾರ್ಗದರ್ಶಕವಾಯಿತು. ಈ ಪ್ರಬಂಧವೇ 1935ರಲ್ಲಿ ಆರ್‌ಬಿಐ ಸ್ಥಾಪನೆಗೆ ಬುನಾದಿಯಾಗಿ ಪರಿಣಮಿಸಿತು ಎಂದು ತಿಳಿಸಿದರು.

ಹಿಲ್ಟನ್ ಯಂಗ್ ಆಯೋಗವು 1926ರಲ್ಲಿ ಅಂಬೇಡ್ಕರ್ ಅವರ ಆರ್ಥಿಕ ಚಿಂತನೆಗಳನ್ನು ಗಂಭೀರವಾಗಿ ಪರಿಗಣಿಸಿತ್ತು. ಅವರ ಆರ್ಥಿಕ ತತ್ವಗಳು ಮತ್ತು ಕರೆನ್ಸಿ ವ್ಯವಸ್ಥೆಯ ಮೇಲಿನ ಅಧ್ಯಯನವು ದೇಶದ ಕೇಂದ್ರ ಬ್ಯಾಂಕ್ ರೂಪುಗೊಳ್ಳಲು ಪ್ರಮುಖ ಕಾರಣವಾಯಿತು ಎಂದು ಹೇಳಿದರು.

ಆರ್‌ಬಿಐ ಸ್ಥಾಪನೆಯ ಹಿಂದಿನ "ಮೆದುಳು" ಡಾ. ಅಂಬೇಡ್ಕರ್ ಅವರದ್ದೇ ಆಗಿದೆ ಎಂದು ಗೋರನಾಳಕರ್ ಅಭಿಪ್ರಾಯಪಟ್ಟರು. ಅಂಬೇಡ್ಕರ್ ಅವರು ಸಂವಿಧಾನ ಶಿಲ್ಪಿ, ಪ್ರಜಾಪ್ರಭುತ್ವದ ಪಿತಾಮಹ, ಮಹಿಳಾ ವಿಮೋಚಕ ಹಾಗೂ ಸಮಾನತೆಯ ಹರಿಕಾರರಾಗಿ ದೇಶದ ಅಭಿವೃದ್ಧಿಗೆ ಅಮೂಲ್ಯ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.ಈ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿ ರಾಜ್ಯ ಉಪಾಧ್ಯಕ್ಷ ರಾಜಕುಮಾರ ಮೂಲಭಾರತಿ, ಬಿಎಸ್ಪಿ ಜಿಲ್ಲಾಧ್ಯಕ್ಷ ಕಪೀಲ್ ಗೊಡಬೋಲೆ, ಡಿ.ಎಸ್.ಎಸ್. ರಾಜ್ಯ ನಾಯಕ ರವಿಕುಮಾರ ವಾಘಮೊರೆ, ಹೋರಾಟಗಾರರಾದ ರಾಜಕುಮಾರ ಗೂನ್ನಳ್ಳಿ, ಅರುಣ ಪಟೇಲ್, ಸುರೇಶ ಜೊಜನಾಕರ್, ಮಲ್ಲಿಕಾರ್ಜುನ ಚಿಟ್ಟಾ, ರವಿ ಭೂಸಂಡೆ, ಜಗನಾಥ ಹೊನ್ನಾ, ಪ್ರಕಾಶ ರಾವಣ, ಸಂತೋಷ ಶಿಂದೆ, ರಾಜಕುಮಾರ ಡೊಂಗರೆ, ಮಹೇಶ ಭೋಲಾ, ಹರ್ಷಿತ್ ದಾಂಡೇಕರ್, ಜೈಭೀಮ್ ಶರ್ಮಾ, ರಮೇಶ್ ಜೈಧ್ವನಿ, ಸಂಜುಕುಮಾರ ಶೇರಿಕಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಡಿಗ್ಗಿ ಗ್ರಾಮದಲ್ಲಿ ಸಂಭ್ರಮದ ಅಕ್ಕ ಮಹಾದೇವಿ ಜಯಂತಿ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ,ಕಮಲನಗರ

ತಾಲೂಕಿನ ಡಿಗ್ಗಿ ಗ್ರಾಮದ ಸುಪ್ರಸಿದ್ಧ ಶ್ರೀ ಮಡಿವಾಳೇಶ್ವರ ದೇವಾಲಯದಲ್ಲಿ ಶಿವಶರಣೆ ಅಕ್ಕ ಮಹಾದೇವಿಯವರ ಜಯಂತಿಯನ್ನು ಅತ್ಯಂತ ಭಕ್ತಿ ಹಾಗೂ ಸಡಗರದಿಂದ ಆಚರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಗ್ರಾಮದ ಮಹಿಳಾ ತಂಡದವರಿಂದ ವಿಶೇಷ ಪೂಜೆ ಹಾಗೂ ಧಾರ್ಮಿಕ ವಿಧಿವಿಧಾನಗಳು ಜರುಗಿದವು. ಅಕ್ಕಮಹಾದೇವಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಶರಣೆಯ ಸ್ಮರಣೆ ಮಾಡಲಾಯಿತು. ಪ್ರಮುಖ ಆಕರ್ಷಣೆಯಾಗಿ ಮಹಿಳಾ ಮಂಡಳಿಯ ಸದಸ್ಯೆಯರು ಸಾಂಪ್ರದಾಯಿಕವಾಗಿ ತೊಟ್ಟಿಲು ಹಾಕಿ, ಭಕ್ತಿಪೂರ್ವಕವಾಗಿ ತೊಟ್ಟಿಲು ಪದಗಳನ್ನು ಹಾಡುವ ಮೂಲಕ ಅಕ್ಕನ ಜಯಂತಿಗೆ ವಿಶೇಷ ಮೆರುಗು ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಡಿವಾಳೇಶ್ವರ ದೇವಾಲಯ ಟ್ರಸ್ಟ್‌ನ ಅಧ್ಯಕ್ಷರಾದ ದೇವೇಂದ್ರ ಪಾಟೀಲ ಅವರು, "ಅಕ್ಕ ಮಹಾದೇವಿಯವರ ವಚನಗಳು ಇಂದಿನ ಸಮಾಜಕ್ಕೆ ದಾರಿದೀಪವಾಗಿವೆ. ಅವರ ವೈರಾಗ್ಯ ಮತ್ತು ಶರಣ ಸಂಸ್ಕೃತಿಯ ಅರಿವು ಪ್ರತಿಯೊಬ್ಬರಲ್ಲೂ ಜಾಗೃತವಾಗಬೇಕು" ಎಂದರು.

ನಂತರ ನೀಲಮ್ಮ ಬಿರಾದಾರ ಅವರು ಮಾತನಾಡಿ, ಮಹಿಳೆಯರು ಶರಣರ ಹಾದಿಯಲ್ಲಿ ನಡೆದು ಸಂಸ್ಕಾರಯುತ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದು ಕರೆ ನೀಡಿದರು.ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರು, ಮಹಿಳೆಯರು ಹಾಗೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



# ಆಲಿಕಲ್ಲು ಮಳೆಯಿಂದ ನಷ್ಟವಾದ ತೋಟಗಾರಿಕೆ ಬೆಳೆಗಳಿಗೆ ಪರಿಹಾರ ನೀಡಲಿ

ಇತ್ತೀಚಿನ ದಿನಗಳಲ್ಲಿ ಹಲವೆಡೆ ಸುರಿದ ಆಲಿಕಲ್ಲು ಮಳೆಯಿಂದ ತೋಟಗಾರಿಕೆ ಬೆಳೆಗಳು ಭಾರೀ ಪ್ರಮಾಣದಲ್ಲಿ ಹಾನಿಗೊಳಗಾಗಿವೆ. ಮಾವು, ದ್ರಾಕ್ಷಿ, ದಾಳಿಂಬೆ ಸೇರಿದಂತೆ ಹಲವು ತೋಟಗಾರಿಕೆ ಬೆಳೆಗಳು ನಾಶವಾಗಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ತಿಂಗಳುಗಳ ಕಾಲ ಶ್ರಮಪಟ್ಟು ಬೆಳೆದ ಬೆಳೆಗಳು ಕೆಲವೇ ನಿಮಿಷಗಳಲ್ಲಿ ಹಾಳಾಗಿರುವುದರಿಂದ ರೈತರಲ್ಲಿ ಆತಂಕ ಮತ್ತು ನಿರಾಶೆ ಮನೆ ಮಾಡಿದೆ.

ತೋಟಗಾರಿಕೆ ಬೆಳೆಗಳು ಹೆಚ್ಚಿನ ಖರ್ಚು ಮತ್ತು ಪರಿಶ್ರಮ ಬೇಡುವ ಬೆಳೆಗಳಾಗಿವೆ. ರಸಗೊಬ್ಬರ, ಔಷಧಿ, ನೀರಾವರಿ ಹಾಗೂ ಕಾರ್ಮಿಕ ವೆಚ್ಚವನ್ನು ಭರಿಸಿ ಬೆಳೆ ಬೆಳೆದ ರೈತರಿಗೆ ಈಗ ಭಾರೀ ನಷ್ಟ ಎದುರಾಗಿದೆ. ಈ ಪರಿಸ್ಥಿತಿಯಲ್ಲಿ ರೈತರಿಗೆ ಸರ್ಕಾರದಿಂದ ತಕ್ಷಣದ ನೆರವು ಅತ್ಯಂತ ಅಗತ್ಯವಾಗಿದೆ.

ಸಂಬಂಧಪಟ್ಟ ಅಧಿಕಾರಿಗಳು ತಕ್ಷಣವೇ ಹಾನಿ ಪರಿಶೀಲನೆ ನಡೆಸಿ ನಷ್ಟದ ವರದಿ ತಯಾರಿಸಬೇಕು. ಅದರ ಆಧಾರದ ಮೇಲೆ ಸರ್ಕಾರದಿಂದ ಸಮರ್ಪಕ ಪರಿಹಾರವನ್ನು ನೀಡಬೇಕು. ಪರಿಹಾರ ನೀಡುವಲ್ಲಿ ವಿಳಂಬವಾದರೆ ರೈತರು ಇನ್ನಷ್ಟು ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಇದೆ.

ರೈತರೇ ನಮ್ಮ ದೇಶದ ಬೆನ್ನೆಲುಬು. ಅವರು ಸಂಕಷ್ಟದಲ್ಲಿರುವ ಸಂದರ್ಭದಲ್ಲಿ ಸರ್ಕಾರ ಹಾಗೂ ಆಡಳಿತ ಯಂತ್ರ ರೈತರ ನೆರವಿಗೆ ಬರಬೇಕು. ಆಲಿಕಲ್ಲು ಮಳೆಯಿಂದ ಹಾನಿಗೊಂಡ ತೋಟಗಾರಿಕೆ ಬೆಳೆಗಳಿಗೆ ತಕ್ಷಣ ಪರಿಹಾರ ನೀಡಿ ರೈತರ ಬದುಕಿಗೆ ಆಶಾಕಿರಣವಾಗಬೇಕು ಎಂಬುದು ಜನರ ಆಗ್ರಹವಾಗಿದೆ.

# ಏ,5ಕ್ಕೆ ಶೀಲವಂತ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಮೆಂಟ್






• ಮಲ್ಲಮ್ಮ ನುಡಿ ವಾರ್ತೆ ಬೀದರ್

ನಾಕೌಟ್ ಕ್ರಿಕೆಟ್ ಟೂರ್ನಮೆಂಟ್ ಅನ್ನು ಏಪ್ರಿಲ್ 5 ರಂದು ನಗರದ ನೆಹರು ಸ್ಟೇಡಿಯಂನಲ್ಲಿ ಶೀಲವಂತ ಸೇವಾ ಸಮಿತಿ ವತಿಯಿಂದ ಏರ್ಪಡಿಸಲಾಗಿದೆ ಎಂದು ಸಮಿತಿಯ ಅಧ್ಯಕ್ಷ ನಾಗರಾಜ್ ಕರಕ್ಯಾಳ ಹಾಗೂ ಉಪಾಧ್ಯಕ್ಷ ಉಮೇಶ್ ಕಾಡವಾದ ತಿಳಿಸಿದ್ದಾರೆ.

ಈ ಟೂರ್ನಮೆಂಟ್ ಬೆಳಿಗ್ಗೆ 8ಗಂಟೆಗೆ ಆರಂಭವಾಗಿ ಸಂಜೆ 5:30ರವರೆಗೆ ಪಂದ್ಯಗಳು ನಡೆಯಲಿದ್ದು, ಬಳಿಕ ವಿಜೇತ ತಂಡಗಳಿಗೆ ಬಹುಮಾನ ವಿತರಣೆ ಕಾರ್ಯಕ್ರಮ ನಡೆಯಲಿದೆ.

ವಿಜೇತ ತಂಡಗಳಲ್ಲಿ ಪ್ರಥಮ ಸ್ಥಾನ ಪಡೆದ ತಂಡಕ್ಕೆ ₹15,000 ಹಾಗೂ ರನ್ನರ್‌ಅಪ್ ತಂಡಕ್ಕೆ ₹10,000 ನಗದು ಬಹುಮಾನ ನೀಡಲಾಗುತ್ತದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಸಮಾಜದ ಯುವಕರಲ್ಲಿ ಕ್ರೀಡಾ ಮನೋಭಾವ ಬೆಳೆಸುವುದು ಹಾಗೂ ಪರಸ್ಪರ ಒಗ್ಗಟ್ಟು ಹೆಚ್ಚಿಸುವ ಉದ್ದೇಶದಿಂದ ಟೂರ್ನಮೆಂಟ್ ಆಯೋಜಿಸಲಾಗಿದೆ. ಶೀಲವಂತ ಸಮಾಜದ ಯುವಕರು, ಸಮಾಜದ ಬಾಂಧವರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಟೂರ್ನಮೆಂಟ್ ಕ್ರೀಡಾಕೂಟ ಯಶಸ್ವಿಗೊಳಿಸಬೇಕು ಎಂದು ಸಮಿತಿಯ ಅಧ್ಯಕ್ಷ ನಾಗರಾಜ್ ಕರಕ್ಯಾಳ ಹಾಗೂ ಉಪಾಧ್ಯಕ್ಷ ಉಮೇಶ್ ಕಾಡವಾದ ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ,

# ಕಡಲೆ ಖರೀದಿ ಕೇಂದ್ರಕ್ಕೆ ಚಾಲನೆ ಕ್ವಿಂಟಾಲ್‌ಗೆ 5875 ದರ ನಿಗದಿ



• ಮಲ್ಲಮ್ಮ ನುಡಿ ವಾರ್ತೆ ಬೀದರ್

ತಾಲೂಕಿನ ಶಿವಣಿ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘ(ಪಿಕೆಪಿಎಸ್)ನಲ್ಲಿ ಸರಕಾರದ ಬೆಂಬಲ ಬೆಲೆ ಯೋಜನೆಯಡಿ ಕಡಲೆ ಖರೀದಿಗೆ ಕೇಂದ್ರಕ್ಕೆ ಚಾಲನೆ ನೀಡಲಾಯಿತು. ಪಿಕೆಪಿಎಸ್ ಅಧ್ಯಕ್ಷ ಶಿವಾಜಿ ಪಾಟೀಲ್ ಅವರು ತೂಕದ ಯಂತ್ರಕ್ಕೆ ಪೂಜೆ ಸಲ್ಲಿಸಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಇಲ್ಲಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ(ಪಿಕೆಪಿಎಸ್)ನಲ್ಲಿ ರೈತರ ಅನುಕೂಲಕ್ಕಾಗಿ ಕಡಲೆ ಖರೀದಿ ಕೇಂದ್ರ ಆರಂಭಿಸಲಾಗಿದೆ. ಕ್ವಿಂಟಲ್‌ಗೆ ಕಡಲೆಗೆ 5875 ದರ ನಿಗದಿ ಪಡಿಸಲಾಗಿದೆ. ಪ್ರತಿ ಎಕರೆಯಿಂದ 4 ಕ್ವಿಂಟಲ್ ಕಡಲೆ ಖರೀದಿ ಮಾಡಲಾಗುತ್ತಿದ್ದು, ಸುತ್ತಮುತ್ತಲಿನ ರೈತರು ಈ ಯೋಜನೆಯ ಲಾಭ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪಿಕೆಪಿಎಸ್ ಉಪಾಧ್ಯಕ್ಷ ರಾಜಕುಮಾರ ಮಡಿವಾಳ, ನಿರ್ದೇಶಕರಾದ ಬಾಬುರಾವ ಬೇಲೂರೆ, ವಿನೋದ ಭೋಸ್ಲೆ, ರಾಮರತನ ಭುಜಂಗೆ, ಲೋಕೇಶ ನೀಲಾ, ನರಸಿಂಗ ಮೇತ್ರೆ, ಕಾರ್ಯದರ್ಶಿ ರಮೇಶ ಕನಶೆಟ್ಟೆ ಸೇರಿದಂತೆ ಹಲವರು ಹಾಜರಿದ್ದರು.



ಬಸವಕಲ್ಯಾಣ:– ತಾಲೂಕಿನ ಇಲ್ಲಾಳ ಗ್ರಾಮದ ರೈತನಾದ ವಿಶ್ವನಾಥ ಏಳೂರೆ ಅವರಿಗೆ ಸೇರಿದ ಗಿಡದ ಕೆಳಗೆ ಕಟ್ಟಿದ ಒಂದು ಆಕಳು ಮತ್ತು ಕರು ಅವರ ಸ್ವಂತ ಹಿಪ್ಪರಗಾ ಘಾಟ ಹೊಲದಲ್ಲಿ ಗುರುವಾರ ರಾತ್ರಿ ಸಿಡಿಲಿಗೆ ಬಲಿಯಾಗಿ ಮರಣ ಹೊಂದಿದ್ದಾವೆ ಎಂದು ಹೊಲದ ಮಾಲಿಕರು ತಿಳಿಸಿದ್ದಾರೆ.



ಭಾಲ್ಕಿ:ಭಾಲ್ಕಿ ಪಟ್ಟಣದ ಉಪನ್ಯಾಸಕರ ಬಡಾವಣೆಯಲ್ಲಿರುವ ಹನುಮಾನ ಮಂದಿರದ ಆವರಣದಲ್ಲಿ ವಾಯುಪುತ್ರ ಹನುಮಂತನ ಜಯಂತಿ ಅಂಗವಾಗಿ ಭಕ್ತರಿಗಾಗಿ ಏರ್ಪಡಿಸಿದ ಪ್ರಸಾದ ವಿತರಣೆಯಲ್ಲಿ ಸಮಿತಿ ಅಧ್ಯಕ್ಷ ರಾಜಕುಮಾರ ಬಕ್ಕಾ ಪ್ರಮುಖರಾದ ಜೈರಾಜ ಪಾತ್ರೆ,ಕಲ್ಲಪ್ಪ ದಾನಾ , ಅಶೋಕ ಮಡ್ಡೆ,ಶರಣಪ್ಪ ಬಸನಾಳೆ,ಧರ್ಮಣ್ಣ ಮುಚಳಂಬೆ,ವಿಜಯಕುಮಾರ ಮರಕಲ್ಲೆ,ಅಶೋಕ ಬಾವುಗೆ,ಪಿ. ಆರ್.ಪಾಟೀಲ್,ಬಾಬುರಾವ,ಹುಲೆಪ್ಪ ಗೌಡಪನೋರ್,ಸಿದ್ರಾಮಯ್ಯ ಸ್ವಾಮಿ,ವಿಕಾಸ ಪಾಟೀಲ್,ಎಸ್. ಎಮ್.ಪಾಟೀಲ್,ಧನರಾಜ ಹುಡಗೆ,ವಿಜಯಕುಮಾರ ಹುನಸನಾಳೆ,ಸಂತೋಷ ಖಂಡಾಳೆ,ರಾಜಕುಮಾರ ಪಾರಶೆಟ್ಟೆ ,ಸೇರಿದಂತೆ ಅನೇಕರು ಸಕ್ರೀಯವಾಗಿ ಭಾಗವಹಿಸಿದ್ದರು.



ಬಸವಕಲ್ಯಾಣ :– ಮಾಜಿ ಸಚಿವರಾದ ರಾಜಶೇಖರ ಪಾಟೀಲ ಹುಮನಾಬಾದ ಅವರಿಗೆ ಜನ್ಮದಿನೋತ್ಸವ ನಿಮಿತ್ಯ ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ಹುಮನಾಬಾದ ಪಟ್ಟಣದಲ್ಲಿ ದಂಪತಿ ಸಮೇತ ಸತ್ಕರಿಸಿ ಆಶೀರ್ವದಿಸಿದರು. ಈ ಸಂದರ್ಭದಲ್ಲಿ ಎಂಎಲ್‌ಸಿಗಳಾದ ಚಂದ್ರಶೇಖರ ಪಾಟೀಲ, ಭೀಮರಾವ ಪಾಟೀಲ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

# ನಕಲಿ ಪತ್ರಕರ್ತರು ಯುಟ್ಯೂಬರ್ ಹಾವಳಿ ನಿಯಂತ್ರಿಸಿ



• ಮಲ್ಲಮ್ಮ ನುಡಿ ವಾರ್ತೆ,ಬೀದರ್

ಜಿಲ್ಲೆಯಲ್ಲಿ ನಕಲಿ ಪತ್ರಕರ್ತರು ಹಾಗೂ ಯುಟ್ಯೂಬರ್ ಗಳ ಹಾವಳಿ ಹೆಚ್ಚಾಗಿದ್ದು ನಿಜವಾದ ಪತ್ರಕರ್ತರ ಮೇಲೆ ಸಮಾಜ ಸಂಶಯ ಪಡುವಂತಾಗುತ್ತಿದೆ.

ಅದೇ ರೀತಿ ಜಿಲ್ಲೆಯಲ್ಲಿ ಹಣ ವಸೂಲಿ ಮಾಡುವ ನಕಲಿ ಪತ್ರಕರ್ತರು ಹಾಗೂ ಯುಟ್ಯೂಬರ್ ಗಳು ಓಡಾಡುತ್ತಿದ್ದು ಅಂಥಹವರಿಗೆ ಅಧಿಕಾರಿಗಳಾಗಲಿ ಅಥವಾ ಸಮಾಜವಾಗಲಿ ಮನ್ನಣೆ ನೀಡಬಾರದು ಎಂದು ಕಾರ್ಯ ನಿರತ ಪತ್ರಕರ್ತರ ಸಂಘದ ಜಿಲ್ಲಾ ಅಧ್ಯಕ್ಷ ಆನಂದ ದೇವಪ್ಪ ಅಗ್ರಹಿಸಿದ್ದಾರೆ.

ಈಗಾಗಲೇ ಹಲವು ಸಲ ನಮ್ಮ ಸಂಘ ಮನವಿ ಮಾಡಿ ಇಂತಹ ನಕಲಿ ಪತ್ರಕರ್ತರ ಹಾಗೂ ಯುಟ್ಯೂಬರ್ ಮೇಲೆ ಹಿಡಿತವಿರಲು ಅಗ್ರಹಿಸಿದೆ.

ಅದೇ ರೀತಿ ಜಿಲ್ಲೆಯಲ್ಲಿ ವಾಹನಗಳ ಮೇಲೆ ಪ್ರೆಸ್ ಎಂದು ಬರೆಸಿಕೊಂಡು ನಕಲಿ ಪತ್ರಕರ್ತರು ಓಡಾಡುತ್ತಿದ್ದು ಇವರನ್ನು ಕೂಡ ನಿಯಂತ್ರಣ ಮಾಡುವ ಅವಶ್ಯಕತೆ ಇದೆ.

ನಿನ್ನೆ ಬೀದರನಲ್ಲಿ ಪತ್ರಕರ್ತ ಎಂದು ಹೇಳಿಕೊಂಡು ಪೊಲೀಸ್ ಅಧಿಕಾರಿಗಳ ವಿರುದ್ಧ ನಡೆದ ಘಟನೆಯಲ್ಲಿ ಆ ವ್ಯಕ್ತಿ ನಮ್ಮ ಪತ್ರಕರ್ತರ ಸಂಘದ ಸದಸ್ಯತ್ವ ಹೊಂದಿಲ್ಲವೆಂದು ಆನಂದ ದೇವಪ್ಪಾ ಸ್ಪಷ್ಟ ಪಡಿಸಿದ್ದಾರೆ.

# ಹನುಮ ದೇವರ ದರ್ಶನ ಪಡೆದು ಕೃತಾರ್ಥರಾದ ಭಕ್ತರು



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ತಾಲ್ಲೂಕಿನ ಚಳಕಾಪೂರ ಗ್ರಾಮದ ಐತಿಹಾಸಿಕ ಹನುಮಾನ ದೇವಸ್ಥಾನದಲ್ಲಿ ಬುಧವಾರ ಹನುಮಾನ ಜಯಂತಿ ನಿಮಿತ್ತ ಬಹುಸಂಖ್ಯೆಯ ಭಕ್ತರು ದೇವಸ್ಥಾನಕ್ಕೆ ಆಗಮಿಸಿ ಹನುಮಾನ ದೇವರ ದರುಶನ ಪಡೆದು ಕೃತಾರ್ಥರಾದರು.

ರಾಜ್ಯದ ವಿವಿಧ ಜಿಲ್ಲೆಗಳು ಸೇರಿದಂತೆ ವಿವಿಧ ರಾಜ್ಯಗಳ ಭಕ್ತರು ನಸುಕಿನ ಜಾವದಿಂದಲೇ ದೇವಸ್ಥಾನದತ್ತ ಮುಖ ಮಾಡಿದ ದೃಶ್ಯ ಕಂಡು ಬಂತು.

ಬೆಳಿಗ್ಗೆ 6 ಗಂಟೆಗೆ ನಡೆದ ಕಾಕಡ ಆರತಿಯಲ್ಲಿ ಪಾಲ್ಗೊಂಡು ಧನ್ಯರಾದರು. ಇನ್ನು ಮಧ್ಯಾಹ್ನ 12 ಗಂಟೆಗೆ ನಡೆದ ಅಲಂಕಾರ ಪೂಜೆಯಲ್ಲಿಯೂ ಹೆಚ್ಚಿನ ಸಂಖ್ಯೆಯ ಭಕ್ತರು ಸರತಿ ಸಾಲಿನಲ್ಲಿ ಬಂದು ದರುಶನ ಪಡೆದರು.

ಸಂಜೆ ನಡೆದ ಭಜನೆ, ಕಿರ್ತನೆಯಲ್ಲಿ ಮಹಿಳೆಯರು, ಪುರುಷರು ಪಾಲ್ಗೊಂಡು ದೇವರ ನಾಮ ಸ್ಮರಣೆಯಲ್ಲಿ ತೊಡಗಿದ್ದರು.ಗುರುವಾರ ಬೆಳಿಗ್ಗೆ 6.11ಕ್ಕೆ ನಡೆಯಲಿರುವ ಹನುಮಾನ ದೇವರ ತೊಟ್ಟಿಲು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಹೆಚ್ಚಿನ

ಸಂಖ್ಯೆಯ ಭಕ್ತರು ಬುಧವಾರ ರಾತ್ರಿ ದೇವಸ್ಥಾನಕ್ಕೆ ಆಗಮಿಸಿ ದೇವಸ್ಥಾನದ ಆವರಣ, ಸಿದ್ಧಾರೂಢ ಮಠ ಸೇರಿದಂತೆ ವಿವಿಧೆಡೆ ವಾಸ್ತವ್ಯ ಮಾಡಿದರು.

# ಬೈಕ್,ಕಾರ್ ರ್‍ಯಾಲಿ ಭವ್ಯ ಮೆರವಣಿಗೆ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ



ಪಟ್ಟಣದ ಚನ್ನಬಸವಾಶ್ರಮದಲ್ಲಿ ಎ.20 ರಿಂದ ನಡೆಯುವ ವಿಶ್ವಗುರು ಬಸವಣ್ಣನವರ ಜಯಂತಿ, ವಚನ ಜಾತ್ರೆ–2026, ಡಾ.ಚನ್ನಬಸವ ಪಟ್ಟದ್ದೇವರ 27ನೇ ಸ್ಮರಣೋತ್ಸವ ಮತ್ತು ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಅಂಗವಾಗಿ ನಡೆಸುವ ಬೈಕ್ ಮತ್ತು ಕಾರ್ ರ್‍ಯಾಲಿ ಹಾಗೂ ಭವ್ಯ ಮೆರವಣಿಗೆಗೆ ಸರ್ವರ ಸಹಕಾರ ಅಗತ್ಯ ಎಂದು ಮೆರವಣಿಗೆ ಸಮಿತಿ ಅಧ್ಯಕ್ಷ ಯೋಗೇಶ ಅಷ್ಟೂರೆ ಹೇಳಿದರು.

ಪಟ್ಟಣದ ಗುರುಕೃಪಾ ಕಲ್ಯಾಣ ಮಂಟಪದಲ್ಲಿ ಬಸವ ಜಯಂತಿ ಅಂಗವಾಗಿ ಮೆರವಣಿಗೆ ಕುರಿತು ಗುರುವಾರ ಕರೆದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಮತ್ತು ಪೀಠಾಧಿಪತಿ ಗುರುಬಸವ

ಪಟ್ಟದ್ದೇವರು ಮಾರ್ಗದರ್ಶನದಂತೆ ಎಪ್ರೀಲ್ 18 ರಂದು ಮುಂಜಾಣೆ 10 ಗಂಟೆಗೆ ನಡೆಯುವ ಬೈಕ್ ಮತ್ತು ಕಾರ್ ರ್‍ಯಾಲಿ ಪಟ್ಟಣದ ಚನ್ನಬಸವಾಶ್ರಮದಿಂದ ಆರಂಭಗೊಂಡು ಪಟ್ಟಣದ ಪ್ರಮುಖ ವೃತ್ತಗಳು ಸೇರಿದಂತೆ ಹಳೇ ಭಾಲ್ಕಿಯ ವಿವಿಧ ಓಣಿಗಳ ಮೂಲಕ ಪುನ:ಚನ್ನಬಸವಾಶ್ರಮದಲ್ಲಿ ಸಮಾವೇಶಗೊಳ್ಳುವುದು.ಎ.20 ಕ್ಕೆ ಮದ್ಯಾಹ್ನ 3.00 ಗಂಟೆಗೆ ನಡೆಯುವ ಭವ್ಯ ಮೆರವಣಿಗೆ ಹಿರೇಮಠ

ಸಂಸ್ಥಾನದಿಂದ ಆರಂಭಗೊಂಡು ಪ್ರಮುಖ ಚೌಕ್‌ಗಳ ಮೂಲಕ ಚನ್ನಬಸವಾಶ್ರಮದಲ್ಲಿ ಕೊನೆಗೊಳ್ಳುವುದು. ಮೆರವಣಿಗೆಯಲ್ಲಿ ಎಲ್ಲರೂ ಬಿಳಿ ಸಮವಸ್ತ್ರ ಧರಿಸಿಕೊಂಡು ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ಶಿವು ಲೋಖಂಡೆ,ವಿಲಾಸ ಬಕ್ಕಾ,ಜಗದೀಶ ಖಂಡ್ರೆ,ಜೈರಾಜ ಪಾತ್ರೆ,ಪ್ರಕಾಶ ಮಾಶಟ್ಟೆ,ಡಾ.ಅಮೀತ ಅಷ್ಟೂರೆ, ಚಂದ್ರಶೇಖರ ವಂಕೆ,ಉಮಾಕಾಂತ ವಾರದ,ಚಂದ್ರಶೇಖರ ಎಮ್ಮೆ, ಚಂದ್ರಕಾಂತ ಬಿರಾದಾರ,ಕಪಿಲ ಕಲ್ಯಾಣೆ,ಸಂಗಮೇಶ ವಾಲೆ,ಡಾ.ಶಶಿಕಾಂತ ಭೂರೆ,ಡಾ.ಸಜ್ಜಲ ಬಳತೆ,ಅಮರ ಜಲ್ದೆ,ಅನೀಲ ಲೋಖಂಡೆ,ಕೈಲಾಸ ಮಡ್ಡೆ,ನಾಗೇಶ ತಮಾಸಂಗೆ,ಟಿಂಕು ರಾಜಭವನ,ಮಹಾಂತೇಶ ದಶಮುಖೆ,ಪ್ರಭು ಡಿಗ್ಗೆ,ಪ್ರಸಣ್ಣೆ,ಪ್ರಶಾಂತ ಕಾಕನಾಳೆ,ಸಂದೀಪ ಅಷ್ಟೂರೆ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಹನುಮಾನ ದೇವರ ತೊಟ್ಟಿಲು ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ತಾಲ್ಲೂಕಿನ ಚಳಕಾಪೂರ ಗ್ರಾಮದ ಐತಿಹಾಸಿಕ ಹನುಮಾನ ದೇವಸ್ಥಾನದಲ್ಲಿ ಗುರುವಾರ ಹನುಮಾನ ಜಯಂತಿ ನಿಮಿತ್ತ ಅಪಾರ ಭಕ್ತ ಸಮೂಹದ ಮಧ್ಯೆ ಹನುಮಾನ ದೇವರ ತೊಟ್ಟಿಲು ಕಾರ್ಯಕ್ರಮ ನೆರವೇರಿತು.

ತೊಟ್ಟಿಲು ಕಾರ್ಯಕ್ರಮ ಸಂಪನ್ನಗೊಳ್ಳುವ ಸಮಯದಲ್ಲಿ ಜೈ ಸಿಯಾರಾಮ, ಜೈ ಶ್ರೀ ರಾಮ, ಜೈ ಹನುಮಾನ ಘೋಷ ವಾಕ್ಯಗಳು ಮುಗಿಲು ಮುಟ್ಟಿದ್ದವು.

ರಾಜ್ಯದ ವಿವಿಧ ಜಿಲ್ಲೆಗಳು ಸೇರಿದಂತೆ ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳ ಭಕ್ತರು ಬುಧವಾರ ರಾತ್ರಿಯೇ ದೇವಸ್ಥಾನಕ್ಕೆ ಆಗಮಿಸಿ ದೇವಸ್ಥಾನದ ಆವರಣ, ಸಿದ್ಧಾರೂಢ ಮಠ ಸೇರಿದಂತೆ ವಿವಿಧೆಡೆ ವಾಸ್ತವ್ಯ ಮಾಡಿದ್ದರು.

ಹನುಮಾನ ಜಯಂತಿ, ತೊಟ್ಟಿಲು ಕಾರ್ಯಕ್ರಮ ಅಂಗವಾಗಿ ಬಹುಸಂಖ್ಯೆಯ ಭಕ್ತರು ದೇವಸ್ಥಾನಕ್ಕೆ ಆಗಮಿಸಿ ಸರತಿ ಸಾಲಿನಲ್ಲಿ ಬಂದು ಹನುಮಾನ ದೇವರ ದರುಶನ ಪಡೆದು ಕೃತಾರ್ಥರಾದರು.

ಭಕ್ತರಿಗಾಗಿ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

### ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ

# ಕ್ಷೇತ್ರದ ಜನರಿಗೆ ಮೂಲಭೂತ ಸೌಕರ್ಯ ಒದಗಿಸುವುದೇ ನನ್ನ ಗುರಿ

• ಮಲ್ಲಮ್ಮ ನುಡಿ ವಾರ್ತೆ, ಕುರುಗೋಡು

ಕಂಪ್ಲಿಕ್ಷೇತ್ರದ ಜನತೆಗೆ ಕುಡಿಯುವನೀರು, ಸಿಸಿ, ಚರಂಡಿರಸ್ತೆನಿರ್ಮಾಣ, ಬಡವರಿಗೆ ನಿವೇಶನ, ಆಸ್ಪತ್ರೆಸೌಕರ್ಯ, ಸೇರಿದಂತೆ ಇತರೆ ಮೂಲಭೂತ ಸೌಕರ್ಯಗಳನ್ನುಒದಗಿಸಿಕೊಡುವುದೇ ನನ್ನಮೊದಲ ಗುರಿ ಎಂದು ಕಂಪ್ಲಿಕ್ಷೇತ್ರದ ಶಾಸಕ ಜೆಎನ್.ಗಣೇಶ ಹೇಳಿದರು.

ಅವರು ಸಮೀಪದ ರ್‍ವಾಯಿ ಗ್ರಾಮದಲ್ಲಿ 2025–26ನೇ ಸಾಲಿನ ಕೆಕೆಆರ್‌ಡಿಬಿ ಮೈಕ್ರೋಯೋಜನೆ ಅಡಿಯಲ್ಲಿರೂ.3ಕೋಟಿವೆಚ್ಚದಿಂದನಿರ್ಮಾಣವಾಗುವ ರಸ್ತೆಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಕಂಪ್ಲಿಕ್ಷೇತ್ರದ ಜನರು ಯಾವುದೇ ಸಮಸ್ಯೆ ಇಲ್ಲದಂತೆ ಅವರ ಏಳಿಗೆಗಾಗಿ ಹಗಲು–ಇರುಳು ಶ್ರಮಿಸಿ, ಸರ್ಕಾರ ಮಟ್ಟದಲ್ಲಿ ಹೋರಾಟ ಮಾಡಿ ಕೋಟ್ಯಾಂತರ ರೂಗಳ ಅನುದಾನಬಿಡುಗಡೆಗೊಳಿಸಿ ಕ್ಷೇತ್ರದ ಅಭಿವೃದ್ದಿಗೆ ಶ್ರಮಿಸುತ್ತೇನೆ. ಆದ್ದರಿಂದ ಕಂಪ್ಲಕ್ಷೇತ್ರದ ಜನತೆಯ ಋಣ ತೀರಿಸಲು, ನಾನು ಕಂಪ್ಲಿಕ್ಷೇತ್ರವನ್ನು ಅಭಿವೃದ್ಧಿಗೊಳಿಸಿ ಜಿಲ್ಲೆಗೆ ಮಾದರಿ ಕ್ಷೇತ್ರವಾಗಿ ಮಾಡಲು ಸಂಕಲ್ಪತೊಟ್ಟಿದ್ದೇನೆ. ಇದಕ್ಕೆ ನಿಮ್ಮೆಲ್ಲರ ಸಹಕಾರ ಅತ್ಯಗತ್ಯ ಎಂದು ನುಡಿದರು.

ಈ ಸಂದರ್ಭದಲ್ಲಿ ಕೆಆರ್‌ಐಡಿಎಲ್ ಎಇಇ ಅಧಿಕಾರಿ ಸದಾನಂದಕುಮಾರ್, ಲೋಕೋಪಯೋಗಿ ಇಲಾಖೆಯ ಇಂಜನಿಯರ್ ನವೀನ್, ರ್‍ವಾಯಿ ಗ್ರಾಮದ ಜನಪ್ರತಿನಿಧಿಗಳು, ಸೇರಿದಂತೆ ಇತರೆ ರ್‍ವಾಯಿ–ಗುತ್ತಿಗನೂರು ಗ್ರಾಮದ ಊರಿನ ಮುಖಂಡರು ಇದ್ದರು.

ಇದೇ ಮಾದರಿಯಲ್ಲಿ ಗುತ್ತಿಗನೂರು ಗ್ರಾಮದಲ್ಲಿ ಕೆಕೆಅರ್‌ಡಿಬಿ ಮೈಕ್ರೋ ಯೋಜನೆ ಅಡಿಯಲ್ಲಿ ರೂ.3ಕೋಟಿ ವೆಚ್ಚದಿಂದ ನಿರ್ಮಾಣ ವಾಗುವ ರಸ್ತೆಅಭಿವೃದ್ಧಿ ಕಾಮಗಾರಿಗೆ ಕಂಪ್ಲಿಕ್ಷೇತ್ರದ ಶಾಸಕ ಜೆಎನ್.ಗಣೇಶ ಅವರು ಭೂಮಿಪೂಜೆ ನೆರವೇರಿಸಿದರು.



# ಗಾಂಧಿ ನಗರ: ಶಿಲುಬೆ ಹಾದಿಯ ಸ್ಮರಣೆ



• ಮಲ್ಲಮ್ಮ ನುಡಿ ವಾರ್ತೆ, ಚಿಟಗುಪ್ಪ

ತಾಲ್ಲೂಕಿನ ತಾಳಮಡಗಿ ವ್ಯಾಪ್ತಿಯ ಗಾಂಧಿನಗರದ ಸಂತ ಲಾರೆನ್ಸ್ ಚರ್ಚ್ ಆವರಣದಲ್ಲಿ ಶುಕ್ರವಾರ ಮಧ್ಯಾಹ್ನ ಯೇಸುವಿನ ಶಿಲುಬೆಯ ಹಾದಿಯ 14 ಸ್ಥಳಗಳ ಅಣಕು ಪ್ರದರ್ಶನ ನಡೆಯಿತು. ಭಕ್ತಿ ಶ್ರದ್ಧೆಗಳಿಂದ ನೆರೆದಿದ್ದ ಕ್ರೈಸ್ತ ಸಮುದಾಯದವರು, ಎರಡು ಸಾವಿರ ವರ್ಷಗಳ ಹಿಂದೆ ಯೇಸು ಅನುಭವಿಸಿದ ಯಾತನೆಯನ್ನು ಸ್ಮರಿಸಿ ಗುಡ್ ಫ್ರೈಡ್ ಡೇ ಆಚರಣೆ ಮಾಡಿದರು. ಕಲ್ವಾರಿ ಬೆಟ್ಟದಲ್ಲಿ ಯೇಸುವನ್ನು ಶಿಲುಬೆಗೆ ಜಡಿಯುವ ಹಾಗೂ ಪ್ರಾಣ ತ್ಯಾಗ ಮಾಡುವ ಮುನ್ನ ಯೇಸು, ತನ್ನನ್ನು ಶಿಲುಬೆಗೆ ಏರಿಸಿದವರನ್ನು ಕ್ಷಮಿಸುವಂತೆ ದೇವರಲ್ಲಿ ಕೋರುವ ರೂಪಕ ಸಂದೇಶ ಭಕ್ತರನ್ನು ಭಾವುಕರನ್ನಾಗಿ ಮಾಡಿತ್ತು. ಶಿಲೆಬೆ ಆರಂಭದಲ್ಲಿ ಆಶೀರ್ವಚನ ನೀಡಿದ ಫಾದರ್ ಜಾರ್ಜ್, ಯೇಸು ಸತ್ಯವನ್ನು ಸಾರಿದರು, ಎಲ್ಲರನ್ನೂ ಪ್ರೀತಿಸಿ, ಸೇವೆ ಮಾಡಿ ಎಂದರು. ಆದರೆ ಅದನ್ನು ಜನ ಸೇಡು ಮತ್ತು ಹಿಂಸೆಯನ್ನು ಪ್ರತಿಪಾದಿಸಿದರು. ಯೇಸುವನ್ನು ಹಿಂಸಿಸಿ ಕೊಂದರು. ಆದರೂ ಯೇಸು ಶಾಂತಿಗಾಗಿ ಪ್ರಾರ್ಥಿಸಿದರು. ಅವರ ಪರಿಶುದ್ಧ ಮರಣದಿಂದಲೇ ಸಮುದಾಯ ಒಳ್ಳೆಯ ಹಾದಿಯಲ್ಲಿ ಜೀವಿಸಲು ಸಾಧ್ಯವಾಯಿತು ಎಂದು ಹೇಳಿದರು. ಈ ಸಂದರ್ಭದಲ್ಲಿ ಸಿಸ್ಟರ್ ಸ್ಟೇಲ್ಲ, ಸಿಸ್ಟೆರ್ ರೋಸ್ಲಿನ್ ಪೌಲ್, ವಿನೋದ ಸೀತಾಳಗೇರಾ, ಸಾಗರ ಗಾಂಧಿನಗರ, ಬಾಬು ತೆಲಗುರ, ಮಾಣಿಕ ತೆಲಗುರ ಸೇರಿದಂತೆ ಕ್ರೈಸ್ತ ಧರ್ಮಾನುಯಾಯಿಗಳು ಭಾಗವಹಿಸಿದ್ದರು.

# ಅಗ್ನಿಪಥ: ಆನ್‌ಲೈನ್ ನೋಂದಣಿ ವಿಸ್ತರಣೆ

• ಮಲ್ಲಮ್ಮ ನುಡಿ ವಾರ್ತೆ ,ಬೀದರ

ಆರ್ಮಿ ರಿಕ್ರೂಟಿಂಗ್ ಆಫೀಸ್ ಬೆಳಗಾವಿ ಹಾಗೂ ಬೆಂಗಳೂರು ಹೆಡ್‌ಕ್ವಾಟರ್ಸ್ ರಿಕ್ರೂಟಿಂಗ್ ಜೋನ್ ಬೆಂಗಳೂರು ಇವರ ಸಹಯೋಗದಲ್ಲಿ ಅಗ್ನಿಪಥ ನೇಮಕಾತಿಗಾಗಿ ಆನ್‌ಲೈನ್ ಮೂಲಕ ನೋಂದಣಿ ಪ್ರಕ್ರಿಯೆಯನ್ನು ದಿನಾಂಕ: 10–04–2026 ರವರೆಗೆ ವಿಸ್ತರಿಸಲಾಗಿದೆ.

ಬೆಳಗಾವಿ, ಬೀದರ, ಕಲಬುರಗಿ, ಕೊಪ್ಪಳ, ರಾಯಚೂರು ಹಾಗೂ ಯಾದಗಿರಿ ಜಿಲ್ಲೆಯಗಳ ಪುರುಷ ಅಭ್ಯರ್ಥಿಗಳು ಜಾಯಿನ್ ಇಂಡಿಯನ್ ಆರ್ಮಿ www.joinindianarmy.nic.in ವೆಬ್‌ಸೈಟ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ದಿನಾಂಕ: 13–02–2026 ರಂದು ಬೆಳಗಾವಿ ಆರ್ಮಿ ರಿಕ್ರೂಟಿಂಗ್ ಆಫೀಸ್‌ದಿಂದ ಹೊರಡಿಸಿದ ಅಧಿಸೂಚನೆ ವೀಕ್ಷಿಸಬಹುದಾಗಿದೆ ಎಂದು ಎಂದು ಬೆಳಗಾವಿ ಆರ್ಮಿ ರಿಕ್ರೂಟಿಂಗ್ ಕಚೇರಿಯ ಡೈರೆಕ್ಟರ್ ರಿಕ್ರೂಟಿಂಗ್ ಕರ್ನಲ್ ಎ.ಕೆ.ಉಪಾಧ್ಯಾಯ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಜ್ಯ ಮಟ್ಟದ ಮುಕ್ತ ರಸಪ್ರಶ್ನೆ ಸ್ಪರ್ಧೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕು ಆಡಳಿತ,ಪೊಲೀಸ್ ಇಲಾಖೆ,ಶಿಕ್ಷಣ ಇಲಾಖೆಗಳು ಸ್ಥಳೀಯ ದಲಿತ,ಕನ್ನಡ ಪರ ಹಾಗೂ ಇತರೆ ಸಂಘಟನೆಗಳ ಸಹಯೋಗದಲ್ಲಿ ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ನಿಮಿತ್ಯ ಡಾ.ಬಿ.ಆರ್.ಅಂಬೇಡ್ಕರ್ ಅವರ ಬದುಕು ಮತ್ತು ಬರಹ ಕುರಿತು ರಾಜ್ಯ ಮಟ್ಟದ ಮುಕ್ತ ರಸಪ್ರಶ್ನೆ ಸ್ಪರ್ಧೆ ಆಯೋಜಿಸಿದೆ. ಸ್ಪರ್ಧೆಯು ಏಪ್ರೀಲ್ 12 ರಂದು ಬೆಳಿಗ್ಗೆ 9 ಗಂಟೆಗೆ ಕುಷ್ಟಗಿ ಪಟ್ಟಣದ ಕ್ರೈಸ್ಟ್ ದಿ ಕಿಂಗ್ ಶಾಲೆಯಲ್ಲಿ ನಡೆಯಲಿದೆ.

ಈ ರಸಪ್ರಶ್ನೆ ಸ್ಪರ್ಧೆಯಲ್ಲಿ ಯಾವುದೇ ವಯೋಮಿತಿ, ವಿದ್ಯಾರ್ಹತೆಯ ನಿರ್ಬಂಧ ಇರುವುದಿಲ್ಲ, ಎಲ್ಲ ಆಸಕ್ತರಿಗೂ ಮುಕ್ತ ಅವಕಾಶವಿರುತ್ತದೆ. ರಾಜ್ಯದ ಯಾವುದೇ ಜಿಲ್ಲೆಗಳ ಅಭ್ಯರ್ಥಿಗಳು ತಮ್ಮ ಆಧಾರ್ ಕಾರ್ಡಿನ ನಕಲು ಪ್ರತಿ ಒದಗಿಸಿ ಭಾಗವಹಿಸಬಹುದು.ಮೊದಲ ಸುತ್ತಿನಲ್ಲಿ 50 ಅಂಕಗಳ ಬಹುಆಯ್ಕೆ ಮಾದರಿಯ ಸುತ್ತು, ಈ ಸುತ್ತಿನಲ್ಲಿ ಅತಿಹೆಚ್ಚು ಅಂಕಗಳಿಸಿದ ಮೊದಲ 12 ಅಭ್ಯರ್ಥಿಗಳು ಎರಡನೇ ಸುತ್ತಿಗೆ ಆಯ್ಕೆಯಾಗುತ್ತಾರೆ.

ಈ 12 ಅಭ್ಯರ್ಥಿಗಳನ್ನು 6 ತಂಡಗಳಾಗಿ ವಿಂಗಡಿಸಿ ಎರಡನೇ ಹಂತದ ಮೌಖಿಕ ಸುತ್ತು ನಡೆಸಲಾಗುವುದು.ವಿಜೇತ ತಂಡಗಳಿಗೆ 50 ಸಾವಿರ ರೂ. ಪ್ರಥಮ ಬಹುಮಾನ, 30 ಸಾವಿರ ರೂ.ದ್ವಿತೀಯ ಬಹುಮಾನ ಹಾಗೂ 20 ಸಾವಿರ ರೂ.ಗಳ ತೃತೀಯ ಬಹುಮಾನ ನೀಡಲಾಗುವುದು.ಭಾಗವಹಿಸಿದ ಎಲ್ಲರಿಗೂ ಪ್ರಮಾಣ ಪತ್ರ ನೀಡಲಾಗುವುದು.

ರಸಪ್ರಶ್ನೆ ಸ್ಪರ್ಧೆಯ ಪಠ್ಯ : ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನ ಮತ್ತು ಶಿಕ್ಷಣ, ರಾಷ್ಟ್ರೀಯ ಹೋರಾಟ,ಭಾರತ ಸಂವಿಧಾನ ರಚನೆ, ಶಿಕ್ಷಣ, ಸಂಘಟನೆ, ಹೋರಾಟ ತತ್ವಗಳು, ಚಿಂತನೆಗಳು, ಮೀಸಲಾತಿ, ಮಹಿಳಾ ಹಕ್ಕುಗಳು, ಜಾಗತಿಕ ಮಹಾನಾಯಕರಾಗಿ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಪ್ರಸ್ತುತ ದಿನಮಾನ.ಆಸಕ್ತರು ಏಪ್ರಿಲ್ 11 ರ ಒಳಗಾಗಿ ಈ ಮೊಬೈಲ್ ನಂಬರುಗಳ ಮೂಲಕ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ಎಸ್.ಎಸ್. ತೆಮಿನಾಳ–9740421421, ಶ್ರೀನಿವಾಸ ದೇಸಾಯಿ–9845808941, ಸುರೇಶ್ ಅಂಕೋಲಿ–9901797951, ಅಮರೇಗೌಡ–9902180043 ಅಥವಾ ಭರಮಪ್ಪ ಪಿ–9731799080 ಮೂಲಕ ಸಂಪರ್ಕಿಸಬಹುದು ಎಂದು ಕುಷ್ಟಗಿ ವೃತ್ತದ ಪೊಲೀಸ್ ಇನ್ಸಪೆಕ್ಟರ್ ವಿಶ್ವನಾಥ ಹಿರೇಗೌಡರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಾಯಕ ಹತ್ಯೆ ಯತ್ನ ಪ್ರಕರಣ ಹೆಚ್ಚುತ್ತಲೇ ಇದೆ ಆರೋಪಿಗಳ ಬಂಧನ



• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ

ಅಂಕೋಲಾದಲ್ಲಿ ಇತ್ತೀಚಿಗೆ ನಡೆದ ಕಾಂಗ್ರೆಸ್ ಮುಖಂಡ ಗೋಪಾಲಕೃಷ್ಣ ನಾಯಕ ಹತ್ಯೆಗೆ ಸಂಬಂಧಿಸಿದಂತೆ ಇಬ್ಬರು ಮುಖ್ಯ ಆರೋಪಿಗಳನ್ನು ಪೊಲೀಸರು ಪಂಜಾಬ್‌ನಲ್ಲಿ ಬಂಧಿಸಲು ಯಶಸ್ವಿಯಾಗಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೊಳಗಾದ ಆರೋಪಿತರ ಸಂಖ್ಯೆ 11 ಕ್ಕೆ ಏರಿಕೆಯಾಗಿದೆ.

ಹಲ್ಲೆಗೆ ಒಳಗಾಗಿ ನಂತರ ಅವರಿಂದ ತಪ್ಪಿಸಿಕೊಂಡು ಪ್ರಾಣ ಉಳಿಸಿಕೊಂಡಿದ್ದ ಗೋಪಾಲಕೃಷ್ಣ ನಾಯಕ ಸ್ಥಳೀಯ ಕೆಲವರ ವಿರುದ್ಧ ಆರೋಪ ಮಾಡುತ್ತಿದ್ದರು. ಅದರಂತೆಯೇ ಈಗ ತಾಲೂಕಿನಲ್ಲಿ ಕೆಲವರು ನಾಪತ್ತೆಯಾಗಿದ್ದಾರೆ ಎಂಬ ಚರ್ಚೆಗಳು ಶುರುವಾಗಿವೆ.

2013 ರಲ್ಲಿ ಸಹಕಾರಿ ಧುರೀಣ ಆರ್.ಎನ್.ನಾಯಕ ಅವರ ಹತ್ಯೆಯಿಂದಾಗಿ ಅಂಕೋಲಾ ಕಂಗೆಟ್ಟಿತ್ತು. ಇವರನ್ನು ಅವರ ಬ್ಯಾಂಕ್ ಕೆಳಗಡೆಯೇ ಗುಂಡಿನ ದಾಳಿ ಮಾಡಿ ಹತ್ಯೆಗೈದಿದ್ದರು. ಇದು ಅಂಕೋಲಾದಲ್ಲಿ ನಡೆದ ಮೊದಲ ಪ್ರಕರಣವಾಗಿತ್ತು. ಹಾಗೇ ಸಹಜವಾಗಿ ಹಲವರ ಆತಂಕಕ್ಕೆ ಕಾರಣವಾಗಿತ್ತು. ಆದರೆ ಈಗ ಕಾಂಗ್ರೆಸ್ ಮುಖಂಡ ಗೋಪಾಲಕೃಷ್ಣನಾಯಕ ಅವರ ಹತ್ಯೆಗೆ ಯಾರೋ ಸುಪಾರಿ ನೀಡಿ ಹತ್ಯೆಗೆ ಮುಂದಾಗಿದ್ದರು ಎನ್ನಲಾಗಿದೆ. ಆದರೆ ಕೂದಲೆಳೆಯ ಅಂತರದಿಂದ ಅವರು ಸಾವಿನ ದಡದಿಂದ ತಪ್ಪಿಸಿಕೊಂಡಿದ್ದರು. ಈ ಘಟನೆಯು ಕೂಡ ಅಂಕೋಲಾ ಜನತೆ ಆತಂಕಗೊಳ್ಳುವಂತೆ ಮಾಡಿತ್ತು.

ಈ ಹಿಂದೆ ಸಣ್ಣಪುಟ್ಟ ಜಗಳ, ಹಲ್ಲೆ ಇವೆಲ್ಲವು ಸ್ಥಳೀಯರ ಒಬ್ಬರ ಮೇಲೆ ಒಬ್ಬರು ಮಾಡುತ್ತಿದ್ದರು. ಆದರೆ ಇದು ಸ್ಥಳೀಯವಾಗಿಯೇ ಮುಗಿದುಹೋಗುತ್ತಿತ್ತು. ಆದರೆ ಆರ್. ಎನ್.ನಾಯಕ ಅವರ ಹತ್ಯೆಯನ್ನು ಮಾಡಿದವರು ಹೊರರಾಜ್ಯದವರು. ಹಾಗೇ ಗೋಪಾಲಕೃಷ್ಣ ನಾಯಕ ಅವರ

ಹತ್ಯೆಗೆಯತ್ನಿಸಿಬಂಧನಕ್ಕೊಳಗಾದವರು ಕೂಡ ಹೊರರಾಜ್ಯದವರಾಗಿದ್ದಾರೆ. ಹೀಗಾಗಿ ಸಹಜವಾಗಿಯೇ ಅಂಕೋಲಾದಲ್ಲಿ ಕೆಲವರ ಭಯಕ್ಕೆ ಕಾರಣವಾಗಿದೆ. ಒಟ್ಟಿನಲ್ಲಿ ಪೊಲೀಸರು ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

# ದೇಶಭಕ್ತಿಯ ಬುನಾದಿಯನ್ನು ಹಾಕುತ್ತಿರುವ ಸಂಸ್ಕಾರ ಪಬ್ಲಿಕ್ ಶಾಲೆ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಸಂಸ್ಕಾರ ಪಬ್ಲಿಕ್ ಶಾಲೆಯು ದೇಶಭಕ್ತಿಯ ಬುನಾದಿಯನ್ನು ಹಾಕುತ್ತಿದೆ ಎಂದು ಯೋಗ ತಜ್ಞ ಗುರುನಾಥ ರಾಜಗೀರಾ ಅಭಿಪ್ರಾಯಪ್ಟರು. ಪಟ್ಟಣದ ಸಂಸ್ಕಾರ ಪಬ್ಲಿಕ್ ಶಾಲೆಯಲ್ಲಿ ನಡೆದ ವಾಷಿಕೋತ್ಸವ ಮತ್ತು ಸಂಸ್ಕಾರ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಮೌಲ್ಯಯುತ ಶಿಕ್ಷಣಕ್ಕೆ ಒತ್ತು ನೀಡುವುದರಜೊತೆಗೆ ಸ್ಪರ್ಧಾ ಜಗತ್ತಿನ ಶಿಕ್ಷಣಕ್ಕೆ ಬಹುದೊಡ್ಡ ಕೊಡುಗೆ ನೀಡುತ್ತಿರುವ ಸಂಸ್ಕಾರ ಪಬ್ಲಿಕ್ ಶಾಲೆಯು ಮಕ್ಕಳಲ್ಲಿ ದೇಶ ಭಕ್ತಿಯನ್ನು ಹುಟ್ಟುಹಾಕುವುದರೊಂದಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿರುವುದು ಪ್ರಶಂಶನೀಯ ಕಾರ್ಯವಾಗಿದೆ ಎಂದು ಹೇಳಿದರು.

ಮೆಹಕರ ಪಿಎಸ್ಐ ಸಿದ್ದವೀರರೆಡ್ಡಿ ಮಾತನಾಡಿ, ದೇಶದ ಭವಿಷ್ಯ ಕಟ್ಟುವ ಮಕ್ಕಳಿಗೆ ಮೌಲ್ಯಯುತ ಶಿಕ್ಷಣ ಅತ್ಯವಶ್ಯಕವಾಗಿದೆ. ಪಾಲಕರು ತಮ್ಮ ಕರ್ತವ್ಯ ನಿಭಾಯಿಸುವುದರ ಜೊತೆಗೆ ಮಕ್ಕಳಲ್ಲಿ ಉತ್ತಮ ಸಂಸ್ಕಾರ ನೀಡುವ ಕಾರ್ಯ ಮಾಡಬೆಕು.

ಸಾಮಾಜಿಕ ಜಾಲತಾಣದ ಯುಗದಲ್ಲಿ ಮಕ್ಕಳು ತಮ್ಮ ಬದುಕನ್ನು

ಹುಡುಕುತ್ತಿದ್ದಾರೆ. ಆದರೆ ನಿಜವಾದ ಬದುಕಿರುವುಉ ಪುಸ್ತಕದಲ್ಲಿ ಅನ್ನುವಂತಹದನ್ನು ಶಿಕ್ಷಕರು ತೋರಿಸಿಕೊಡಬೇಕಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ಈಶ್ವರ ರುಮ್ಮಾ, ಸಂಸ್ಕಾರ ಶಿಕ್ಷಣ ಸಂಸ್ಥೆಯು ಉಳಿದ ಶಿಕ್ಷಣ ಸಂಸ್ಥೆಗಳಿಗಿಂತಲೂ ಭಿನ್ನವಾದ ಕಾರ್ಯನಿರ್ವಹಿಸಲು ಪ್ರಯತ್ನಿಸುತ್ತಿದೆ. ಈ ಶಿಕ್ಷಣ ಸಂಸ್ಥೆಯಲ್ಲಿ ಅಭ್ಯಾಸ ಮಾಡುವ ಮಕ್ಕಳು ಸರ್ವಾಂಗೀಣ ವಿಕಾಸವನ್ನು ಗುರಿಯಾಗಿಸಿಕೊಂಡು ಮಕ್ಕಳನ್ನು ಎಲ್ಲಾ ರಂಗದಲ್ಲಿಯೂ ಅಭಿವೃದ್ಧಿ ಪಡಿಸುವ ಕಾರ್ಯ ಮಾಡಲಾಗುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಮುಖರಾದ ಅಮರ ಹಲಮಂಡಗೆ, ಅರವಿಂದ ಕುಲಕರ್ಣಿ, ಶಿವಕುಮಾರ ಕೇರು–ರೆ, ದತ್ತು ಪಾಂಡ್ರೆ, ತಂದ್ರಕಾಂತ ತಳವಾಡೆ, ಲಕ್ಷ್ಮೀ ದೇಶಮುಖ, ಲಕ್ಷ್ಮಿ ಪುರಿ ಉಪಸ್ಥಿತರಿದ್ದರು.

ಚಂದ್ರಕಾಂತ ಸ್ವಾಗತಿಸಿದರು. ಲಕ್ಷ್ಮಿ ದೇಶಮುಖ ನಿರೂಪಿಸಿದರು. ನ್ಯಾಯವಾದಿ ಶಿವಕುಮಾರ ವಂದಿಸಿದರು.



# ಸಂತೋಷ್‌ಗೆ ಕಶ್ಯಪ್‌ಗೆ ಮುಖ್ಯಮಂತ್ರಿ ಪದಕ



• ಮಲ್ಲಮ್ಮ ನುಡಿ ವಾರ್ತೆ , ಹುಣಸೂರು

ಬೆಂಗಳೂರು ಕೋರಮಂಗಲದ ಪೆರೇಡ್ ಕೆ ಎಸ್ ಆರ್ ಪಿ ಮೈದಾನದಲ್ಲಿ ಹುಣಸೂರ ಎರಡು ವರುಷಗಳಿಂದ ನಗರದ ಪೊಲೀಸ್ ಠಾಣೆಯಲ್ಲಿ ಸಿಪಿಐ ಅಧಿಕಾರ ಸ್ವೀಕರಿಸಿದ ಸಂತೋಷ್ ಕಶ್ಯಪ್ ರವರಿಗೆ 25_26.ನೇ ಸಾಲಿನಲ್ಲಿ ಮುಖ್ಯ ಮಂತ್ರಿಗಳ ಸಿದ್ದರಾಮಯ್ಯ ಹಾಗೂ ಗೃಹ ಮಂತ್ರಿ ಡಾ ಜಿ ಪರಮೇಶ್ವರ್ ಚಿನ್ನದ ಪದಕ್ಕೆ ಪ್ರಧಾನ ಮಾಡಿದರೂ

ಈ ಹಿಂದೆ ಚಾಮರಾಜನಗರ ಹನೂರು ಹಾಗೂ ರಾಮಪುರದಲ್ಲಿ ದಕ್ಷ ಅಧಿಕಾರಿಯಾಗಿ ಸಿಪಿಐ ವೃತ್ತಿಯನ್ನು ಪರಿಣಾಮಕಾರಿಯಾಗಿ ಕಾರ್ಯಗೈದ ಇವರು, ಎರಡು ವರುಷಗಳ ಹಿಂದೆ ಎರಡು ಕೊಲೆಮಾಡಿದ್ದ ಆರೋಪಿಗಳಗೆ ಕಠಿಣಬಶಿಕ್ಷೆ ಕೊಡಿಸುವಲ್ಲಿ ಯಶಸ್ವಿಯಾಗಿದ್ದರು. ಹಾಗೆ ಪೋಕ್ಸೋ ಅಡಿಯಲ್ಲಿ ಅತ್ಯಾಚಾರಕ್ಕೆ ತುತ್ತಾಗಿದ್ದ ಒಂದು ಹೆಣ್ಣು ಮಗುವಿಗೆ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಇಬ್ಬರು ಆರೋಪಿಗಳಿಗೆ ಜೀವಾವಧಿ ಶಿಕ್ಷೆಗೆ ಪಾತ್ರರಾಗಿ. ಗಮನಸೆಳದಿದ್ದರು.

ಅದೇ ರೀತಿ ಎರಡು ವರ್ಷಗಳಿಂದ ನಗರದ ಠಾಣೆ, ಬಿಳಿಕೆರೆ ಠಾಣೆಯ ಉಸ್ತುವಾರಿ, ಈಗ ಗ್ರಾಮಾಂತರ ಠಾಣೆಯ ಉಸ್ತಯವಾರಿಯನ್ನು ವ್ಯವಸ್ಥಿತವಾಗಿ ಕರ್ತವ್ಯನಿರ್ವಹಣೆ ಮಾಡುವ ಮೂಲಕ ಜನಮಣ್ಣಣೆಗೆ ಪಾತ್ರರಾಗಿದ್ದು, ಮುಖ್ಯಮಂತ್ರಿಗಳ ಸಿದ್ದರಾಮಯ್ಯ ಹಾಗೂ ಗೃಹ ಮಂತ್ರಿ ಡಾ. ಜಿ ಪರಮೇಶ್ವರ್ ಚಿನ್ನದ ಪದಕ್ಕೆ ಸಂತೋಷ್ ಕಶ್ಯಪ್ ಅವರಿಗೆ ಅಭಿನಂದನೆಗೆ ಪಾತ್ರರಾಗಿದ್ದಾರೆ.

# ಕ್ರೈಸ್ತ ಧರ್ಮದವರಿಂದ ಗುಡ್ ಫ್ರೈಡೆ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಕ್ರೈಸ್ತ ಬಾಂಧವರು ಶುಕ್ರವಾರ ಯೇಸುವಿನ ಸ್ಮರಣೆ ಮೂಲಕ ಶುಭ ಶುಕ್ರವಾರ (ಗುಡ್ ಫ್ರೈಡೇ) ಆಚರಿಸಿದರುಸಿದರು.

ಪಟ್ಟಣದ ಚರ್ಚ್‌ನಲ್ಲಿ ಸಮಸ್ತ ಕ್ರೈಸ್ತ ಬಾಂಧವರು ವಿಶೇಷ ಪ್ರಾರ್ಥನೆ, ಶಿಲುಬೆಯ ಆರಾಧನೆ ಮಾಡಿದರು. ಚರ್ಚಿನಿಂದ ಪ್ರಾರಂಭಗೊಂಡ ಮೆರವಣಿಗೆ ಪಟ್ಟಣದ ಹೊರವಲಯದಲ್ಲಿರುವ ಚಿನ್ನಪ್ಪನ ಗುಡ್ಡಕ್ಕೆ ತೆರಳುವಾಗ ದಾರಿ ಉದ್ದಕ್ಕೂ ಕ್ರಿಸ್ತನ ವಿಶೇಷ ಪ್ರಾರ್ಥನೆ, ಶಿಲುಬೆಯ ಹಾದಿ, ಶಿಲುಬೆಯ ಆರಾಧನೆ ಮತ್ತಿತರ ಕಾರ್ಯಕ್ರಮಗಳು ಜರುಗಿದವು.

ಯೇಸು ಕ್ರಿಸ್ತರಿಗೆ ಶಿಲುಬೆಯ ಮರಣ ಶಿಕ್ಷೆ ವಿಧಿಸಿದ ಘಟನಾವಳಿಗೆ ಸಂಬಂಧಿಸಿದ 'ಶಿಲುಬೆಯ ಹಾದಿ' ಪ್ರಮುಖ ಕಾರ್ಯಕ್ರಮ ಸಾರ್ವಜನಿಕರು ವೀಕ್ಷಿಸಿದರು.

ಕಾರ್ಯಕ್ರಮದಲ್ಲಿ ನೂರಾರು ಕ್ರೈಸ್ತ ಬಾಂಧವರು ಉಪಸ್ಥಿತರಿದ್ದರು.

# ಜನಗಣತಿ ತರಬೇತಿ ಕಾರ್ಯಾಗಾರ

• ಮಲ್ಲಮ್ಮ ನುಡಿ ವಾರ್ತೆ ಮುದಗಲ್



ಪಟ್ಟಣದ ಆರ್ ಸಿ ಮಿಷನ ಶಾಲೆಯಲ್ಲಿ ಪುರಸಭೆ ಮತ್ತು ತಾಲೂಕು ಆಡಳಿತ ವತಿಯಿಂದ ಆಯೋಜಿಸಿದ್ದ ಭಾರತ ಜನಗಣತಿ 2007ರ ಅಂಗವಾಗಿ ಗಣತಿ–ದಾರರಿಗೆ ಹಾಗೂ ಮೇಲ್ವಿಚಾರಕರಿಗೆ ಮೊದಲನೇ ಹಂತದ ಜನಗಣತಿ ತರಬೇತಿ ಕಾರ್ಯಗಾರ ಶುಕ್ರವಾರ ಜರುಗಿತು.

ಲಿಂಗಸಗೂರು ತಹಶೀಲ್ದಾರ್ ಸತ್ಯಮ್ಮ ದೇವಿ ಜನಗಣತಿ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು ದೇಶವು ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿದೆ.

ಪ್ರತಿ 10 ವರ್ಷಗಳಿಗೊಮ್ಮೆ ಜನಗಣತಿ ಮಾಡಲಾಗುತ್ತದೆ. ಈ ಹಿಂದೆ 2011 ರಲ್ಲಿ ಜನಗಣತಿ ಮಾಡಲಾಗಿದೆ. ಮಧ್ಯದಲ್ಲಿ ಕೋವಿಡ್ ಸಂದರ್ಭದವಿದ್ದ ಪರಿಣಾಮ, ಈಗ ಮತ್ತೆ 15 ವರ್ಷಗಳ ಬಳಿಕ ಜನಗಣತಿ ಆರಂಭವಾಗುತ್ತಿದೆ. ಗಣತಿ ಎಂಬುದು ಸರ್ಕಾರದ ಒಂದು ಚಟುವಟಿಕೆಯಲ್ಲ, ದೇಶದ ಸಮಗ್ರ ಅಭಿವೃದ್ಧಿಗೆ ಕಡ್ಡಾಯವಾಗಿ ಬೇಕಾಗಿರುವುದು ಅಂಕಿ ಅಂಶಗಳ ಅವಶ್ಯಕತೆ ಇದೆ. ಈ ಬಾರಿಯ ಗಣತಿ ಡಿಜಿಟಲ್ ಆಗಿರುತ್ತದೆ. ಪ್ರತಿಯೊಬ್ಬ ಗಣಿತಿ–ದಾರರು ಮತ್ತು ಮೇಲ್ವಿಚಾರಕರು ಶ್ರಮವಹಿಸಿ ನಿಷ್ಠೆಯಿಂದ ಗಣತಿ ಮಾಡಬೇಕು. ವರದಿಯನ್ನು ಆಧರಿಸಿ ಸಾರ್ವಜನಿಕರಿಗೆ ಉತ್ತಮ ಸೌಲಭ್ಯಗಳು ನೀಡಲು ಅನುಕೂಲವಾಗುತ್ತದೆ. ಸಾರ್ವಜನಿಕರು ತಮ್ಮ ಮೊಬೈಲ್ಗಳಲ್ಲಿ ಗಣತಿ ಮಾಡಿಕೊಳ್ಳಬಹುದು. ಗಣತಿ ಮಾಡುವುದು ಡಿಜಿಟಲ್ ವ್ಯವಸ್ಥೆ ಇರುವುದರಿಂದ ಗಣಿತಿದಾರರು, ಮೇಲ್ವಿಚಾರಕರು ಯಾವುದೇ ಸಂದರ್ಭದಲ್ಲಿ ತಮ್ಮ ಮೊಬೈಲ್ ಗಳನ್ನು ಕಳೆದುಕೊಳ್ಳಬಾರದು ಎಂದು ತಿಳಿಸಿದರು. ಪುರಸಭೆ ಮುಖ್ಯಾಧಿಕಾರಿ ಪ್ರವೀಣ ಕುಮಾರ ಬೋಗಾರ, ಉಪ ತಹಸಿಲ್ದಾರ ತುಜರಾಮ ಸಿಂಗ, ಸೇರಿದಂತೆ ಮಾಸ್ಟರ್ ಟ್ರೈನಿಸ್ ಸೇರಿದಂತೆ ಮುದುಗಲ್ ಹೋಬಳಿ ಗ್ರಾಮ ಲೆಕ್ಕಾಧಿಕಾರಿಗಳು, ಗ್ರಾಮ ಸಹಾಯಕರು ಉಪಸ್ಥಿತರಿದ್ದರು.

# ರಸ್ತೆ ಸರಿಪಡಿಸಲು ಮನವಿ



• ಮಲ್ಲಮ್ಮ ನುಡಿ ವಾರ್ತೆ ಪಿರಿಯಾಪಟ್ಟಣ

ತಾಲೂಕಿನ ತಾತನಹಳ್ಳಿ ಗ್ರಾಮದಿಂದ ಸತ್ಯಗಾಲ ಗ್ರಾಮದ ಮುಖ್ಯ ರಸ್ತೆಯ ಮಾರ್ಗ ಮಧ್ಯೆ ಆಯ್ದು ಹೋಗಿರುವ ದೊಡ್ಡಮ್ಮನ ದೇವಸ್ಥಾನಕ್ಕೆ ಓಡಾಡುವ ರಸ್ತೆಯನ್ನು ಸರಿಪಡಿಸುವಂತೆ ಗ್ರಾಮಸ್ಥರು ಮನವಿ ಮಾಡಿಕೊಂಡಿದ್ದಾರೆ.

ಹುಣಸೆ ಕುಪ್ಪೆ ಗ್ರಾಮದ ಶ್ರೀದೊಡ್ಡಮ್ಮನ ದೇವಸ್ಥಾನಕ್ಕೆ ಹೋರಾಡುವ ಸತ್ಯಗಾಲ ಕಾವಲು ಸ ನಂ1ರಲ್ಲಿ ಹಾಯ್ದು ಹೋಗಿರುವ ಈ ರಸ್ತೆಯು ಮಳೆಗಾಲದಲ್ಲಿ ಯಾವುದೇ ರೀತಿಯ ವಾಹನದಲ್ಲಿ ಓಡಾಡಲು ತೊಂದರೆ ಆಗಿದ್ದು ರಸ್ತೆ ಭಾರಿ ಹದಗೆಟ್ಟಿರುವುದಾಗಿ ತಿಳಿಸಿದ್ದಾರೆ.

ಈ ರಸ್ತೆಯಲ್ಲಿ ಕನಿಷ್ಠ 10 ಮನೆಗಳ ಜನರು ಹಾಗೂ ಹಲವಾರು ಗ್ರಾಮಸ್ಥರು ಹೊಲಗಳಿಗೆ ಹಾಗೂ ದೇವಸ್ಥಾನಕ್ಕೆ ಓಡಾಡಬೇಕಾಗಿದೆ ಜೊತೆಗೆ ಜನ ಜಾನುವಾರುಗಳು ನಿತ್ಯವು ಕೃಷಿ ಚಟುವಟಿಕೆಗಳಿಗೆ ಹೆಚ್ಚಾಗಿ ಬಳಕೆ ಆಗುತ್ತಿರುವುದರಿಂದ ಪಶು ಸಂಗೋಪನ ಹಾಗೂ ರೇಷ್ಮೆ ಸಚಿವರಾದ ಕೆ ವೆಂಕಟೇಶ್ ರವರು ಗಮನಹರಿಸಿ ಈ ರಸ್ತೆಯನ್ನು ಸರಿಪಡಿಸಿ ಕೊಡಬೇಕೆಂದು ಇಲ್ಲಿನ ವಾಸಿ ಶುಭಾಷ್ ಮನವಿ ಮಾಡಿಕೊಂಡಿದ್ದಾರೆ.

# ಸಾವಿರಾರು ಭಕ್ತರ ಮಧ್ಯೆ ಕೋಟಿ ಬಸವೇಶ್ವರರ ಅದ್ದೂರಿ ರಥೋತ್ಸವ: ಅಭಿನವ ಮಹಾಂತ ಶ್ರೀ ಚಾಲನೆ





> ಗಮನಸೆಳೆದಮದ್ದುಸುಡುವ ಪ್ರದರ್ಶನ
> ಭಕ್ತರುಮದ್ದುಸುಡುವಪ್ರದರ್ಶನ ನಡೆಸುವುದು ಕಾರ್ತ್ಯಕ್ರಮ ಆಕರ್ಷಣೀಯಕೇಂದ್ರಬಿಂದು.ರಥೋತ್ಸವಕ್ಕೂ ಮುನ್ನ ದೇವಸ್ಥಾನದ ಆವರಣದಲ್ಲಿ ಮದ್ದು ಸುಡಲಾಗುತ್ತದೆ. ಸಾವಿರಾರು ಯುವಕರು ಇದನ್ನು ಕಣ್ಣುಂಬಿಸಿಕೊಂಡು ಖುಷಿ ಪಟ್ಟರು.

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಶಹಾಪುರ ತಾಲೂಕಿನ ಚಟ್ನಳ್ಳಿ ಗ್ರಾಮದಲ್ಲಿ ಶ್ರೀ ಕೋಟಿ ಬಸವೇಶ್ವರರ ರಥೋತ್ಸವ ಸಂಭ್ರಮದಿಂದ ಜರುಗಿತು. ಗುರುವಾರ ಸಂಜೆ 6:30ಕ್ಕೆ ರಥಕ್ಕೆ ಶ್ರೀ ಅಭಿನವ ಮಹಾಂತ ಶಿವಾಚಾರ್ಯರು ದೋರನಹಳ್ಳಿ ಹಿರೇಮಠ ಅವರು ಚಾಲನೆ ನೀಡಿದರು. ಜಾತ್ರೆ ನಿಮಿತ್ತ ದೇವಸ್ಥಾನದ ಆವರಣ ಭಕ್ತರಿಂದ ಗಿಜಿಗುಡುತ್ತಿತ್ತು. ಸುತ್ತಮುತ್ತಲಿನ ಸಾವಿರಾರು ಭಕ್ತ ಸಮೂಹದ ಮಧ್ಯೆ ನಡೆದ ರಥೋತ್ಸವ ಆರಂಭಗೊಳ್ಳುತ್ತಿದ್ದಂತೆ ಕೋಟಿ ಬಸವೇಶ್ವರ ಮಹಾರಾಜಕೀ ಜೈ ಎಂಬ ಜೈ ಘೋಷಗಳು ಮೊಳಗಿದವು. ಭಕ್ತರು ರಥದ ಮೇಲೆ ಕಾರಿಕಾ, ಉತ್ತತ್ತಿ, ಬಾಳೆಹಣ್ಣು ಎಸೆದು ಕೃತಾರ್ಥರಾದರು. ದೋರನಹಳ್ಳಿ ಹಿರೇಮಠದ ಪೀಠಾಧಿಪತಿ ಶ್ರೀಶ್ರೀ ಷ.ಬ್ರ. ಅಭಿನವ ಮಹಾಂತ ಶಿವಾಚಾರ್ಯರ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮ ಜರುಗಿದವು. ಬೆಳಗ್ಗೆ ಶ್ರೀ ಕೋಟಿ ಬಸವೇಶ್ವರ ದೇವಸ್ಥಾನದಲ್ಲಿ ಶ್ರೀ ಕೋಟಿ ಬಸವೇಶ್ವರರ ಗದ್ದುಗೆಗೆ ರುದ್ರಾಭಿಷೇಕ, ವಿಶೇಷ ಪೂಜೆ ನಡೆಯಿತು. ಸಂಜೆ ಪುರುವಂತಿಕೆ ಸೇವೆ ದೇವಸ್ಥಾನದಲ್ಲಿ ತನಾರತಿ ಉತ್ಸವ ನಡೆಯಿತು. ಕಳೆದ 11 ದಿನದಿಂದ ಪ್ರತಿನಿತ್ಯ ರಾತ್ರಿ 8ಕ್ಕೆ ದೋರನಹಳ್ಳಿಯ ಗುಡ್ಡದ ಶ್ರೀ ಮಹಾಂತೇಶ್ವರ ಪುರಾಣ ಪ್ರವಚನ ಮತ್ತು ದಾಸೋಹ ನಡೆದಿದ್ದು, ಬುಧವಾರ ರಾತ್ರಿ ದೇವಸ್ಥಾನದಲ್ಲಿ ವಿವಿಧ ಮಠಾಧೀಶರಿಂದ ಧರ್ಮಸಭೆ ನಡೆಯಿತು.ಜಾತ್ರೆಯಲ್ಲಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರು.

# ಠಾಣಗುಂದಿಯಲ್ಲಿ ಹನುಮ ಜಯಂತಿ

ಯಾದಗಿರಿ ತಾಲೂಕಿನ ಠಾಣಗುಂದಿ ತಾಂಡಾ (ವಿಶ್ವಾಸಪೂರ) ಹನುಮಾನ್ ಜಯಂತಿ ದಿನದಂದು 17ನೇ ವರ್ಷ ಭವ್ಯ ರಥೋತ್ಸವವು ಅತಿ ವಿಜೃಂಭಣೆಯಿಂದ ನೆರವೇರಿತು. ಹನುಮಾನ್ ಜಯಂತಿಯ ಪ್ರಯುಕ್ತ ನಡೆದ ಈ ಜಾತ್ರಾ ಮಹೋತ್ಸವದಲ್ಲಿ ಸಾವಿರಾರು ಭಕ್ತರ ಜೊತೆಗೆ ಭಕ್ತಿಪೂರ್ವಕವಾಗಿ ನಡೆಯಿತು.ಶ್ರೀ ಹನುಮಾನ್ ಮಂದಿರದಲ್ಲಿ ಹನುಮಾನ್ ಜಯಂತಿಯನ್ನು ಭಕ್ತಿ ಭಾವದಿಂದ ಆಚರಿಸುವುದರೊಂದಿಗೆ ಅಂದು ಬೆಳಗ್ಗೆ ಹನುಮಾನ್ ಜಯಂತಿಯ ನಿಮಿತ್ತ, ಹನುಮಾನ್ ತೊಟ್ಟಿಲೋತ್ಸವವು ವಿಶೇಷ ವಾಗಿ ಜರುಗಿತು. ಪ್ರಾರ್ಥನೆ, ಪೂಜೆ ಮತ್ತು ಹೋಮ್ ಹವನಗಳಲ್ಲಿ ಭಕ್ತರು ಪಾಲ್ಗೊಂಡಿದ್ದರು ಅದನ್ನು ಅನುಸರಿಸಿದ ನಂತರ, ದೇವಸ್ಥಾನಕ್ಕೆ ಆಗಮಿಸಿ ದೇವರ ದರ್ಶನ ಪಡೆದ ಭಕ್ತರು ನಂತರ ಅನ್ನಸಂತರ್ಪಣೆಯ ಚಾಲನೆ ನೀಡಿದರು.

ಸಂಜೆ ಗದ್ದಿಗೆಯಿಂದ ದೇವಸ್ಥಾನದ ವರೆಗೆ ನಂದಿಕೋಲ ಕುಣಿತ, ಪಲ್ಲಕ್ಕಿ ಉತ್ಸವ, ಡೊಳ್ಳು, ಬಾಜಾ, ಬಜಂತ್ರಿ, ಹಲಿಗೆ ಬ್ಯಾಂಡ್ ಹಾಗೂ ವಿವಿಧ ಕಲಾ ತಂಡಗಳೊಂದಿಗೆ ಭವ್ಯ ರಥೋತ್ಸವ ಸಾಯಂಕಾಲ 6:30ಕ್ಕೆ, 17ನೇ ರಥೋತ್ಸವಕ್ಕೆ ಸಾವಿರಾರು ಭಕ್ತರ ಜೈ ಘೋಷಗಳ ಮಧ್ಯೆ ರಥೋತ್ಸವ ನಡೆಯಿತು. ಭಕ್ತರು ರಥಕ್ಕೆ ಖಾರಿಕ ನಾರ ಬಾಳೆಹಣ್ಣು ಎಸೆಣಟಿಜಜಜುಟಿಜಜಯುವ ಮೂಲಕ ಭಕ್ತಿ ಮೆರೆದರು.ಈ ರಥೋತ್ಸವ ನಂತರ ಧಾರ್ಮಿಕ ಸಭೆಯಲ್ಲಿ ಪರಮ ಪೂಜ್ಯ ರೆಡ್ಡಿ ಪೂಜಾರಿ ದಿವ್ಯ ಸಾನಿಧ್ಯ, ವಹಿಸಿದ್ದರು.





ಶ್ರೀ ಗೋಪಾ ಪೂಜಾರಿ, ಶರಣಪ್ಪ ಪೂಜಾರಿ ಠಾಣಗುಂದಿ ಗೋವಿಂದ ಪೂಜಾರಿ, ಉಮೇಶ ಕೆ. ಮುದ್ನಾಳ, ಮಹೇಶರೆಡ್ಡಿ ಮುದ್ನಾಳ, ಸುರೇಶ ಬವಂತಪೂರ, ಲಕ್ಷ್ಮಣ ಪವಾರ, ಮಂಗಳೂರು, ಭೋಜು, ಶರಣಪ್ಪ, ಖೇಮಸಿಂಗ್, ಕುಮಾರ, ಪವನ, ಮೋತಿಲಾಲ, ರಾಜು ಕೆ.ಇಬಿ. ರವಿ, ಪಾಂಡು, ಗೋಪಾಲ, ಶಿವಾಜಿ, ಸೇರಿದಂತೆ ಸುತ್ತಮುತ್ತಲಿನ ಭಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

# ಹನುಮನ ಜಯಂತಿ ಪೂಜೆ ಕಾರ್ಯಕ್ರಮದಲ್ಲಿ ಶಾಸಕ ಚನ್ನಾರೆಡ್ಡಿ ತುನ್ನೂರ ಭಾಗಿ

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ನಗರದ ಚಿತ್ತಾಪೂರ ರಸ್ತೆಯಲ್ಲಿರುವ ಆಂಜನೇಯ ದೇವಸ್ಥಾನದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಬೆಳಿಗ್ಗೆ ವಿಶೇಷ ಪೂಜೆ ಕಾರ್ಯಕ್ರಮ ಆಯೋಜಿಸಲಾಯಿತು. ಈ ವಿಶೇಷ ಪೂಜೆ ಕಾರ್ಯಕ್ರಮಕ್ಕೆ ಸ್ಥಳೀಯ ಶಾಸಕರಾದ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಅವರು ಭಾಗಿಯಾಗಿ ಪೂಜೆ ಸಲ್ಲಿಸಿದರು. ನಂತರ ಹರ ಹರ ಮಹಾದೇವ ಟ್ರಸ್ಟಿಂದ ಶಾಸಕರಿಗೆ ಸನ್ಮಾನಿಸಲಾಯಿತು

ಇದೇ ಸಂಧರ್ಬದಲ್ಲಿ ರಾಜಶೇಖರಗೌಡ ಚಾಮನಹಳ್ಳಿ ಸಾಮಾಜಿಕ ಹೋರಾಟಗಾರ ಉಮೇಶ ಕೆ ಮುದ್ನಾಳ ನಾಗೇಂದ್ರಗೌಡ ಹತ್ತಿಕುಣಿ. ಚಂದ್ರಶೇಖರ ತಂಬಾಕೆ, ಚನ್ನಬಸಪ್ಪ ಯರಗೋಳ, ದೇವಣ್ಣಗೌಡ ಬಲ್ಲಬಾದಿ, ಶರಣಗೌಡ ಹಂಚನಾಳ, ರಾಮು ರಾಠೋಡ, ನಾಗೇಂದ್ರಪ್ಪ ಯಾದಗಿರಿ, ಈರಣ್ಣಗೌಡ ಹಳ್ಳಳ್ಳಿ, ಶರಣು ರಾಪೂರ, ಮಲ್ಲಣ್ಣಗೌಡ ಮಾಲಿ ಪಾಟೀಲ್, ಜಾಮಣ್ಣ ಅಣಬಿ, ನಾನಾಗೌಡ ಚಿಂಚೋಳಿ, ಅಯ್ಯಣ್ಣಗೌಡ ಕ್ಯಾಸಪನಳ್ಳಿ, ಮತ್ತು ಅನೇಕ ರಾಜಕೀಯ ಮುಖಂಡರು ಮತ್ತು ಭಕ್ತಾಧಿಗಳು ಉಪಸ್ಥಿತರಿದ್ದರು.

# ೩೦ಲಕ್ಷ ಬೆಲೆಬಾಳುವ ಶೆಡ್‌ಗೆ ಬೆಂಕಿ: ಪಿಎಸ್‌ಐ ತನಿಖೆ

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಜಿಲ್ಲೆಯ ಅಬ್ಬೆತುಮಕೂರು ಗ್ರಾಮದ ಸರ್ವೆ ನಂಬರ 205 ವಿಸ್ತೀರ್ಣ 15 ಎಕರೆ 14 ಗುಂಟೆ ಜಮೀನಿನ ಮಾಲಿಕರಾದ ಶಂಶುದ್ದಿನ ತಂದೆ ಅಬ್ದುಲ್ ಸಮದ ಖಾದ್ರಿ ಸಾಕಿನ ಶಹಾಬಾದ, ಎನ್ನುವ ವ್ಯಕ್ತಿ ತೆಲಂಗಾಣ ಮೂಲದ ಗೋದುರಿ ಸೂರ್ಯ ರೋಶನ್ ರಾಜು ತಂದೆ ಗೋದುರಿ ಗೋಪಲ ಕೃಷ್ಣ ರಾಜು ಎನ್ನುವ ವ್ಯಕ್ತಿಗೆ 2019 ರಲ್ಲಿ ಮಾರಾಟ ಮಾಡಿರುತ್ತಾನೆ. ಇದಕ್ಕೆ ಸಂಬಂಧಿಸಿದ ಹನ್ನೊಂದು ಜನರನ್ನು ಒಪ್ಪಿಗೆ ಸಾಕ್ಷಿ ಪಡೆದು ನೊಂದಣಿಯಾಗಿರುತ್ತದೆ. ಸದರಿ ಜಮೀನಿನಲ್ಲಿ ಹೈಟೆಕ್ ಶೆಡ್ ನಿರ್ಮಿಸಿಕೊಂಡಿದ್ದು, ಅಲ್ಲೆ ವಾಸವಾಗಿದ್ದು ಆಗಾಗ ತೆಲಂಗಾಣಕ್ಕೆ ಹೋಗಿಬರುತ್ತಿದ್ದರು.ಅದೇ ಹೆಸರಿನ ಶಂಶುದ್ದಿನ ತಂದೆ ಅಬ್ದುಲ್ ಸಮದ ಖಾದ್ರಿ ಸಾಕಿನ ದಬೀರ ಕಾಲೋನಿ ಯಾದಗರಿ ಮೂಲದ ವ್ಯಕ್ತಿ ಸದರಿ ಜಮೀನಿನ ಪಹಣಿಯಲ್ಲಿರುವ ವ್ಯಕ್ತಿ ನಾನೆ ಇದ್ದೆನೆ ಎಂದು ಖರಿಧಿದಾರರಿಗೆ ವರ್ಗಾವಣೆ (ಮುಟೇಷನ್) ಆಗದಂತೆ ತಕರಾರು ಅರ್ಜಿ ಸಲ್ಲಿಸಿರುತ್ತಾನೆ. ಸದರಿ ತಕರಾರು ಅರ್ಜಿ ವಿಚಾರಣೆ ಮಾಡಿದ ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ಭಾಗವಹಿಸಿ ವಿನಾಕಾರಣ ಸಮಯ ತಳ್ಳಿ ವಿಚಾರಣೆ ಮುಗಿಸದೇ ಹೈಕೋರ್ಟ ಅಂಗಳಕ್ಕೆ ತಳ್ಳಿರುತ್ತಾರೆ. ಇಂದಿಗೂ ಹೈಕೋರ್ಟನಲ್ಲಿ ಪ್ರಕರಣ ನಡೆದಿರುತ್ತದೆ. ಇದೆ ಸಮಯದಲ್ಲಿ ಖರಿಧಿದಾರ ಶೆಡ್ ನಲ್ಲಿ ಇಲ್ಲದನ್ನು ನೋಡಿ ನಕಲಿ ಶಂಶುದ್ದಿನ ಎನ್ನುವ ವ್ಯಕ್ತಿ ಅಕ್ರಮ ಕೂಟ ಕಟ್ಟಿಕೊಂಡು ದಿನಾಂಕ 31–03–2026 ರಂದು ರಾತ್ರಿ ವೇಳೆ ಸದರಿ ಶೆಡ್‌ಗೆ ಬೆಂಕಿ ಹಚ್ಚಿ ಸುಟ್ಟಿರುತ್ತಾರೆ. 30ಲಕ್ಷಕ್ಕೂ ಅಧಿಕ ಬೆಲೆಬಾಳುವ ಎಲ್ಲಾ ಹೈಟೆಕ್ ಸಾಮಾಗ್ರಿಗಳು ಸುಟ್ಟು ಕರಕಲಾಗಿರುತ್ತದೆ. ಇದನ್ನು ಅರಿತ ಗ್ರಾಮೀಣ ಪೊಲೀಸ್ ಠಾಣೆಯ ಪಿಎಸ್‌ಐ ಹಣಮಂತ ಭಂಕಲಗಿ ರವರು ಇಂದು ಸ್ಥಳ ಪರಿಶೀಲನೆ ಮಹಜರು ಮಾಡಿರುತ್ತಾರೆ.



> ಲಕ್ಷಾಂತರ ದುಡ್ಡು ಕೊಟ್ಟು ಖರಿಧಿಸಿದ್ದೇನೆ. ವರ್ಗಾವಣೆ ಆಗಲು ನಕಲಿ ಜನ ನನಗೆ ತುಂಬಾ ತೊಂದರೇ ಕೊಟ್ಟಿದ್ದಾರೆ ಅವರ ಮೇಲೆ ಕ್ರಮ ಆಗಬೇಕು
> ಗೋದುರಿ ಸೂರ್ಯ ರೋಶನ್ ರಾಜು
> ನಿವೃತ್ತ ಕಮಾಂಡೆಂಟ್ (ಆರ್ಮಿ ಅಧಿಕಾರಿ)

> ತೆಲಂಗಾಣ ಮೂಲದ ಗೋದುರಿ ಸೂರ್ಯ ರೋಶನ್ ರಾಜು ತಂದೆ ಗೋದುರಿ ಗೋಪಲ ಕೃಷ್ಣ ರಾಜು ಎನ್ನುವವರ ಶೆಡ್ ಸಂಪೂರ್ಣ ಸುಟ್ಟಿದ್ದು, ಸುಟ್ಟಿರುವವರನ್ನು ಪತ್ತೆಹಚ್ಚಿ ಕನೂನು ಕ್ರಮ ಕೈಗೊಳ್ಳುತ್ತೇವೆ.
> –ಪಿಎಸ್‌ಐ ಹಣಮಂತ ಭಂಕಲಗಿ

# ಜಾತ್ರಾ ಮಹೋತ್ಸವ ಅಂಗವಾಗಿ ಉಚಿತ ತಪಾಸಣೆ





ಯಾದಗಿರಿ: ಜಾತ್ರಾ ಮಹೋತ್ಸವ ಅಂಗವಾಗಿ ಸಮಾಜೋಪಯೋಗಿ ಕಾರ್ಯಕ್ರಮ ಹಮ್ಮಿಕೊಂಡಿರುವುದು ಶ್ಲಾಘನೀಯ ಈ ನಿಟ್ಟಿನಲ್ಲಿ ಕಾರ್ಯಕ್ರಮ ಆಯೋಜಿಸಿರುವುದು ಮಾದರಿಯಾಗಿದೆ ಎಂದು ಯಾದವ ಸಮಾಜದ ಜಿಲ್ಲಾದ್ಯಕ್ಷ ತಾಯಪ್ಪ ಯಾದವ ಕಾಳೆಬೆಳಗುಂದಿ ಹೇಳಿದರು.

ಅವರು ವಡಗೇರಿ ತಾಲ್ಲೂಕಿನ ಕಾಡಂಗೇರಿ ಗ್ರಾಮದ ಆರಾಧ್ಯ ದೇವತೆ ಶ್ರೀ ದುರ್ಗಾ ದೇವಿ ಜಾತ್ರಾ ಮಹೋತ್ಸವ ನಿಮಿತ್ತ ಯಾದವ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಹಾಗೂ ಕೃಷ್ಣಾ ಪಬ್ಲಿಕ್ ಸ್ಕೂಲ್ ಮತ್ತು ಕಾಡಂಗೇರಾ ಗ್ರಾಮ ಪಂಚಾಯಿತಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಆರೋಗ್ಯದ ಉಚಿತ ತಪಾಸಣೆ, ರಕ್ತದಾನ ಶಿಬಿರ, ನೇತ್ರ ತಪಾಸಣೆ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.

ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಯುವಕ ಮಾಳಪ್ಪ ಯಾದವ ಅವರ ಕಾರ್ಯ ಸಮಾಜಕ್ಕೆ ಮಾದರಿಯಾಗಿದೆ ಎಂದು ಶ್ಲಾಘನೆ ವ್ಯಕ್ತಪಡಿಸಿದರು.

ಯಾದಗಿರಿಯ ಜನನಿ ಹೆರಿಗೆ ಆಸ್ಪತ್ರೆಯ ವೈದ್ಯೆ ಡಾ॥ ಪ್ರಿಯಾಂಕಾ ಮಾತನಾಡಿ ಅನೇಕ ಕಾಯಿಲೆಗಳಿಗೆ ರೋಗ ಬರುವ ಮೊದಲೇ ತಡೆಗಟ್ಟುವ ನಿಟ್ಟಿನಲ್ಲಿ ನಿಯಮಿತ ತಪಾಸಣೆ ಮಾಡಿಕೊಳ್ಳಬೇಕು. ಆರೋಗ್ಯ ಕಾಪಾಡಿಕೊಳ್ಳಬೇಕು, ವ್ಯಸನಗಳಿಂದ ದೂರವಿರಬೇಕೆಂದು ಸಲಹೆ ನೀಡಿದರು.

ಮುಖ್ಯ ಅತಿಥಿಗಳಾಗಿ ಪಿಡಿಓ ಶೇಷಗಿರಿರಾವ ಕುಲಕರ್ಣಿ, ಯಾದವ ಸಮಾಜದ ಯುವ ಅಧ್ಯಕ್ಷ ಪ್ರದೀಪ ಪುರ್ಲೆ, ಮಾಜಿ ಗ್ರಾಪಂ ಅಧ್ಯಕ್ಷ ನಾಗಪ್ಪ ಉಲಟಿ, ರಾಜಶೇಖರ ಪಾಟೀಲ್, ಮಾಜಿ ಉಪಾದ್ಯಕ್ಷ ದೊಡ್ಡಪ್ಪ ಕಾಕಲವಾರ, ಸದಸ್ಯ ದೇವಿಂದ್ರಪ್ಪ ಬಂಗಾರಿ, ವೆಂಕಟೇಶ ಶರಣರು, ಶಿಶಿ ಚಾರಿಟೇಬಲ್ ಸಂಸ್ಥೆ ಅದ್ಯಕ್ಷ ಮಲ್ಲಿಕಾರ್ಜುನ ಶಿರಗೋಳ, ವೇದ ಕಣ್ಣಾಸ್ಪತ್ರೆ ವೈದ್ಯರಾದ ಡಾ। ನವನೀತಾರಡ್ಡಿ, ಮೂಳೆ ತಜ್ಞ ಡಾ। ಪ್ರಶಾಂತ ಕಾನಗೌಡರ, ಯಿಮ್ಸ್ ರಕ್ತ ನಿಧಿ ಕೇಂದ್ರದ ವೈದ್ಯಾಧಿಕಾರಿ ಡಾ. ಸಿದ್ದಲಿಂಗರಡ್ಡಿ, ಸಂಸ್ಥೆ ಅಧ್ಯಕ್ಷ ಮಾಳಪ್ಪ ಯಾದವ, ಹಯ್ಯಾಳಪ್ಪ ಯಾದವ, ಮಂಜು ನಾಯಕ ಇದ್ದರು.




ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್ ವೈದ್ಯ ರವರ ಮನೆಗೆ ಭಟ್ಕಳ ತಹಶಿಲ್ದಾರ್ ನಾಗೇಂದ್ರ ಕೊಳಶೆಟ್ಟಿ ಮತ್ತು ಸಿಬ್ಬಂದಿಗಳು ಶುಕ್ರವಾರ ಭೇಟಿ ನೀಡಿ ಸ್ವಯಂ ಮನೆ ಗಣತಿ ಮಾಡಿದರು.

# ಶ್ರೀ ವೆಂಕಟರಮಣ ದೇವರ ದೋಣಿ ವಿಹಾರದ ಮೂಲಕ ಸಂಪನ್ನಗೊಂಡ ಉತ್ಸವ

ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ :

ಪಟ್ಟಣದ ದೊಡ್ಡ ದೇವರೆಂದೇ ಖ್ಯಾತಿಯಾದ ಶ್ರೀ ವೆಂಕಟರಮಣ ದೇವರ ದೋಣಿ ವಿಹಾರವು ಶುಕ್ರವಾರ ಸಂಭ್ರಮ–ಸಡಗರದಿಂದ ಕೇಣಿ ಹಳ್ಳದಲ್ಲಿ ನಡೆಯಿತು. ಪ್ರತಿವರ್ಷ ದೊಡ್ಡ ತೇರು ಉತ್ಸವದ ನಂತರ ಮಾರನೇ ದಿನ ಶ್ರೀ ವೆಂಕಟರಮಣ ದೇವರು ದೋಣಿ ವಿಹಾರಕ್ಕೆ ತೆರಳುವ ಪದ್ಧತಿ ಚಾಲ್ತಿಯಲ್ಲಿದೆ.

ಪಲ್ಲಕ್ಕಿ ಮೂಲಕ ವೆಂಕಟರಮಣ ದೇವಸ್ಥಾನದಿಂದ ಹೊರಟು ಬೇಳಾಬಂದರ ಬಳಿ ಕಟ್ಟೆಯ ಮೇಲೆ ಇಡಲಾಗುತ್ತದೆ. ನಂತರ ಧ್ವನಿವರ್ಧಕ, ತಳಿರು

ತೋರಣಗಳಿಂದ ಸಿಂಗಾರಗೊಂಡ ದೋಣಿಯ ಮೂಲಕ ವಿಹಾರಕ್ಕೆ ತೆರಳುತ್ತದೆ. ಹಾಗೇ ಪುನಃ ವಾಪಸ್ ದಡಕ್ಕೆ ಬಂದ ನಂತರ ಸುತ್ತಮುತ್ತಲಿನ ಗ್ರಾಮಸ್ಥರು ಅಲ್ಲಿಗೆ ಬಂದು ದೇವರಿಗೆ ಪೂಜೆ ನೀಡುತ್ತಾರೆ.

ಪಲ್ಲಕ್ಕಿ ಮೂಲಕ ಪುನಃ ವೆಂಕಟರಮಣ ದೇವಸ್ಥಾನಕ್ಕೆ ಬರುವ ಸಮಯದಲ್ಲಿ

ರಸ್ತೆಯುದ್ದಕ್ಕೂ ತಳಿರು ತೆ–ೂರಣ ರಂಗೋಲಿಯನ್ನು ಹಾಕಿ ಅಕ್ಕಪಕ್ಕದ ಮನೆಯವರು ಪೂಜೆ ಸಲ್ಲಿಸಿದರು. ಹಾಗೇ ದೋಣಿ ವಿಹಾರಕ್ಕೆ ಬರುವ ಎಲ್ಲರಿಗೂ ವೆಂಕಟರಮಣ ನಾಯ್ಕ ಕುಟುಂಬದವರು ತಮ್ಮ ಮನೆಯಲ್ಲಿ ಪ್ರತಿವರ್ಷದಂತೆ ಪಾನಕ ನೀಡಿದರು. ಸಾಕಷ್ಟು ಭಕ್ತರು ದೋಣಿ ವಿಹಾರದ ದೃಶ್ಯವನ್ನು ಕಣ್ತುಂಬಿಕೊಂಡರು.



# ಸ್ವಯಂ ಗಣತಿ: ಮಾಹಿತಿ ದಾಖಲಿಸಿದ ಜಿಲ್ಲಾಧಿಕಾರಿ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ ಜನ ಗಣತಿ 2027ರ ಅಂಗವಾಗಿ ಸ್ವಯಂ ಗಣತಿ ವ್ಯವಸ್ಥೆ ಪರಿಚಯಿಸಿದ್ದು, ಗುರುವಾರ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ನೂತನ ಜಿಲ್ಲಾಡಳಿತ ಭವನದ ತಮ್ಮ ಕಚೇರಿಯಲ್ಲಿ ಲ್ಯಾಪ್ ಟಾಪ್ ಮೂಲಕ ಸ್ವಯಂ ಗಣತಿ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಮ್ಮ ಮಾಹಿತಿ ದಾಖಲಾತಿ ಪೂರ್ಣಗೊಳಿಸಿದರು.

"ನಮ್ಮ ಜನಗಣತಿ – ನಮ್ಮ ಅಭಿವೃದ್ಧಿ" ಎಂಬ ಧ್ಯೇಯ ವಾಕ್ಯದೊಂದಿಗೆ ಸರ್ಕಾರ ಜನಗಣತಿ 2027 ಹಮ್ಮಿಕೊಂಡಿದ್ದು, ಇದರ ಅಂಗವಾಗಿ ಸರ್ಕಾರ ಸ್ವಯಂ ಗಣತಿ ವ್ಯವಸ್ಥೆಯನ್ನು ಪರಿಚಯಿಸಿದೆ. ಈ ಪ್ರಕ್ರಿಯೆ ಅತ್ಯಂತ ಸರಳ ಮತ್ತು ಸುರಕ್ಷಿತವಾಗಿದ್ದು, ನಾಗರಿಕರು ಯಾವುದೇ ಆತಂಕವಿಲ್ಲದೇ ಸ್ವಯಂ ಮಾಹಿತಿಯನ್ನು ದಾಖಲಿಸಬಹುದಾಗಿದೆ.2026 ರ ಏಪ್ರಿಲ್ 15 ರವರೆಗೆ ಎಲ್ಲಾ ನಾಗರಿಕರು ಅಧಿಕೃತ ಪೋರ್ಟಲ್ https://se.census.gov.in ಮೂಲಕ ತಮ್ಮ ಮಾಹಿತಿಯನ್ನು ಆನ್ ಲೈನ್ ನಲ್ಲಿ ದಾಖಲಿಸಿಕೊಳ್ಳಬಹುದು ಎಂದು ಅವರು ಕರೆ ನೀಡಿದರು.

# ಸ್ವಯಂ ಗಣತಿ: ಮಾಹಿತಿ ದಾಖಲಿಸಿದ ಅಪರ ಜಿಲ್ಲಾಧಿಕಾರಿ

ಬಳ್ಳಾರಿ:ಡಿಜಿಟಲ್ ಜನಗಣತಿ– 2027 ರ ಅಂಗವಾಗಿ ಸ್ವಯಂ ಗಣತಿ ಪ್ರಕ್ರಿಯೆ ಆರಂಭವಾಗಿದ್ದು, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್ ಅವರು ಶುಕ್ರವಾರ ತಮ್ಮ ಕಚೇರಿಯಲ್ಲಿ ಕಂಪ್ಯೂಟರ್ ಮೂಲಕ ಮಾಹಿತಿಯನ್ನು ದಾಖಲಿಸಿದರು.ನಿಗದಿತ ಜನಗಣತಿ ಪೋರ್ಟಲ್‌ಗೆ ಲಾಗಿನ್ ಆಗುವ ಮೂಲಕ, ಕುಟುಂಬದ ಸದಸ್ಯರ ವಿವರಗಳು, ವಸತಿ ಸೌಕರ್ಯ ಮತ್ತು ಇತರ ಅಗತ್ಯ ಮಾಹಿತಿಗಳನ್ನು ಆನ್‌ಲೈನ್ ಮೂಲಕವೇ ದಾಖಲಿಸುವ ಅವಕಾಶ ಈ ಪ್ರಕ್ರಿಯೆಯಲ್ಲಿ ಒದಗಿಸಲಾಗಿದೆ.ಇದೇ ಏಪ್ರಿಲ್ 15 ರವರೆಗೆ ಎಲ್ಲಾ ನಾಗರಿಕರು ಅಧಿಕೃತ ಪೋರ್ಟಲ್ https://se.census.gov.in ಮೂಲಕ ತಮ್ಮ ಮಾಹಿತಿಯನ್ನು ಆನ್ ಲೈನ್ ನಲ್ಲಿ ದಾಖಲಿಸಿಕೊಳ್ಳಬಹುದು.

ಸರ್ಕಾರವು ಒದಗಿಸಿರುವ ಈ 'ಸ್ವಯಂ ಗಣತಿ' ಸೌಲಭ್ಯವನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು ಮತ್ತು ನಿಖರವಾದ ಮಾಹಿತಿ ನೀಡುವ ಮೂಲಕ ರಾಷ್ಟ್ರದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ತಿಳಿಸಿದರು.

# ಹಿರೇಗುತ್ತಿಯಲ್ಲಿ ದೇವಸ್ಥಾನ ಕಳ್ಳತನ

## 24 ಗಂಟೆಯೊಳಗೆ ಆರೋಪಿಯನ್ನು ಬಂಧಿಸಿದ ಪೋಲೀಸರು

ಮಲ್ಲಮ್ಮ ನುಡಿ ವಾರ್ತೆ ಗೋಕರ್ಣ : ಹಿರೇಗುತ್ತಿಯ ಬ್ರಹ್ಮಜಟಕ ದೇವಾಲಯದ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಕಳ್ಳತನವಾದ 24 ಗಂಟೆಯೊಳಗೆ ಆರೋಪಿಯನ್ನು ಗೋಕರ್ಣ ಪೊಲೀಸರು ಪತ್ತೆ ಹಚ್ಚಿ ವಶಕ್ಕೆ ಪಡೆದ ಘಟನೆ ನಡೆದಿದೆ. ರಾಷ್ಟೀಯ ಹೆದ್ದಾರಿ ಅಂಚಿನಲ್ಲಿರುವ ಐತಿಹಾಸಿಕ ಮಂದಿರದ ಕಾಣಿಕೆ ಹುಂಡಿ ಕಳ್ಳತನವಾಗಿತ್ತು.

ಘಟನೆ ಬೆಳಕಿ ಬರುತ್ತಿದ್ದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಮ್.ಎನ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಕೃಷ್ಣಮೂರ್ತಿ, ಪೊಲೀಸ್ ಉಪಾಧೀಕ್ಷಕ ಗಿರೀಶ್ ಬಿ, ಭಟ್ಕಳ ಉಪ ವಿಭಾಗ ಗೋಕರ್ಣ ಪೊಲೀಸ್ ಠಾಣೆಯ ಪಿ.ಐ. ಶ್ರೀಧರ ಎಸ್.ಅರ್. ಹಾಗೂ ಕುಮಟಾ ಠಾಣೆಯ ಪಿ.ಐ. ಯೋಗೇಶ ಕೆ.ಎಂ ಅವರ ಮಾರ್ಗದರ್ಶನದಲ್ಲಿ ತನಿಖೆ ಕೈಗೊಳ್ಳಲಾಗಿತ್ತು.

ಕಳ್ಳತನ ಮಾಡಿದ ವ್ಯಕ್ತಿಯನ್ನ ಗೋಕರ್ಣ ಪೊಲೀಸ್ ಠಾಣೆಯ ಪಿ.ಎಸ್.ಐ ಅನಿಲ್ ಬಿ.ಎಮ್, ಕುಮಟಾ ಠಾಣೆಯ ಪಿ.ಎಸ್.ಐ ಖಾದರ್ ಭಾಷಾ, ರವಿ ಗುಡ್ಡಿ, ಸಿಬ್ಬಂದಿಗಳಾದ ಲೋಕೇಶ್ ಅರಶಿನಗುಪ್ಪಿ, ದಯಾನಂದ ನಾಯ್ಕ, ರಾಜೇಶ್ ಎಚ್. ನಾಯ್ಕ, ಪ್ರದೀಪ ನಾಯ್ಕ (ಸಿ.ಎಸ್.ಪಿ ಕುಮಟಾ), ಪರಮೇಶ್ವರ ಬೆಂಡ್ಲಗಟ್ಟಿ, ಕಿರಣ್ ಬಾಳೂರ, ಮಣಿಕಂಠ ಗೌಡ ಪರಮೇಶ್ವರ ಲಮಾಣಿ ಸೇರಿದಂತೆ ಗೋಕರ್ಣ ಮತ್ತು ಕುಮಟಾ ಪೊಲೀಸ್ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ಜಂಟಿ ಕಾರ್ಯಚರಣೆಯ ಮೂಲಕ ಆರೋಪಿತನನ್ನು ಹೆಡೆಮುರಿಕಟ್ಟಿದ್ದಾರೆ.

ಹೊನ್ನಾವರ ಕಡತೋಕದ ಗಣೇಶ ಗೋಪಾಲ ದೇಶಭಂಡಾರಿ (36) ಆರೋಪಿತನಾಗಿದ್ದು, ನ್ಯಾಯಾಲಯಕ್ಕೆ ಹಾಜರುಪಡಿಸಿ ಮುಂದಿನ ಕ್ರಮಕೈಗೊಂಡಿದ್ದಾರೆ. ಕುಮಟಾ ಹಾಗೂ ಗೋಕರ್ಣ ಪೊಲೀಸ್ ಠಾಣೆ ಅಧಿಕಾರಿ, ಸಿಬ್ಬಂದಿಗಳ ಈ ಕ್ಷಿಪ್ರ ಕಾರ್ಯಚರಣೆಗೆ ಸಾರ್ವಜನಿಕರು ಹಾಗೂ ಅಧಿಕಾರಿಗಳು ಪ್ರಶಂಶೆ ವ್ಯಕ್ತಪಡಿಸಿರುತ್ತಾರೆ.



# ಅದ್ದೂರಿಯಾಗಿ ಜರುಗಿದ ತಳಕಲ್ಲ ತಳಬಾಳ ಗ್ರಾಮದ ಉಡುರಾಜಮುಖಿ ಜಾತ್ರೆ



• ಮಲ್ಲಮ್ಮ ನುಡಿವಾರ್ತೆ ಕೊಪ್ಪಳ

ಜಗತ್ತಿನಲ್ಲಿ ಕೋಟ್ಯಂತರ ಜೀವರಾಶಿ ನೆಲೆಗೊಂಡಿದ್ದರೂ ಅವುಗಳಲ್ಲಿ ವಿಚಾರವಂತ ಜೀವಿ ಎಂದರೆ ಮನುಷ್ಯ ಮಾತ್ರ, ಮಾನವ ಜನ್ಮ ಸಾರ್ಥಕವಾಗಬೇಕಾದರೆ ಸತ್ಕಾರ್ಯ ಮಾಡಬೇಕೆಂದು ಅಳವಂಡಿಯ ಮರುಳಾರಾಧ್ಯ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಕೊಪ್ಪಳ ಜಿಲ್ಲೆ ಕುಕನೂರು ತಾಲ್ಲೂಕಿನ ತಳಕಲ್ಲ ಗ್ರಾಮದ ಅರಳಿಬೆಂಚಿ ಉಡರಾಜಮುಖಿ (ಉಡಚಮ್ಮದೇವಿ) ಜಾತ್ರಾಮಹೋತ್ಸವವಿದ್ದು ಗುರುವಾರ ಅದ್ದೂರಿಯಾಗಿ ಜರುಗಿತು. ಜಾತ್ರಾ ನಿಮಿತ್ತವಾಗಿ ರಥೋತ್ಸವ, ಸಾಮೂಹಿಕ ವಿವಾಹಗಳು, ತುಲಾಭಾರ, ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ವಿಶೇಷ ಪೂಜಾಲಂಕಾರ, ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ ಸಮಾರಂಭ ಹಾಗೂ ನಾಡಿನ ಗಣ್ಯರ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಶಿವಾನುಭವ ಧರ್ಮಸಭೆಯನ್ನು ಏರ್ಪಡಿಸಲಾಗಿತ್ತು.

ಬೆಳಗಿನ ಧರ್ಮ ಸಭೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅಳವಂಡಿಯ ಮರುಳಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ ಪರಿಶುದ್ಧ ತನು ಮನದಿಂದ ಭಕ್ತಿ ಸಮರ್ಪಿಸಬೇಕು, ನಾವೆಲ್ಲಾರೂ ಒಂದೇ ತಾಯಿಯ ಮಕ್ಕಳಂತೆ ಬದುಕಬೇಕು. ಮಾನವ ಧರ್ಮವನ್ನು ಅರಿತು ಬಾಳಬೇಕು, ಮಾಡಿದ ಪಾಪ ಕರ್ಮ ಕಳೆದುಕೊಳ್ಳಲು ಪ್ರಾಣಿ ಪಕ್ಷಿಗಳಿಗೆ ಅನ್ನ ನೀರು ನೀಡುವ ಮೂಲಕ ಈ ಮನುಷ್ಯ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕೆಂದರು. ದ್ವೇಷವನ್ನು ಬಿಟ್ಟು ಪ್ರೀತಿ ಸ್ನೇಹದಿಂದ ಬಾಳಬೇಕೆಂದು ಕರೆ ಕೊಟ್ಟರು. ಕುಕನೂರಿನ ಡಾ.ಮಹಾದೇವ ಸ್ವಾಮೀಜಿ ಮಾತನಾಡಿ ಸರ್ವರೂ ಜಾತ್ಯಾತೀತವಾಗಿ ಒಗ್ಗಟ್ಟಿನಿಂದ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಿ, ಭಕ್ತಿ ನೆಲೆಗೊಂಡಿರುವ ಈ ಕ್ಷೇತ್ರ ಇನ್ನೂ ಎತ್ತರಕ್ಕೆ ಬೆಳೆದು ಪುಣ್ಯಕ್ಷೇತ್ರವಾಗಿ ಈ ನಾಡಿಗೆ ಪರಿಚಯವಾಗಲಿ ಎಂದರು.

ನೂತನ ರಥೋತ್ಸವಕ್ಕೆ ಗವಿಶ್ರೀಗಳು ಚಾಲನೆ:

ಸಂಜೆ ವೇಳೆಗೆ ನೂತನ ರಥೋತ್ಸವಕ್ಕೆ ತಯಾರಿ ನಡೆಸಿ ಹೂವಿನಿ ಹಾಸಿನೊಂದಿಗೆ ಬಾಜಾ ಬಜಂತ್ರಿ, ಡೊಳ್ಳಿನಮಜಲು, ನಂದಿಕೋಲು ಮತ್ತು ಇನ್ನಿತರ ಮಂಗಳ ವಾದ್ಯದೊಂದಿಗೆ ಗವಿಶ್ರೀಗಳನ್ನು ಬರಮಾಡಿಕೊಂಡು ಶ್ರೀಗಳು ನೂತನ ರಥೋತ್ಸವಕ್ಕೆ ಪೂಜೆ ಸಲ್ಲಿಸಿ ಚಾಲನೆ ನೀಡಿದರು.

ಸಾವಿರಾರು ಭಕ್ತರ ಸಮ್ಮುಖದಲ್ಲಿ ನೂತನ ರಥೋತ್ಸವವು ಅದ್ದೂ-ರಿಯಾಗಿ ಜರುಗಿತು. ನಿರಂತರವಾಗಿ ಅನ್ನ ಸಂತರ್ಪಣೆ ಜರುಗಿತು. ವಿವಿಧ ಗ್ರಾಮಗಳಿಂದ ಆಗಮಿಸಿದ ಭಕ್ತರು ದೇವಿಯ ದರ್ಶನ ಮಾಡಿ ಪುನೀತರಾದರು.

ಇದೇ ವೇಳೆ ರಥ ನಿರ್ಮಾಣಕ್ಕೆ ದೇಣಿಗೆ ಸಲ್ಲಿಸಿದವರಿಗೆ ಸನ್ಮಾನಿಸಲಾಯಿತು, ವಿವಿಧ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ನೀಡಲಾಯಿತು. ದದೇಗಲ್ ಸಿದ್ದಾರೂಢ ಮಠದ ಶ್ರೀ ಆತ್ಮಾನಂದ ಭಾರತಿ ಸ್ವಾಮಿಗಳ ತುಲಾಭಾರ ಕಾರ್ಯಕ್ರಮ ಜರುಗಿತು. ಕಲಾವಿದರಿಂದ ಭಕ್ತಿ ಸಂಗೀತ, ಸುಗಮಸಂಗೀತ, ಪ್ರವಚನ ಮತ್ತು ವಿವಿಧ ಶ್ರೀಗಳಿಂದ ಆಧ್ಯಾತ್ಮಿಕ ಆಶೀರ್ವಚನ ಕಾರ್ಯಕ್ರಮಗಳು ಜರುಗಿದವು. ಜಾತ್ರಾ ನಿಮಿತ್ತವಾಗಿ ಜರುಗಿದ ಧಾರ್ಮಿಕ ಹಾಗೂ ವಿವಿಧ ಕಾರ್ಯಕ್ರಮದಲ್ಲಿ ತಾಲ್ಲೂಕಿನ ಗಣ್ಯರು ಪರಮಪೂಜ್ಯರು ಆಗಮಿಸಿದ್ದರು. ಭಕ್ತರು ತಾವು ಬೇಡಿಕೊಂಡ ಹರಕೆಯನ್ನು ಅರ್ಪಿಸಿ ಭಕ್ತಿ ಸಮರ್ಪಿಸಿದರು.

# ಕೆ.ಹೊಸಹಳ್ಳಿ ನಾಗಲಿಂಗೇಶ್ವರ ಜಾತ್ರಾ ಮಹೋತ್ಸವ






• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ತಾಲೂಕಿನ ತುರವಿಹಾಳ ಸಮೀಪದ ಕೆ ಹೊಸಹಳ್ಳಿ ಗ್ರಾಮದಲ್ಲಿ ಗುರುವಾರ ಡೇರೆದ ನಾಗಲಿಂಗೇಶ್ವರ ಜಾತ್ರಾ ಮಹೋತ್ಸವದ ಅದ್ದೂರಿಯಾಗಿ ಜರುಗಿತು. ಜಾತ್ರಾ ಮಹೋತ್ಸವ ಅಂಗವಾಗಿ ಮಹಿಳೆಯರ ಕುಂಭಕಳಸ ಡೊಳ್ಳು, ವಾದ್ಯಗಳೊಂದಿಗೆ ಭಾಗವಹಿಸಿ ಸಂಭ್ರಮಿಸಿದರು.

ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ 101 ಕುಂಭಗಳಿಗೆ ಗ್ರಾಮದ ಪೂಜ್ಯ-ರಿಂದ ಪೂಜೆ ಸಲ್ಲಿಸಿ ಜಾತ್ರೆಗೆ ಚಾಲನೆ ನೀಡಲಾಯಿತು.

ವಿಶೇಷ ಉತ್ಸಾಹದೊಂದಿಗೆ ಪಾಲ್ಗೊಂಡ ಮಹಿಳೆಯರು ಗ್ರಾಮದ ಸುರಕ್ಷೆ ಮತ್ತು ಸಮೃದ್ಧಿಯ ಸಂಕಲ್ಪದೊಂದಿಗೆ ಪಲ್ಲಕ್ಕಿ ಉತ್ಸವ, ರಥದ ಕಳಸವನ್ನು ಪೂಜ್ಯರ ನೇತೃತ್ವದಲ್ಲಿ 101 ಕುಂಭಗಳನ್ನು ಗ್ರಾಮದಲ್ಲಿ ಭವ್ಯ ಮೆರವಣಿಗೆಯ ಮೂಲಕ ಹೊತ್ತುಕೊಂಡು ಬಂದು ಜಾತ್ರಾ ಮಹೋತ್ಸವಕ್ಕೆ ಮೆರುಗು ತಂದರು. ಸಾಯಂಕಾಲ ಕಳಸ, ಪಲ್ಲಕ್ಕಿ ಉತ್ಸವದೊಂದಿಗೆ ಶ್ರೀನಾಗಲಿಂಗೇಶ್ವರ ದೇವಸ್ಥಾನ ತಲುಪುತ್ತಿದ್ದಂತೆ ರಥೋತ್ಸವವು ಪ್ರಾರಂಭವಾಯಿತು.

ಗುರುವಾರ ಬೆಳಗ್ಗೆಯಿಂದಲೇ ಆರಂಭವಾದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರೆದಿದ್ದ ಭಕ್ತರನ್ನು ಮಂತ್ರಮುಗ್ಧರನ್ನಾಗಿಸಿದರೆ ಗ್ರಾಮದ ಆರಾಧ್ಯ ದೈವ ನಾಗಲಿಂಗೇಶ್ವರ ಮೂರ್ತಿಗೆ ಮಾಡಲಾಗಿದ್ದ ಅಭಿಷೇಕ, ಪುಷ್ಪಾರ್ಚನೆ ಮತ್ತು ಬಣ್ಣ ಬಣ್ಣದ ಲೈಟ್ ಗಳಿಂದ ಕಂಗೊಳಿಸುತ್ತಿದ್ದ ದೇವಸ್ಥಾನ ಬಂದ ಭಕ್ತಾದಿಗಳನ್ನು ಕೈಬೀಸಿ ಕರೆಯುವಂತಿತ್ತು.

ಸಾವಿರಾರು ಭಕ್ತಾದಿಗಳು ರಥ-ಕ್ಕೆ ಹೂ ಹಣ್ಣು ಉತ್ತತ್ತಿ ಎಸೆದು ದೇವರಿಗೆ ಹರಕೆಗಳನ್ನು ಹೊತ್ತು ಧಿರ್ಘದಂಡ ನಮಸ್ಕಾರ ಹಾಕುವ ಮೂಲಕ ತಮ್ಮ ಇಷ್ಟಾರ್ಥಗಳ ಬೇಡಿಕೆಗಳನ್ನು ಈಡೇರಿಸುವಂತೆ ಮೊರೆ ಇಟ್ಟರು.

ವಿಶೇಷವಾಗಿ ದೇವಸ್ಥಾನವತಿಯಿಂದ ಜಾತ್ರೆಗೆ ಆಗಮಿಸಿದ ಭಕ್ತಾಧಿಗಳಿಗೆ ಪ್ರಸಾದ ವ್ಯವಸ್ಥೆ ಮಾಡಲಾಯಿತು.

ಈ ಸಂಧರ್ಭದಲ್ಲಿ ಊರಿನ ಪರಮ ಪೂಜ್ಯರು, ಗುರು ಹಿರಿಯರು, ಮಹಿಳೆಯರು, ಯುವಕ ಯುವ ತಿಯರು

ಹಾಗೂ ಪೊಲೀಸ್ ಸಿಬ್ಬಂದಿಗಳು, ಜೆಸ್ಕಾಂ ಸಿಬ್ಬಂದಿಗಳು, ಕೆ. ಹೊಸಹಳ್ಳಿ ಹಳೆಯ ವಿದ್ಯಾರ್ಥಿಗಳ ಸಂಘದ ಸದಸ್ಯರು, ಸುತ್ತಮುತ್ತಲಿನ ಗ್ರಾಮಸ್ಥರು ಭಾಗವಹಿಸಿ ಸಂಭ್ರಮದಿಂದ ಪಾಲ್ಗೊಂಡಿದ್ದರು.

# ಹನುಮ ಜಯಂತಿ ಮಹೋತ್ಸವ



• ಮಲ್ಲಮ್ಮ ನುಡಿ ವಾರ್ತೆಕಮಲನಗರ

ತಾಲೂಕಿನ ರಾಂಪೂರ ಗ್ರಾಮ ದ ಹೊರ ವಲದಲ್ಲಿ ಕೋಟಗ್ಯಾಳ ರಸ್ತೆ ಹತ್ತಿರ ಇರುವ ಹಳೆಯ ರಾಂಪುರನಲ್ಲಿ ಹನುಮ ಜಯಂತಿಯನ್ನು ಅತ್ಯಂತ ಸಡಗರ-ಸಂಭ್ರಮ ಹಾಗೂ ವಿಜೃಂಭಣೆಯಿಂದ ಆಚರಿಸಲಾಯಿತು.

ಹನುಮ ಜಯಂತಿ ಅಂಗವಾಗಿ ಮುಂಜಾನೆಯಿಂದಲೇ ಮಂದಿರದಲ್ಲಿ ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಶ್ರೀ ಆಂಜನೇಯ ಸ್ವಾಮಿಗೆ ಪಂಚಾಮೃತ ಅಭಿಷೇಕ, ವಿಶೇಷ ಪೂಜೆ ಹಾಗೂ ನೈವೇದ್ಯ ಅರ್ಪಿಸಲಾಯಿತು. ಮುಖ್ಯವಾಗಿ ಈ ಸಂಭ್ರಮದ ಭಾಗವಾಗಿ ಹಮ್ಮಿಕೊಂಡಿದ್ದ ತೊಟ್ಟಿಲು ಸೇವೆ, ನಾಮಕರಣ ಹಾಗೂ ಜನೆ ಕಾರ್ಯಕ್ರಮಗಳು ಭಕ್ತರ ಗಮನ ಸೆಳೆದವು.

ಈ ಸಂದರ್ಭದಲ್ಲಿ ಜಾತ್ರ ಸಮಿತಿ ಮುಖಂಡ ಶಿವಕುಮಾರ ಎಮ್. ರಾಂಪುರೆ, ಗಣಪತಿ ಬಿರಾದಾರ, ಮಹಾದೇವ ಬದನಾಳೆ, ಮನ್ಮಥ ಬದನಾಳೆ, ಕಿರಣ ಸಾಂಗವೆ, ಸಚೀನ ಹೊಳಸಂಬ್ರೆ, ಗೋಪಾಲ ಗೌಳಿ,

ಧರ್ಮರಾಜ ಚವಾಣ್, ಶಿವಾಜಿ, ಮನೋಜ ಜಾಧವ, ಶಿವಕುಮಾರ ರಾಂಪುರೆ, ಭೀಮರಾವ ರಾಂಪುರೆ, ಹಾಗೂ ಗ್ರಾಮದ ಹಿರಿಯರು, ಗಣ್ಯರು ಉಪಸ್ಥಿತರಿದ್ದರು.

ಅನ್ನದಾಸೋಹ:

ಹನುಮ ಜಯಂತಿ ನಿಮಿತ್ಯ ಗ್ರಾಮದ ಸುತ್ತಮುತ್ತಲಿನ ಪ್ರದೇಶಗಳಿಂದ ಸಾವಿರಾರು ಭಕ್ತಾದಿಗಳು ಆಗಮಿಸಿ ದರ್ಶನ ಪಡೆದರು.

ಮಂದಿರದ ವತಿಯಿಂದ ಬಂದಂತಹ ಎಲ್ಲಾ ಭಕ್ತಾದಿಗಳಿಗೆ ತೀರ್ಥಪ್ರಸಾದ ಹಾಗೂ ಅನ್ನದಾಸೋಹದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿತ್ತು.

# ಗ್ಯಾಸ್ ಬೆಲೆ ಏರಿಕೆ, ಅಕ್ರಮ ದಾಸ್ತಾನು ವಿರುದ್ಧ ಕ್ರಮ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಿಲ್ಲೆಯಲ್ಲಿ ಗೃಹಬಳಕೆ ಎಲ್‌ಪಿಜಿ, ಆಟೋ ಗ್ಯಾಸ್ ಬೆಲೆ ಏರಿಕೆ, ಕೃತಕ ಅಭಾವ ಸೃಷ್ಟಿಸುವ ಮಾರಾಟಗಾರರು ಹಾಗೂ ಅಕ್ರಮ ದಾಸ್ತಾನುದಾರರ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಿಸುವಂತೆ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಗುರುವಾರ, ನಗರದ ನೂತನ ಜಿಲ್ಲಾಡಳಿತ ಭವನದ ಕೆಸ್ವಾನ್ ವಿಡಿಯೋ ವಿವಿಧ ಇಲಾಖೆಗಳ ಅಧಿಕಾರಿಗಳು, ತಾಲ್ಲೂಕು ತಹಶೀಲ್ದಾರರೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ಇತ್ತೀಚೆಗೆ ನಗರದ ಗ್ಯಾಸ್ ಸ್ಟೇಷನ್‌ವೊಂದರಲ್ಲಿ ಆಟೋ ಗ್ಯಾಸ್ ಬೆಲೆ ಏರಿಕೆ ಖಂಡಿಸಿ ಪ್ರತಿಭಟನಾ ದೂರಿನ ಹಿನ್ನೆಲೆಯಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು. ಗ್ಯಾಸ್ ಸ್ಟೇಷನ್‌ಗಳಲ್ಲಿ ದಾಸ್ತಾನು ಇದ್ದರೂ 'ನೋ ಸ್ಟಾಕ್' ಬೋರ್ಡ್ ಹಾಕಿ ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವ ದೂರುಗಳು ಬರದಂತೆ ನೋಡಿಕೊಳ್ಳಬೇಕು. ಅಧಿಕಾರಿಗಳು ಅಂತಹ ಸ್ಥಳಗಳಿಗೆ ಭೇಟಿ ನೀಡಿ ದಾಸ್ತಾನು ಪರಿಶೀಲಿಸಬೇಕು ಎಂದು ನಿರ್ದೇಶನ ನೀಡಿದರು.

ಸಾರ್ವಜನಿಕರು ಅಕ್ರಮ ದಾಸ್ತಾನು ಅಥವಾ ಬೆಲೆ ಏರಿಕೆಯಂತಹ ಪ್ರಕರಣಗಳು ಕಂಡುಬಂದಲ್ಲಿ ಕೂಡಲೇ ಉಚಿತ ಸಹಾಯವಾಣಿ ಸಂಖ್ಯೆ 1070 ಕರೆಮಾಡಿ ಮಾಹಿತಿ ನೀಡಬಹುದು. ಈ ಕುರಿತು ಅಧಿಕಾರಿಗಳು ನಿಗಾವಹಿಸಬೇಕು. ಕರೆಗಳಿಗೆ ತ್ವರಿತವಾಗಿ ಸ್ಪಂದಿಸಬೇಕು ಎಂದರು.

ಏ.3 ರಿಂದ ತುಂಗಭದ್ರಾ ಎಚ್‌ಎಲ್‌ಸಿ ಕಾಲುವೆಗೆ ಕುಡಿಯಲು ನೀರು ಬಿಡುಗಡೆ:

ಕುಡಿಯುವ ನೀರಿನ ಸಮಸ್ಯೆ ನೀಗಿಸುವ ನಿಟ್ಟಿನಲ್ಲಿ ನಾಳೆಯಿಂದ ತುಂಗಭದ್ರಾ ಎಚ್‌ಎಲ್‌ಸಿ ಕಾಲುವೆಗೆ ಕುಡಿಯಲು ನೀರು ಹರಿಸಲಾಗುತ್ತದೆ. ನೀರನ್ನು ಕೇವಲ ಕುಡಿಯುವ ಉದ್ದೇಶಕ್ಕಾಗಿ ಮಾತ್ರ ಬಳಕೆಯಾಗಬೇಕು. ಯಾವುದೇ ಕಾರಣಕ್ಕೂ ಅಕ್ರಮವಾಗಿ ನೀರು ವ್ಯರ್ಥವಾಗದಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಕೃಷಿ, ಕೈಗಾರಿಕೆಗಳು ಅಥವಾ ವಾಣಿಜ್ಯ ಉದ್ದೇಶಗಳಿಗಾಗಿ ಕಾಲುವೆಯಿಂದ ಅಕ್ರಮವಾಗಿ ನೀರು ಎತ್ತುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಕಾಲುವೆ ಹಾದುಹೋಗುವ ಮಾರ್ಗದುದ್ದಕ್ಕೂ ಪೊಲೀಸ್, ನೀರಾವರಿ ಇಲಾಖೆಯ ಅಧಿಕಾರಿಗಳು ಸಿಬ್ಬಂದಿ ಮೂಲಕ ನಿರಂತರವಾಗಿ ಬೀಟ್ ವ್ಯವಸ್ಥೆ ಕೈಗೊಳ್ಳುವ ಮೂಲಕ ನಿಗಾವಹಿಸಬೇಕು ಎಂದು ತಿಳಿಸಿದರು.

ಕುಡಿಯುವ ನೀರಿನ ಸಮರ್ಪಕ ಪೂರೈಕೆಗಾಗಿ ಅಧಿಕಾರಿಗಳು ಪಂಪಿಂಗ್ ಶೆಡ್ಯೂಲ್ ಸಿದ್ಧಪಡಿಸಿಕೊಳ್ಳಬೇಕು. ನೀರು ಬಂದ ನಂತರ ಕೆರೆ ತುಂಬಿಸಿಕೊಳ್ಳಲು ಮೋಟಾರ್ ಮತ್ತು ಪಂಪ್‌ಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಬೇಕು. ಮುಂಬರುವ



ಬೇಸಿಗೆಯ ದಿನಗಳಲ್ಲಿ ನೀರಿಗೆ ತೊಂದರೆಯಾಗದಂತೆ ಕೆರೆಗಳಲ್ಲಿ ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

ಏ.4 ರಂದು ವಿಶೇಷ 'ಸ್ವಯಂ-ಗಣತಿ' ಅಭಿಯಾನ:

ಭಾರತದ ಜನಗಣತಿ-2027ರ ಭಾಗವಾಗಿ, ಜಿಲ್ಲೆಯಾದ್ಯಂತ ಪ್ರಥಮ ಹಂತದ 'ಮನೆಗಳ ಪಟ್ಟಿ ಮತ್ತು ಮನೆ ಗಣತಿ' ಪ್ರಕ್ರಿಯೆಯನ್ನು ಚುರುಕುಗೊಳಿಸಲು ಏಪ್ರಿಲ್ 4ರಂದು (ಶನಿವಾರ) ವಿಶೇಷ 'ಸ್ವಯಂ-ಗಣತಿ' ಅಭಿಯಾನ ಹಮ್ಮಿಕೊಳ್ಳಲಾಗಿದೆ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಹೇಳಿದರು.

ಜಿಲ್ಲೆಯ ಎಲ್ಲಾ ಸರ್ಕಾರಿ, ಅರೆ ಸರ್ಕಾರಿ, ಸ್ಥಳೀಯ ಸಂಸ್ಥೆಗಳು ಮತ್ತು ನಿಗಮ ಮಂಡಳಿಗಳ ಮುಖ್ಯಸ್ಥರು ತಮ್ಮ ಕಚೇರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕಚೇರಿಯಲ್ಲಿಯೇ ಅಂದು ಬೆಳಿಗ್ಗೆ 08 ರಿಂದ ಮಧ್ಯಾಹ್ನ 01 ಗಂಟೆಯವರೆಗೆ ಆನ್ ಲೈನ್ ವೆಬ್ ಸೈಟ್ https://se.census.gov.in ಮೂಲಕ ತಮ್ಮ ಮಾಹಿತಿಯನ್ನು ಸ್ವತಃ ದಾಖಲಿಸಬಹುದು. ಈ ಸ್ವಯಂ-ಗಣತಿ ಪ್ರಕ್ರಿಯೆಯು ಏಪ್ರಿಲ್ 1 ರಿಂದ ಏಪ್ರಿಲ್ 15 ರವರೆಗೆ ಲಭ್ಯವಿರುತ್ತದೆ. ಅಲ್ಲದೆ, ಕಚೇರಿಗೆ ಭೇಟಿ ನೀಡುವ ಸಾರ್ವಜನಿಕರಿಗೂ ಈ ಬಗ್ಗೆ ಮಾಹಿತಿ ನೀಡಿ ಪ್ರಕ್ರಿಯೆಯಲ್ಲಿ ಭಾಗವಹಿಸಲು ತಿಳಿಸಬೇಕು. ಈ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ ಕಚೇರಿ ಮುಖ್ಯಸ್ಥರು ಏಪ್ರಿಲ್ 4ರ ಸಂಜೆಯೊಳಗೆ ತಮ್ಮ ವ್ಯಾಪ್ತಿಯಲ್ಲಿ ನಡೆದ ಗಣತಿಯ ಕುರಿತು ದೃಢೀಕೃತ ವರದಿಯನ್ನು ಜಿಲ್ಲಾಧಿಕಾರಿಯವರ ಕಚೇರಿಗೆ ಸಲ್ಲಿಸಬೇಕು ಎಂದು ಸೂಚಿಸಿದರು.

ಗಣಿಬಾಧಿತ ಪ್ರದೇಶಗಳ ಅಭಿವೃದ್ಧಿ: ಹೊಸ ಕ್ರಿಯಾ ಯೋಜನೆಗೆ ಸಿದ್ಧತೆ:*

ಜಿಲ್ಲೆಯ ಗಣಿ ಬಾಧಿತ ಪ್ರದೇಶಗಳಲ್ಲಿ ಸಮಗ್ರ ಅಭಿವೃದ್ಧಿ ಕೈಗೊಳ್ಳುವ ನಿಟ್ಟಿನಲ್ಲಿ 2023-24ನೇ ಸಾಲಿನಿಂದ ಅನ್ವಯವಾಗುವಂತೆ ಹೊಸ ಕ್ರಿಯಾ ಯೋಜನೆ ರೂಪಿಸಬೇಕಾಗಿದೆ. ಕಳೆದ ಮೂರು ವರ್ಷಗಳಿಂದ ಯಾವುದೇ ಹೊಸ ಯೋಜನೆಗಳನ್ನು ರೂಪಿಸದ ಕಾರಣ, ಪ್ರಸ್ತುತ ಸುಮಾರು 950 ಕೋಟಿ ರೂ. ಕ್ರೋಢೀಕೃತ ಅನುದಾನ ಲಭ್ಯವಿದ್ದು, ಇದನ್ನು ವಿವಿಧ ಅಭಿವೃದ್ಧಿ ಕೆಲಸಗಳಿಗೆ ಬಳಸಿಕೊಳ್ಳಲು ನಿರ್ಧರಿಸಲಾಗಿದೆ. ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಪ್ರತಿಯೊಂದು ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಬೇಕು. ನಿಯಮಾನುಸಾರ ಪ್ರಸ್ತಾವನೆಗಳನ್ನು ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಸೂಚಿಸಿದರು.

ಜಿಲ್ಲಾ ಖನಿಜ ಪ್ರತಿಷ್ಠಾನದ ವಿಶೇಷ ಕರ್ತವ್ಯಾಧಿಕಾರಿ ಲೋಕೇಶ್ ಅವರು ಮಾತನಾಡಿ, ಕೇಂದ್ರ ಸರ್ಕಾರದ ಹೊಸ ಮಾರ್ಗಸೂಚಿಗಳ ಅನ್ವಯ, ಈ ಯೋಜನೆಯಲ್ಲಿ ಕುಡಿಯುವ ನೀರು, ಪರಿಸರ ಸಂರಕ್ಷಣೆ, ಆರೋಗ್ಯ ಸೇವೆ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಯೋವೃದ್ಧರು ಮತ್ತು ವಿಕಲಚೇತನರ ಕಲ್ಯಾಣ, ಕೌಶಲ್ಯಾಭಿವೃದ್ಧಿ,

ಸ್ವಚ್ಛತೆ ಮತ್ತು ತ್ಯಾಜ್ಯ ನಿರ್ವಹಣೆ ಹಾಗೂ ಇತರ ಮೂಲಸೌಕರ್ಯ ಯೋಜನೆಗಳು ಒಳಗೊಂಡತೆ ಎಂಟು ಪ್ರಮುಖ ಆದ್ಯತಾ ಕ್ಷೇತ್ರಗಳ ಮೂಲಭೂತಸೌಕರ್ಯಗಳ ಅನುಷ್ಠಾನಕ್ಕೆ ಪ್ರಾಮುಖ್ಯತೆ ನೀಡಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಸ್.ನವೀನ್‌ಕುಮಾರ್, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕ ದೇವರಾಜ್ ಕೆ.ಆರ್., ಜಿಪಂ ಮುಖ್ಯ ಲೆಕ್ಕಾಧಿಕಾರಿ ವಿನೋದ್ ಕುಮಾರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ವರ್ಚುವಲ್ ಮೂಲಕ ತಾಲ್ಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

# ಜನಗಣತಿಯಲ್ಲಿ ಸಾರ್ವಜನಿಕರು ಭಾಗಿಯಾಗಬೇಕು: ಶಾಸಕ ನಾರಾ ಭರತ್ ರೆಡ್ಡಿ



ಬಳ್ಳಾರಿ, : ಕೇಂದ್ರ ಸರ್ಕಾರ ಆರಂಭಿಸಿರುವ ಜನಗಣತಿ ಅಭಿಯಾನದಲ್ಲಿ ನಗರದ ಸಾರ್ವಜನಿಕರು ಸ್ವಯಂ ಪ್ರೇರಣೆಯಿಂದ ಭಾಗಿಯಾಗಬೇಕು ಎಂದು ನಗರ ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು.

ಶುಕ್ರವಾರ ಮಧ್ಯಾಹ್ನ ನಗರದ 37ನೇ ವಾರ್ಡಿನ ದೇವಿ ನಗರದಲ್ಲಿ ಭೂಮಿ ಪೂಜೆ - ಸಲಾಂ ಬಳ್ಳಾರಿ ಹಾಗೂ ಮನೆ ಮನೆಗೂ ಭರತ್ ಅಭಿಯಾನಕ್ಕೆ ಚಾಲನೆ ನೀಡಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

ಮಹಾನಗರ ಪಾಲಿಕೆಯ ವತಿಯಿಂದ ಜನಗಣತಿಯ ಬಗ್ಗೆ ಪ್ರಚಾರ ನಡೆಯಲಿದೆ, ಪಾಲಿಕೆಯ ಅಧಿಕಾರಿಗಳು ಮನೆ ಮನೆಗೆ ಜನಗಣತಿ ಬಂದಾಗ ಜನರು ಸಹಕರಿಸಿ ಅಭಿಯಾನ ಯಶಸ್ವಿಗೊಳಿಸಬೇಕು ಎಂದರು.

ಎಲ್‌ಪಿಜಿ ಪೂರೈಕೆ ಸಕ್ರಮಕ್ಕೆ ಸೂಚನೆ: ಮಧ್ಯ ಪ್ರಾಚ್ಯ ದೇಶಗಳಲ್ಲಿ ಯುದ್ಧ ಸಂಘರ್ಷ ನಡೆಯುತ್ತಿದ್ದು, ಅಡುಗೆ ಅನಿಲ ಮತ್ತು ತೈಲ ಪೂರೈಕೆಯಲ್ಲಿ ವ್ಯತ್ಯಯ ಆಗಿದೆ, ಗೃಹ ಬಳಕೆ ಹಾಗೂ ವಾಣಿಜ್ಯ ಬಳಕೆಯ ಅನಿಲ ಪೂರೈಕೆಯಲ್ಲಿ ಅಕ್ರಮ ತಡೆಗಟ್ಟುವ ನಿಟ್ಟಿನಲ್ಲಿ ಪಾಲಿಕೆ ಹಾಗೂ ಜಿಲ್ಲಾಧಿಕಾರಿಗಳು ಈಗಾಗಲೇ ಕ್ರಮ ಕೈಗೊಂಡಿದ್ದಾರೆ ಎಂದು ಹೇಳಿದ ಅವರು, ಮುಂದಿನ ದಿನಗಳಲ್ಲಿ ಯಾವುದೇ ರೀತಿಯಲ್ಲಿ ಅನಿಲ ಪೂರೈಕೆಯಲ್ಲಿ ಅಕ್ರಮ ಕಂಡು ಬಂದರೆ ಅಧಿಕಾರಿಗಳ ಹಾಗೂ ನನ್ನ ಗಮನಕ್ಕೆ ತರಬೇಕು ಎಂದರು.

ಎರಡು ಕಾಮಗಾರಿಗಳಿಗೆ ಭೂಮಿ ಪೂಜೆ: ವಾರ್ಡ್ ಸಂಖ್ಯೆ 37 ಹಾಗೂ 38ನೇ ವಾರ್ಡುಗಳಲ್ಲಿ ರಸ್ತೆ, ಮಳೆ ನೀರು ಚರಂಡಿ, ಒಳ ಚರಂಡಿ ಹಾಗೂ ಪೇವರ್ಸ್ ಅಳವಡಿಕೆ ಕಾಮಗಾರಿಗಳ ಎರಡು ಪ್ರತ್ಯೇಕ ಕಾಮಗಾರಿಗಳಿಗೆ ತಲಾ 2 ಕೋಟಿ ರೂ.ಗಳಂತೆ ಒಟ್ಟು 4 ಕೋಟಿ ರೂ.ಗಳ ವೆಚ್ಚದಲ್ಲಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದ್ದೇನೆ ಎಂದರು.

ಕುಡಿಯುವ ನೀರಿನ ಸಮಸ್ಯೆ ಇಲ್ಲ: ಬಳ್ಳಾರಿ ನಗರಕ್ಕೆ ಕುಡಿಯುವ ನೀರಿನ ಪೂರೈಕೆ ಸಂಬಂಧ ತುಂಗಭದ್ರಾ ಜಲಾಶಯದಿಂದ 400 ಕ್ಯೂಸೆಕ್ ನೀರನ್ನು ಕಾಲುವೆ ಮೂಲಕ ಕೆರೆಗೆ ತುಂಬಿಸಲು ಪ್ರಾದೇಶಿಕ ಆಯುಕ್ತರು ಆದೇಶ ಮಾಡಿದ್ದರೆ, ನಗರಕ್ಕೆ ಕುಡಿಯುವ ನೀರಿನ ಸಮಸ್ಯೆ ಆಗುವದಿಲ್ಲ ಎಂದು ಹೇಳಿದ ಶಾಸಕ ನಾರಾ ಭರತ್ ರೆಡ್ಡಿ, ಶಾಶ್ವತ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗೆ ಶೀಘ್ರ ಆರಂಭಿಸಲಾಗುವುದು ಎಂದರು.

ಈ ಸಂದರ್ಭ ಪಾಲಿಕೆಯ ಆಯುಕ್ತ ಮಂಜುನಾಥ, 38ನೇ ವಾರ್ಡಿನ ಸದಸ್ಯ ಕುಬೇರ, 37ನೇ ವಾರ್ಡಿನ ಮುಖಂಡ ಮೊಹಮ್ಮದ್ ಭಾಯ್, ಮಾಜಿ ಮೇಯರ್ ರಾಜೇಶ್ವರಿ, ಪಾಲಿಕೆಯ ಸದಸ್ಯರಾದ ಮಿಂಚು ಸೀನ, ಕಾಂಗ್ರೆಸ್ ಮುಖಂಡರಾದ ಪರುಶುರಾಮುಡು, ಲಾಲಸ್ವಾಮಿ, ಹೊನ್ನಪ್ಪ, ಹಗರಿ ಗೋವಿಂದ, ದೇವಿನಗರ ಹೊನ್ನೂರಪ್ಪ, ಪಿ.ರಾಜು, ಹಾವಭಾವಿ ಲೋಕೇಶ್, ಮುಕ್ಕಣ್ಣ, ಚರಣ್, ಥಿಯೇಟರ್ ಶಿವು, ಪೆದ್ದನ್ನ, ವಿಶ್ವನಾಥ, ಪದ್ಮಾ, ಹೊನ್ನೂರಸ್ವಾಮಿ ಮತ್ತಿತರರು ಹಾಜರಿದ್ದರು.

# ಸಾಹಿತ್ಯ ಅಕಾಡೆಮಿ: ಪುಸ್ತಕ ಬಹುಮಾನಕ್ಕೆ ಕೃತಿಗಳ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಕರ್ನಾಟಕ ಸಾಹಿತ್ಯ ಅಕಾಡೆಮಿಯು 2025 ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡಿರುವ ಸಾಹಿತ್ಯದ ವಿವಿಧ ಪ್ರಕಾರಗಳ ಕೃತಿಗಳನ್ನು ಬಹುಮಾನಕ್ಕಾಗಿ ಆಹ್ವಾನಿಸಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಕರಿಯಪ್ಪ.ಎನ್ ಅವರು ತಿಳಿಸಿದ್ದಾರೆ.

ಪ್ರತಿ ಪ್ರಕಾರದಲ್ಲಿ ವಿಮರ್ಶಕರು ಆಯ್ಕೆ ಮಾಡುವ ಒಂದು ಕೃತಿಗೆ ಬಹುಮಾನ ನೀಡಲಾಗುವುದು. ಬಹುಮಾನಕ್ಕೆ ಸಲ್ಲಿಸುವ ಕೃತಿಗಳು 2025ರ ಜನವರಿ 01 ರಿಂದ 2025ರ ಡಿಸೆಂಬರ್ 31 ರೊಳಗೆ ಪ್ರಥಮ ಆವೃತ್ತಿಯಾಗಿ ಪ್ರಕಟವಾಗಿರುವ ಕೃತಿಗಳಾಗಿರಬೇಕು. ಕೃತಿಯಲ್ಲಿ ಪ್ರಥಮ ಮುದ್ರಣ 2025 ಎಂದು ಮುದ್ರಿತವಾಗಿರಬೇಕು.

*ವಿವಿಧ ಪ್ರಕಾರಗಳ ಪುಸ್ತಕಗಳು:*

ಕಾವ್ಯ (ವಚನಗಳು ಮತ್ತು ಹನಿಗವನಗಳು ಸೇರಿ), ನವಕವಿಗಳ ಪ್ರಥಮ ಕವನಸಂಕಲನ (ದೃಢೀಕರಣ ಪತ್ರದೊಂದಿಗೆ), ಕಾವ್ಯ ಹಸ್ತಪ್ರತಿ (30 ವರ್ಷ ಒಳಗಿನ ಯುವಕವಿಗಳ ಅಪ್ರಕಟಿತ ಕವನ ಸಂಕಲನದ ಹಸ್ತಪ್ರತಿಯನ್ನು ಕಳಿಸಿಕೊಡಬೇಕು (ಜಿ.ಶ್ರೀನಿವಾಸರಾಜು ದತ್ತಿನಿಧಿ ಬಹುಮಾನಕ್ಕಾಗಿ), ಕಾದಂಬರಿ (ಅಕಾಡೆಮಿ ಪುಸ್ತಕ ಬಹುಮಾನ ಹಾಗೂ ಚದುರಂಗ ದತ್ತಿನಿಧಿ ಬಹುಮಾನಗಳಿಗಾಗಿ), ಸಣ್ಣಕತೆ, ನಾಟಕ, ಲಲಿತ ಪ್ರಬಂಧ (ಹರಟೆ ಮತ್ತು ವಿನೋದ ಸಾಹಿತ್ಯ ಸೇರಿ) (ಅಕಾಡೆಮಿ ಪುಸ್ತಕ ಬಹುಮಾನ ಹಾಗೂ ವಿ.ಸೀತಾರಾಮಯ್ಯ ಸೋದರಿ ಇಂದಿರಾ ದತ್ತಿನಿಧಿ ಬಹುಮಾನಗಳಿಗಾಗಿ), ಪ್ರವಾಸ ಸಾಹಿತ್ಯ, ಜೀವನಚರಿತ್ರೆ / ಆತ್ಮಕಥೆ (ಅಕಾಡೆಮಿ ಪುಸ್ತಕ ಬಹುಮಾನ ಹಾಗೂ ಸಿಂಪಿ ಲಿಂಗಣ್ಣ ದತ್ತಿನಿಧಿ ಬಹುಮಾನಗಳಿಗಾಗಿ), ಸಾಹಿತ್ಯ ವಿಮರ್ಶೆ (ಸಾಹಿತ್ಯ ಚರಿತ್ರೆ, ಸಾಹಿತ್ಯತತ್ವ ಮತ್ತು ಸೌಂದರ್ಯ ಮೀಮಾಂಸೆ ಸೇರಿ) (ಅಕಾಡೆಮಿ ಪುಸ್ತಕ ಬಹುಮಾನ ಹಾಗೂ ಪಿ. ಶ್ರೀನಿವಾಸರಾವ್ ದತ್ತಿನಿಧಿ ಬಹುಮಾನಗಳಿಗಾಗಿ), ಗ್ರಂಥ ಸಂಪಾದನೆ (ಪ್ರಾಚೀನ ಕೃತಿಗಳ ಸಂಪಾದನೆ), ಮಕ್ಕಳ ಸಾಹಿತ್ಯ, ವಿಜ್ಞಾನ ಸಾಹಿತ್ಯ (ಭೌತ, ರಸಾಯನ, ಗಣಿತ, ಪ್ರಾಣಿ, ಸಸ್ಯ, ಇಂಜಿನಿಯರಿಂಗ್, ವೈದ್ಯ, ಭೂ, ಖಗೋಳ, ಗೃಹವಿಜ್ಞಾನ, ಪರಿಸರ), ಮಾನವಿಕ (ಜಾನಪದ, ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಮನಃಶಾಸ್ತ್ರ, ಭಾಷಾಶಾಸ್ತ್ರ, ಶಿಕ್ಷಣ, ವಾಣಿಜ್ಯ, ಕಾನೂನು, ಗ್ರಂಥಭಂಡಾರ ವಿಜ್ಞಾನ, ಸಮೂಹಸಂವಹನ, ಧಾರ್ಮಿಕ, ದಾರ್ಶನಿಕ) ಸಂಶೋಧನೆ (ಕನ್ನಡ ಭಾಷೆ ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ಸಂಬಂಧಿಸಿದ ಸಂಶೋಧನೆ), ವೈಚಾರಿಕ/ಅಂಕಣ ಬರಹ, ಅನುವಾದ-1 (ಇಂಗ್ಲೀಷ್ ಸೇರಿದಂತೆ ಭಾರತೀಯ ಭಾಷೆಯಿಂದ ಕನ್ನಡಕ್ಕೆ ಅನುವಾದಗೊಂಡ ಸೃಜನ/ಸೃಜನೇತರ ಕೃತಿಗಳು), ಅನುವಾದ-2 (ಕನ್ನಡದಿಂದ ಅನ್ಯಭಾಷೆಗಳಿಗೆ ಅನುವಾದಗೊಂಡ ಸೃಜನ /ಸೃಜನೇತರ ಕೃತಿ), ಲೇಖಕರ ಮೊದಲ ಸ್ವತಂತ್ರಕೃತಿ (2025ರಲ್ಲಿ ಮುದ್ರಣಗೊಂಡ ಮೊದಲ ಸ್ವತಂತ್ರ ಕೃತಿ. ಖಾತರಿಪಡಿಸಲು ದೃಢೀಕರಣ ಪತ್ರ ಲಗತ್ತಿಸಬೇಕು) (ಅಕಾಡೆಮಿ ಪುಸ್ತಕ ಬಹುಮಾನ ಹಾಗೂ ಮಧುರಚೆನ್ನ ದತ್ತಿನಿಧಿ ಬಹುಮಾನಗಳಿಗಾಗಿ), ಕನ್ನಡದಿಂದ ಇಂಗ್ಲಿಷಿಗೆ ಅನುವಾದ (ಅಮೆರಿಕನ್ನಡ ದತ್ತಿನಿಧಿ ಬಹುಮಾನಕ್ಕಾಗಿ), ದಾಸ ಸಾಹಿತ್ಯ (ದಾಸ ಸಾಹಿತ್ಯ ಕುರಿತ ಸೃಜನ/ಸೃಜನೇತರ ಕೃತಿಗಳು), ಸಂಕೀರ್ಣ (ಮೇಲಿನ ಯಾವುದೇ ಪ್ರಕಾರಕ್ಕೆ ಹೊಂದಿಕೊಳ್ಳದ ವಿಶಿಷ್ಟ ಕೃತಿಗಳು), ಗಜಲ್ ಕಾವ್ಯ (ನಾಡೋಜ ಡಾ.ಶಾಂತರಸ ಗಜಲ್ ಕಾವ್ಯ ದತ್ತಿ ಬಹುಮಾನ), ಕುವೆಂಪು ಅವರ ಕೃತಿಗಳು ಮತ್ತು ಆಶಯಗಳ ಹಿನ್ನೆಲೆಯಲ್ಲಿ ರಚನೆಗೊಂಡ ಕನ್ನಡ ಸಾಹಿತ್ಯದ ಯಾವುದೇ ಪ್ರಕಾರದ ಪುಸ್ತಕ.

*ಬಹುಮಾನಕ್ಕಾಗಿ ಪರಿಗಣಿಸಲ್ಪಡದ ಕೃತಿಗಳು:*

ಮರುಮುದ್ರಣವಾದ ಪುಸ್ತಕಗಳು, ಪಿಎಚ್.ಡಿ ಪದವಿಗಾಗಿ ಸಿದ್ಧಪಡಿಸಿದ ಸಂಶೋಧನಾ ಗ್ರಂಥಗಳು, ಪಠ್ಯಪುಸ್ತಕಗಳು, ಅಕಾಡೆಮಿಯ ಗೌರವ ಪ್ರಶಸ್ತಿ ಪುರಸ್ಕೃತ ಸಾಹಿತಿಗಳ ಕೃತಿಗಳು, ಈಗಾಗಲೇ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಒಟ್ಟಾರೆ ಮೂರು ಬಾರಿ ಪುಸ್ತಕ ಬಹುಮಾನ ಪಡೆದವರ ಕೃತಿಗಳು, ಒಂದು ಪ್ರಕಾರದಲ್ಲಿ ಒಂದು ಬಾರಿ ಪುಸ್ತಕ ಬಹುಮಾನ ಪಡೆದವರ ಕೃತಿಗಳು, ಒಬ್ಬ ಲೇಖಕರಿಗೆ ಮೂರು ಬಾರಿ ಬೇರೆ ಬೇರೆ ಪ್ರಕಾರಗಳಲ್ಲಿ ಬಹುಮಾನ ಪಡೆಯುವ ಅವಕಾಶವಿದೆ.

ಬಹುಮಾನಕ್ಕಾಗಿ ಕಳುಹಿಸುವ ಕೃತಿಯ ಮೇಲೆ ತಿಳಿಸಿದ ಪ್ರಕಾರಗಳಲ್ಲಿ ಯಾವ ಸಾಹಿತ್ಯ ಪ್ರಕಾರಕ್ಕೆ ಸೇರುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ಪುಸ್ತಕದ ಶೀರ್ಷಿಕೆ ಪುಟದಲ್ಲಿ ಬರೆದಿರಬೇಕು.

ಲೇಖಕರು, ಪ್ರಕಾಶಕರು, ಸಾಹಿತ್ಯಾಸಕ್ತ ಸಾರ್ವಜನಿಕರು ನಾಲ್ಕು ಪ್ರತಿಗಳನ್ನು ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು-560002. ಈ ವಿಳಾಸಕ್ಕೆ ರಿಜಿ□□□□□□□ ಅಂಚೆ, ಕೊ-ರಿಯರ್ ಅಥವಾ ಖುದ್ದಾಗಿ ಜೂನ್ 30 ರೊಳಗೆ ತಲುಪುವಂತೆ ಕಳುಹಿಸಬೇಕು.

ಹೆಚ್ಚಿನ ವಿವರಗಳಿಗಾಗಿ ಅಕಾಡೆಮಿಯ ವೆಬ್‌ಸೈಟ್ ತಿತಿತಿ.ಚಿಚಿಚಿಚಿಬಿಚಿಜಜಟಥಿ. ಇಚಿಡಿಟಚಿಣಚಿಇಚಿ.ರಠಠ.ಎಟಿ ಗೆ ಭೇಟಿ ನೀಡಿ ವಿಕ್ಷೀಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆರ್‌ವೈಎಂಸಿ: ಆರೋಗ್ಯ ಜಾಗೃತಿ ಕಾರ್ಯಕ್ರಮ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಇತ್ತೀಚೆಗೆ ಮಹಿಳಾ ಆರೋಗ್ಯ ಸುದ್ದಿಗಳು ರೋಗ ತಡೆಗಟ್ಟುವಿಕೆಯಲ್ಲಿ ಗಮನಾರ್ಹ ಪ್ರಗತಿಗಳ ಮೇಲೆ ಕೇಂದ್ರೀಕರಿಸುತ್ತಿವೆ. ಇದರಲ್ಲಿ ಎಂಡೊಮೆಟ್ರಿಯೋಸಿಸ್ ಆರಂಭಿಕ ಗುರುತಿಸುವಿಕೆಯ ಅಧ್ಯಯನಗಳು ಸೇರಿವೆ. ಪ್ರಮುಖ ಪ್ರವೃತ್ತಿಗಳು ಭಾರತದಲ್ಲಿ ಆರೋಗ್ಯ ಸೇವೆಯ ಪ್ರವೇಶವನ್ನು ಸುಧಾರಿಸುವುದು ಸೇರಿವೆ

ಎಂದು ಹೆಸರಾಂತ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ವೈದ್ಯ ಡಾ.ಬಿ.ಕೆ.ಅನುಪಮ ಸುಂದರ್ ಹೇಳಿದರು.

ಅವರು ನಗರದ ರಾವ್ ಬಹದ್ದೂರ್ ವೈ ಮಹಾಬಲೇಶ್ವರಪ್ಪ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮಹಿಳಾಕೋಶ ಹಾಗೂ ಬಳ್ಳಾರಿಯ ಪ್ರಸೂತಿ ಸಮಾಜದ (ಎಫ್ ಒಜಿಎಸ್) ಆಶ್ರಯದಲ್ಲಿ ಮಹಿಳೆಯರಿಗೆ, ವಿದ್ಯಾರ್ಥಿನಿಯರಿಗೆ ಹಮ್ಮಿಕೊಂಡಿದ್ದ ಆರೋಗ್ಯ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಎಂಡೊಮೆಟ್ರಿಯೋಸಿಸ್ ಧೀರ್ಘಕಾಲದ, ಆಗಾಗ್ಗೆ ನೋವಿನಿಂದ ಕೂಡಿದ ಖಾಯಿಲೆಯಾಗಿದೆ. ಸಂತಾನೋತ್ಪತ್ತಿ ವಯಸ್ಸಿನ ಸುಮಾರು ಶೇ.10 ರಷ್ಟು ಮಹಿಳೆಯರ ಮೇಲೆ ಪರಿಣಾಮ ಬೀರುತ್ತಿದೆ. ಇದು ತೀವ್ರ ಮುಟ್ಟಿನ ನೋವು, ಧೀರ್ಘಕಾಲದ ಶ್ರೇಣಿಯ ನೋವು, ಬಂಜೆತನ ಮತ್ತು ಆಯಾಸಕ್ಕೆ ಕಾರಣವಾಗಲಿದೆ. ಇದು ಆಗಾಗ್ಗೆ ಆತಂಕ, ಖಿನ್ನತೆ ಸೇರಿದಂತೆ ಜೀವನದ ಗುಣಮಟ್ಟಕ್ಕೆ ಗಮನಾರ್ಹ, ದೀರ್ಘಕಾಲೀನ ಅಡ್ಡಿಯನ್ನುಂಟು ಮಾಡಲಿದೆ. ಸಕಾಲಿಕ ತಡೆಗಟ್ಟುವಿಕೆಯ ಕ್ರಮಗಳನ್ನು ಅನುಸರಿಸುವುದರಿಂದ ಎದುರಾಗುವ ನಾನಾ ತೊಂದರೆಗಳಿಂದ ಮುಕ್ತರಾಗಬಹುದು ಎಂದರು.

ಇನ್ನೊಬ್ಬ ಪ್ರಸೂತಿ, ಸ್ತ್ರೀರೋಗ ತಜ್ಞ ವೈದ್ಯರಾದ ಡಾ.ಲಕ್ಷ್ಮೀ ಪಾವನ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಮಹಿಳಾ ಕೋಶದ ಸಂಯೋಜಕಿ ಡಾ.ಎಂ.ಎಸ್.ಶೋಭಾ ಸೇರಿದಂತೆ ಇತರರಿದ್ದರು.

# ಸಿಡಗಿನ ಮೊಳೆಯಲ್ಲಿ ಓಂಕಾರೇಶ್ವರ ರಥೋತ್ಸವ

• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ತಾಲೂಕಿನ ಸಿಡಿಗಿನಮೊಳ ಗ್ರಾಮದಲ್ಲಿ ಹಂಪೆ ಹುಣ್ಣಿಮೆ ಪ್ರಯುಕ್ತವಾಗಿ ಗ್ರಾಮದ ಆರಾಧ್ಯ ದೈವ ಶ್ರೀ ಓಂಕಾರೇಶ್ವರ ತಾತನವರ ಜಾತ್ರೆ ನಿನ್ನೆ ಜರುಗಿತು

ಬೆಳಿಗ್ಗೆ ಬ್ರಾಹ್ಮಿ ಮುಹೂರ್ತದಲ್ಲಿ ಸಕಲ ಮಂಗಳವಾದ್ಯಗಳೊಂದಿಗೆ ಪುರವಂತರಿಂದ ವೀರಭದ್ರ ದೇವರ ಪವಾಡಗಳನ್ನು ಒಡುಪಿನ ಮೂಲಕ ಹೇಳುತ್ತಾ ಗ್ರಾಮದ ಸಮಸ್ತ ಭಕ್ತಾದಿಗಳ ಸಮ್ಮುಖದಲ್ಲಿ ಗಂಗೆಯನ್ನು ತಂದು ಶ್ರೀ ಕಲ್ಲೇಶ್ವರ ಸ್ವಾಮಿಗೆ ರುದ್ರಾಭಿಷೇಕವನ್ನು ಮಾಡಲಾಯಿತು.

ಸಂಜೆ ಶ್ರೀ ಓಂಕಾರೇಶ್ವರ ಹೂವಿನ ರಥೋತ್ಸವಕ್ಕೆ ವಿವಿಧ ರೀತಿಯ ಪುಷ್ಪ ಗಳಿಂದ ಅಲಂಕಾರ ಗೊಳಿಸಿ ಶ್ರೀ ತಾತನವರ ಬೆಳ್ಳಿಯ ಉತ್ಸವ ಮೂರ್ತಿಯನ್ನು ರಥೋತ್ಸವದಲ್ಲಿ ಇರಿಸಿ ಗ್ರಾಮದ ಪ್ರಮುಖ ರಸ್ತೆಯಲ್ಲಿ ನೆರೆದ ಸುತ್ತಮುತ್ತಲಿನ ಗ್ರಾಮಸ್ಥರೂ ಪಾಲ್ಗೊಡು ಭಕ್ತಿ ಭಾವದಿಂದ ಎಳೆಯಲಾಯಿತು.



# ಸಂಭ್ರಮದ ಆಂಜನೇಯ ಸ್ವಾಮಿ ರಥೋತ್ಸವ




• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ತಾಲ್ಲೂಕಿನ ಹಿರೇಹಡ್ಲಿಗಿ ಗ್ರಾಮದಲ್ಲಿ ಶ್ರೀ ಆಂಜನೇಯ ಸ್ವಾಮಿಯ ರಥೋತ್ಸವವು ಅತ್ಯಂತ ವೈಭವ ಹಾಗೂ ಸಡಗರ ಸಂಭ್ರಮದಿಂದ ನೆರವೇರಿತು.

ಹನುಮಾನ್ ಜಯಂತಿ ಹಿನ್ನೆಲೆ ಗ್ರಾಮದ ಆರಾಧ್ಯದೈವ ಆಂಜನೇಯ ಸ್ವಾಮಿಯ ಕೃಪೆಗೆ ಪಾತ್ರರಾಗಲು ಸಾವಿರಾರು ಭಕ್ತರು ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ರಥೋತ್ಸವದ ಅಂಗವಾಗಿ ಬೆಳಿಗ್ಗೆಯಿಂದಲೇ ದೇವಸ್ಥಾನದಲ್ಲಿ ವಿಶೇಷ ಧಾರ್ಮಿಕ ವಿಧಿವಿಧಾನಗಳು ಜರುಗಿದವು. ಸ್ವಾಮಿಗೆ ಪಂಚಾಮೃತ ಅಭಿಷೇಕ, ವಿಶೇಷ ಅಲಂಕಾರ ಹಾಗೂ ಮಹಾಮಂಗಳಾರತಿಯನ್ನು ನೆರವೇರಿಸಲಾಯಿತು. ಗ್ರಾಮಸ್ಥರು ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಭಕ್ತರು ಮುಂಜಾನೆಯಿಂದಲೇ ದೇವಸ್ಥಾನಕ್ಕೆ ಆಗಮಿಸಿ ಸ್ವಾಮಿಯ ದರ್ಶನ ಪಡೆದರು. ಸಂಜೆ ನಿಗದಿತ ಶುಭ ಮುಹೂರ್ತದಲ್ಲಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಅಲಂಕೃತಗೊಂಡ ರಥದಲ್ಲಿ ಆಂಜನೇಯ ಸ್ವಾಮಿಯ ರಥೋತ್ಸವನ್ನು ಭಕ್ತರು ಭಕ್ತಿಯ ಜಯಘೋಷಗಳೊಂದಿಗೆ ರಥವನ್ನು ಎಳೆದರು. ಆಂಜನೇಯ ದೇವಸ್ಥಾನದಿಂದ ಪ್ರಾರಂಭವಾದ ರಥಯಾತ್ರೆಯು ಗ್ರಾಮದ ಪ್ರಮುಖ ರಸ್ತೆಗಳ ಮೂಲಕ ಸಾಗಿ ವಾಲ್ಮೀಕಿ ವೃತ್ತದವರೆಗೆ ಅತ್ಯಂತ ಅದ್ದೂರಿಯಾಗಿ ತಲುಪಿತು. ರಥವು ಸಾಗುವ ಮಾರ್ಗದುದ್ದಕ್ಕೂ ಭಕ್ತರು ಬಾಳೆಹಣ್ಣು ಮತ್ತು ಉತ್ತತ್ತಿಯನ್ನು ರಥಕ್ಕೆ ಎಸೆಯುವ ಮೂಲಕ ತಮ್ಮ ಹರಕೆಯನ್ನು ತೀರಿಸಿದರು. ವಿವಿಧ ಮೇಳಗಳ ವಾದ್ಯಘೋಷಗಳು, ಭಜನಾ ತಂಡಗಳ ಹಾಡುಗಳು ರಥೋತ್ಸವಕ್ಕೆ ವಿಶೇಷ ಮೆರುಗು ನೀಡಿದವು. ವಾಲ್ಮೀಕಿ ವೃತ್ತದ ಬಳಿ ರಥವು ಬಂದಾಗ ಭಕ್ತರ ಸಂಭ್ರಮ ಮುಗಿಲು ಮುಟ್ಟಿತ್ತು. ಗ್ರಾಮದ ಹಿರಿಯರು, ದೇವಸ್ಥಾನ ಸಮಿತಿಯ ಪದಾಧಿಕಾರಿಗಳು ಹಾಗೂ ಯುವಕ ಸಂಘದ ಸದಸ್ಯರು ರಥೋತ್ಸವದ ಯಶಸ್ಸಿಗೆ ಶ್ರಮಿಸಿದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಗ್ರಾಮಸ್ಥರೇ ಸ್ವಯಂಪ್ರೇರಿತರಾಗಿ ಶಿಸ್ತನ್ನು ಕಾಪಾಡಿಕೊಂಡಿದ್ದು ವಿಶೇಷವಾಗಿತ್ತು. ರಥೋತ್ಸವದ ನಂತರ ಭಕ್ತಾದಿಗಳಿಗೆ ಭಕ್ತಾಧಿಗಳು ಅನ್ನಸಂತರ್ಪಣೆ (ಪ್ರಸಾದ) ಏರ್ಪಡಿಸಿದ್ದರು. ಈ ಸಂದರ್ಭದಲ್ಲಿ ಗ್ರಾಮದ ಹಿರಿಯ ಮುಖಂಡರು, ಮಕ್ಕಳು, ಮಹಿಳೆಯರು ಭಾಗವಹಿಸಿದ್ದರು.

# ಸಮಗ್ರ ಬೇಸಿಗೆ ವಿಜ್ಞಾನ ಶಿಬಿರ ಆಯೋಜನೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಜಿಲ್ಲಾ ವಿಜ್ಞಾನ ಕೇಂದ್ರದ ವತಿಯಿಂದ ಮಕ್ಕಳಲ್ಲಿ ವಿಜ್ಞಾನದ ಆಸಕ್ತಿ ಮೂಡಿಸಲು ಇದೇ ಏಪ್ರಿಲ್ 13 ರಿಂದ ಮೇ 2 ರವರೆಗೆ ಕಲಬುರಗಿಯ ಜಿಲ್ಲಾ ವಿಜ್ಞಾನ ಕೇಂದ್ರದಲ್ಲಿ ಸಮಗ್ರ ಬೇಸಿಗೆ ವಿಜ್ಞಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಲಬುರಗಿ ಜಿಲ್ಲಾ ವಿಜ್ಞಾನ ಅಧಿಕಾರಿಗಳು ತಿಳಿಸಿದ್ದಾರೆ. ಇದೇ ಏಪ್ರಿಲ್ 13 ರಿಂದ ಮೇ 09 ರವರೆಗೆ ಪ್ರತಿದಿನ ಬೆಳಿಗ್ಗೆ 10.30 ರಿಂದ ಸಂಜೆ 4.30 ಗಂಟೆಯವರೆಗೆ ಪ್ರಾಥಮಿಕ, ಹಿರಿಯ ಹಾಗೂ ಪ್ರೌಡಶಾಲಾ ಮಕ್ಕಳಿಗೆ ಬೇಸಿಗೆ ಶಿಬಿರದ ವಿಜ್ಞಾನ ತರಬೇತಿಗಳನ್ನು ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ಏಪ್ರಿಲ್ 13 ರಿಂದ 18 ರವರೆಗೆ ಪ್ರತಿದಿನ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಭೌತಶಾಸ್ತ್ರ ಮತ್ತು ಮಧ್ಯಾಹ್ನ 2 ರಿಂದ ಸಂಜೆ 4.30 ಗಂಟೆಯವರೆಗೆ ವರ್ಣರಂಜಿತ ರಸಾಯನಶಾಸ್ತ್ರ ಕುರಿತು ತರಗತಿಗಳು ಜರುಗಲಿದೆ. ಏಪ್ರಿಲ್ 20 ರಿಂದ 25 ರವರೆಗೆ ಪ್ರತಿದಿನ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಎಲೆಕ್ಟ್ರಾನಿಕ್ಸ್ ಮತ್ತು ಮಧ್ಯಾಹ್ನ 2 ರಿಂದ ಸಂಜೆ 04.30 ಗಂಟೆಯವರೆಗೆ ಜೀವಶಾಸ್ತ್ರ ಹಾಗೂ ಏಪ್ರಿಲ್ 27 ರಿಂದ ಮೇ 02 ವರೆಗೆ ಪ್ರತಿದಿನ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಸೃಜನಾತ್ಮಕ ಗಣಿತದ ಬಗ್ಗೆ ತರಗತಿಗಳು ನಡೆಯಲಿವೆ.

ಅದರಂತೆ ಏಪ್ರಿಲ್ 27 ರಿಂದ ನಾಲ್ಕರಿಂದ ಏಳನೇ ತರಗತಿ ಓದುತ್ತಿರುವ ಮಕ್ಕಳಿಗೆ "ಸೃಜನಶೀಲತೆಯೊಂದಿಗೆ ವಿಜ್ಞಾನವನ್ನು ಅನ್ವೇಷಿಸುವುದು" ತರಗತಿಗಳು ನಡೆಯಲಿದೆ. ಅದರಲ್ಲಿ ಏಪ್ರಿಲ್ 27 ರಿಂದ ಮೇ 02ವರೆಗೆ ಮೊದಲ ಬ್ಯಾಚ್ ಮತ್ತು ಮೇ 04 ರಿಂದ 09 ವರೆಗೆ ಎರಡನೇ ಬ್ಯಾಚ್ ನಡೆಯಲಿವೆ. ಹಾಗೂ ಪ್ರತಿ ಬ್ಯಾಚ್‌ಗೆ 1,000 ರೂ. ಶುಲ್ಕವಿರುತ್ತದೆ.

ಪ್ರತಿ ಬ್ಯಾಚ್‌ಗೆ ಕೇವಲ 30 ವಿದ್ಯಾರ್ಥಿಗಳಿಗೆ ಮಾತ್ರ ನೋಂದಣಿ ಸೀಮಿತಗೊಳಿಸಲಾಗಿದೆ. ಶಿಬಿರವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದವರಿಗೆ ಪ್ರಮಾಣ ಪತ್ರ ನೀಡಲಾಗುವುದು. ಆಸಕ್ತಿಯುಳ್ಳ ಅಭ್ಯರ್ಥಿಗಳು ಇದರ ಸದುಪಯೋಗ ಪಡೆದುಕೊಳಬಹುದು.

# ಚೆಸ್ ಒಂದು ಮೈಂಡ್ ಗೇಮ್ ಪೋಲಾ ಪ್ರವೀಣ್ ಅಭಿಮತ

• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

"ಚದುರಂಗವು ಕೇವಲ ಆಟವಲ್ಲ, ಅದು ಮನಸ್ಸನ್ನು ತರಬೇತುಗೊಳಿಸುವ ಮಹತ್ವದ ಸಾಧನ" ಎಂದು ಬಳ್ಳಾರಿ ಜಿಲ್ಲಾ ಚೆಸ್ ಅಸೋಸಿಯೇಷನ್ ಗೌರವಾಧ್ಯಕ್ಷರಾದ ಪೋಲಾ ಪ್ರವೀಣ್ ಅಭಿಪ್ರಾಯಪಟ್ಟರು. ನಗರದ ಪೋಲಾ ಹೋಟೆಲ್‌ನ ಡೈಮಂಡ್ ಸಭಾಂಗಣದಲ್ಲಿ ನಡೆದ ಭವ್ಯ ಚೆಸ್ ಪಂದ್ಯಾವಳಿಯ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಅಖಂಡ ಬಳ್ಳಾರಿ ಜಿಲ್ಲಾ ಚೆಸ್ ಅಸೋಸಿಯೇಷನ್, ಬಳ್ಳಾರಿ ಜಿಲ್ಲಾ ಕನಕದುರ್ಗ ಚೆಸ್ ಅಕಾಡೆಮಿ ಹಾಗೂ ಬಳ್ಳಾರಿ ಡಿಸ್ಟ್ರಿಕ್ ಚೆಸ್ ಅಸೋಸಿಯೇಷನ್‌ಗಳ ಸಂಯುಕ್ತ ಆಶ್ರಯದಲ್ಲಿ 11, 13, 15 ಮತ್ತು 17 ವರ್ಷ ವಯೋಮಿತಿಯೊಳಗಿನ ಮಕ್ಕಳಿಗಾಗಿ ಆಯೋಜಿಸಲಾದ ಈ ಸ್ಪರ್ಧೆಯನ್ನು ಪೋಲಾ ಪ್ರವೀಣ್ ಅವರು ಕಾಯಿಯನ್ನು ಸರಿಸುವ ಮೂಲಕ ಉದ್ಘಾಟಿಸಿದರು.

ತಮ್ಮ ಭಾಷಣದಲ್ಲಿ ಅವರು ಚೆಸ್ ಆಟದ ಮಹತ್ವವನ್ನು ವಿಶೇಷವಾಗಿ ಒತ್ತಿಹೇಳುತ್ತಾ, "ಚದುರಂಗವು ಮಕ್ಕಳಲ್ಲಿ ಏಕಾಗ್ರತೆ, ತಾಳ್ಮೆ, ತ್ವರಿತ ನಿರ್ಧಾರ ಸಾಮರ್ಥ್ಯ ಹಾಗೂ ತಾರ್ಕಿಕ ಚಿಂತನೆಗಳನ್ನು ಬೆಳೆಸುತ್ತದೆ. ಇವುಗಳು



ಅವರ ವಿದ್ಯಾಭ್ಯಾಸದಲ್ಲಿಯೂ ದೊಡ್ಡ ಮಟ್ಟದಲ್ಲಿ ಸಹಾಯಕವಾಗುತ್ತವೆ" ಎಂದರು. ಇದೇ ಸಂದರ್ಭದಲ್ಲಿ, ಬಳ್ಳಾರಿ ಜಿಲ್ಲೆಯ ಚೆಸ್ ಪ್ರತಿಭೆಗಳ ಬೆಳವಣಿಗೆಗೆ ತಮ್ಮ ಸಂಪೂರ್ಣ ಬೆಂಬಲವಿದೆ ಎಂದು ಘೋಷಿಸಿದ ಪೋಲಾ ಪ್ರವೀಣ್, "ಜಿಲ್ಲೆಯ ಚೆಸ್ ಪಟುಗಳು ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿ ಬಳ್ಳಾರಿಯ ಕೀರ್ತಿಯನ್ನು ಹೆಚ್ಚಿಸಬೇಕು. ಇದಕ್ಕಾಗಿ ಯಾವುದೇ ಸಂದರ್ಭದಲ್ಲೂ ಚೆಸ್ ಪಂದ್ಯಾವಳಿಗಳನ್ನು ಆಯೋಜಿಸಲು ನಾನು ತನು–ಮನ–ಧನದೊಂದಿಗೆ ಸಹಕಾರ ನೀಡಲು ಸಿದ್ಧನಿದ್ದೇನೆ" ಎಂದು ಭರವಸೆ ನೀಡಿದರು. ಅವರ ಈ ದಿಟ್ಟ ನಿಲುವು ಹಾಗೂ ಕ್ರೀಡಾಭಿಮಾನವು ಯುವ ಪ್ರತಿಭೆಗಳಲ್ಲಿಯೂ ಹೊಸ ಉತ್ಸಾಹ ಮೂಡಿಸಿದ್ದು, ಸಮಾರಂಭಕ್ಕೆ ಹೊಸ ಮೆರುಗು ನೀಡಿತು. ಪೋಲಾ ಪ್ರವೀಣ್ ಅವರ ಪ್ರೋತ್ಸಾಹದಿಂದ ಬಳ್ಳಾರಿ ಜಿಲ್ಲೆಯಲ್ಲಿ ಚೆಸ್ ಕ್ರೀಡೆಗೆ ಹೊಸ ಚೈತನ್ಯ ಸಿಗಲಿದೆ ಎಂಬ ವಿಶ್ವಾಸ ವ್ಯಕ್ತವಾಗಿದೆ. ಈ ಸ್ಪರ್ಧೆಯಲ್ಲಿ ಬಳ್ಳಾರಿ ಮತ್ತು ವಿಜಯನಗರ ಅವಳಿ ಜಿಲ್ಲೆಗಳಿಂದ ಸುಮಾರು 150ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದು, ವಿಜೇತರಾದವರಿಗೆ ಪ್ರಮಾಣಪತ್ರ ಮತ್ತು ಟ್ರೋಫಿ ನೀಡಲಾಗುವುದು ಎಂದು ಬಳ್ಳಾರಿ ಜಿಲ್ಲಾ ಚೆಸ್ ಅಸೋಸಿಯೇಷನ್ ಅಧ್ಯಕ್ಷರಾದ ಬಿ.ಹೆಚ್.ಎಂ ವಿರೂಪಾಕ್ಷಯ್ಯ ತಿಳಿಸಿದರು. ಕಾರ್ಯಕ್ರಮದಲ್ಲಿ ವಿ.ವಿ.ಎಸ್.ಎಸ್ ಟ್ರಸ್ಟ್ ಅಧ್ಯಕ್ಷ ಕೆ.ವಿ. ಶೆಟ್ಟಿ, ಎಂ.ಎಸ್.ಜಿ ಕನ್ಸ್ಟ್ರಕ್ಷನ್ ಮಾಲಿಕ ಎಂ. ಸಿದ್ದರಾಮನಗೌಡ, ಗೌರಮ್ಮ ಜಂಬಯ್ಯ ಸ್ವಾಮಿ ಚಾರಿಟೇಬಲ್ ಮತ್ತು ಶಿಕ್ಷಣ ಟ್ರಸ್ಟ್ ಅಧ್ಯಕ್ಷ ಸರ್ವಯ ಸ್ವಾಮಿ, ಡೆಲ್ಲಿ ಇಂಟರ್‌ನ್ಯಾಷನಲ್ ಪಬ್ಲಿಕ್ ಶಾಲೆಯ ಜೆ.ಸಿ. ರೆಡ್ಡಿ, ಟೈಗರ್ ಹಿಲ್ಸ್ ಶಾಲೆಯ ಅಧ್ಯಕ್ಷ ರಂಗಸ್ವಾಮಿ ಹಾಗೂ ಅಂತರಾಷ್ಟ್ರೀಯ ಅರ್ಬಿಟರ್ ಬಸವರಾಜ್ ಎಂ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಒಟ್ಟಾರೆ, ಈ ಚೆಸ್ ಪಂದ್ಯಾವಳಿ ಕೇವಲ ಸ್ಪರ್ಧೆಯಾಗಿ ಉಳಿಯದೆ, ಮಕ್ಕಳ ಮನೋವಿಕಾಸಕ್ಕೆ ಬುನಾದಿ ಹಾಕುವ ಮಹತ್ವದ ವೇದಿಕೆಯಾಗಿ ಪರಿಣಮಿಸಿದ್ದು, ಇದಕ್ಕೆ ಪೋಲಾ ಪ್ರವೀಣ್ ಅವರಂತಹ ಕ್ರೀಡಾಭಿಮಾನಿಗಳ ಬೆಂಬಲವೇ ಪ್ರಮುಖ ಶಕ್ತಿ ಎನ್ನಬಹುದು.

# ಡಾರ್ಮೆಟರಿ ನಿಲಯ ಉದ್ಘಾಟಿಸಿದ ಜಿಲ್ಲಾಧಿಕಾರಿ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿರವರು ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಬರುವವರ ಗರ್ಭಿಣಿ ಬಾಣಂತಿಯರ ಪೋಷಕರಿಗೆ ಕ್ಷೇಮವಾಗಿ ತಂಗಲು ಉಚಿತವಾಗಿ ವಸತಿ ನಿಲಯದಲ್ಲಿ (ಡಾರ್ಮಟರಿ) ಉಳಿದುಕೊಳ್ಳಲು ಸುಸಜ್ಜಿತ ಕಾಟ್–ಬೆಡ್, ಶೌಚಾಲಯ, ಹಾಗೂ ಕುಡಿಯುವ ನೀರಿನ ವ್ಯವಸ್ಥೆಯ ವಸತಿ ನಿಲಯ (ಡಾರ್ಮೆಟರಿ )ವನ್ನು ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಹಸ್ತಾಂತರಿಸಿದರು.

ಈ ವೇಳೆಂ ಬಿಎಂಎಂನ ಗಣೇಶ ಹೆಗ್ಡೆ, ಜಿಲ್ಲಾ ಆರೋಗ್ಯಧಿಕಾರಿ ಡಾ॥ ಎಲ್.ಆರ್.ಶಂಕರ್ ನಾಯ್ಕ್,

ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿ ಡಾ॥ ಜಂಬಯ್ಯ, ಶಸ್ತ್ರಚಿಕಿತ್ಸಕರು ಹಾಗೂ ಎಲ್ಲಾ ಕಾರ್ಯಕ್ರಮಧಿಕಾರಿಗಳು, ಹಿರಿಯ ತಜ್ಞವೈಧ್ಯಾಧಿಕಾರಿಗಳು, ಸಿಬ್ಬಂದಿ ವರ್ಗದವರು ಇದ್ದರು.



# ಮೇಲಾಧಿಕಾರಿಗಳ ಮಾರ್ಗದರ್ಶನ, ಇಲಾಖೆ ನೀಡಿದ ಶಕ್ತಿಯಿಂದ ಸೇವೆ ತೃಪ್ತಿ: ಶ್ರೀನಿವಾಸಲು

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಸೇವಾವಧಿಯಲ್ಲಿ ಎದುರಾದ ಕ್ಲಿಷ್ಟ ಪರಿಸ್ಥಿತಿಗಳು ಮತ್ತು ಕಠಿಣ ಪ್ರಕರಣಗಳ ತನಿಖೆಯಲ್ಲಿ ಮೇಲಾಧಿಕಾರಿಗಳ ಮಾರ್ಗದರ್ಶನ ಹಾಗೂ ಪೊಲೀಸ್ ಇಲಾಖೆ ನೀಡಿದ ಶಕ್ತಿಯಿಂದ ಸೇವೆ ತೃಪ್ತಿ ನೀಡಿದೆ ಎಂದು ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆಯ ನಿವೃತ್ತ ಸಹಾಯಕ ಸಬ್–ಇನ್ಸ್‌ಪೆಕ್ಟರ್ ಶ್ರೀನಿವಾಸಲು ಎಂ. ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ನಗರದ ಜಿಲ್ಲಾ ಸಶಸ್ತ್ರ ಪೊಲೀಸ್ ಕವಾಯತು (ಡಿಎಆರ್) ಮೈದಾನದಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಪೊಲೀಸ್ ಧ್ವಜ ದಿನಾಚರಣೆ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಗೌರವ ವಂದನೆ ಸ್ವೀಕರಿಸಿ ಅವರು ಮಾತನಾಡಿದರು.

ನಿವೃತ್ತಿಯ ನಂತರವೂ ಸಿಗುವ ಆರೋಗ್ಯ ಭಾಗ್ಯ ಯೋಜನೆ, ಪೊಲೀಸ್ ಕ್ಯಾಂಟೀನ್ ಮತ್ತು ವೈದ್ಯಕೀಯ ವೆಚ್ಚ ಮರುಪಾವತಿ ಸೌಲಭ್ಯಗಳು ಅನುಕೂಲಕರವಾಗಿದ್ದು, ನಿವೃತ್ತ ಸಿಬ್ಬಂದಿಗೆ ಇಲಾಖೆಯಿಂದ ಬರಬೇಕಾದ ಸೌಲಭ್ಯಗಳು ವಿಳಂಬವಿಲ್ಲದೆ ತಲುಪುವಂತಾಗಬೇಕು ಎಂದರು.

ಕರ್ತವ್ಯದಲ್ಲಿದ್ದಾಗ ಮೃತಪಟ್ಟ ಸಿಬ್ಬಂದಿಯ ಕುಟುಂಬದವರಿಗೆ ಅನುಕಂಪದ ಆಧಾರದ ಉದ್ಯೋಗ ಮತ್ತು ಇತರ ದಾಖಲೆಗಳ ವಿಲೇವಾರಿ ಬಗ್ಗೆ ಮಾರ್ಗದರ್ಶನ ನೀಡಲು ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಪ್ರತ್ಯೇಕ ವಿಭಾಗ ಅಥವಾ ಸಹಾಯ ಕೇಂದ್ರವನ್ನು ತೆರೆಯಬೇಕು ಎಂದು ಮನವಿ ಮಾಡಿದರು.



ನಿವೃತ್ತ ಅಧಿಕಾರಿಗಳನ್ನು ಮುಖ್ಯ ಅತಿಥಿಗಳನ್ನಾಗಿ ಕರೆಸಿ ಗೌರವಿಸುವ ಸಂಪ್ರದಾಯಕ್ಕೆ ಪೊಲೀಸ್ ಇಲಾಖೆಗೆ ಇದೇ ಸಂದರ್ಭದಲ್ಲಿ ಕೃತಜ್ಞತೆ ಸಲ್ಲಿಸಿದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎಸ್.ನವೀನ್‌ಕುಮಾರ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಪೊಲೀಸ್ ಇಲಾಖೆಯು ತನ್ನ ಸಿಬ್ಬಂದಿ ಮತ್ತು ನಿವೃತ್ತ ಅಧಿಕಾರಿಗಳ ಕ್ಷೇಮೋಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದೆ. ಕರ್ತವ್ಯದ ಅವಧಿಯಲ್ಲಿ ಮರಣ ಹೊಂದಿದ ಅಧಿಕಾರಿಗಳು ಹಾಗೂ ಮೃತ ನಿವೃತ್ತ ಅಧಿಕಾರಿಗಳ ಕುಟುಂಬಗಳಿಗೆ ನಗದು, ನಿವೃತ್ತ ಅಧಿಕಾರಿಗಳ ಆರೋಗ್ಯ ರಕ್ಷಣೆಗಾಗಿ ವೈದ್ಯಕೀಯ ಚಿಕಿತ್ಸಾ ಧನ ವಿತರಿಸಲಾಗಿದೆ ಎಂದು ತಿಳಿಸಿದರು.

ಧ್ವಜ ದಿನಾಚರಣೆಯ ಮೂಲಕ ಸಂಗ್ರಹವಾಗುವ ಮೊತ್ತವನ್ನು ಶೇ.50 ರಷ್ಟು ರಾಜ್ಯ ನಿವೃತ್ತ ಅಧಿಕಾರಿಗಳ ಕಲ್ಯಾಣ ನಿಧಿಗೆ ಮತ್ತು ಉಳಿದ ಶೇ.50 ರಷ್ಟು ಕೇಂದ್ರ ನಿಧಿಗೆ ಕಳುಹಿಸಲಾಗುತ್ತದೆ. ರಾಜ್ಯಕ್ಕೆ ಲಭಿಸುವ ಈ ಶೇ.50 ರಷ್ಟು ಹಣವನ್ನು ಪೊಲೀಸರ ಮತ್ತು ಅವರ ಕುಟುಂಬದ ವೈದ್ಯಕೀಯ ಸೌಲಭ್ಯ ಹಾಗೂ ತುರ್ತು ಆರ್ಥಿಕ ಸಹಾಯಕ್ಕಾಗಿ ವಿನಿಯೋಗಿಸಲಾಗುತ್ತದೆ ಎಂದು ಹೇಳಿದರು.

ಪೊಲೀಸ್ ಇಲಾಖೆಯ ಘನತೆಯನ್ನು ಎತ್ತಿಹಿಡಿಯುವಂತೆ ಮತ್ತು ಸಾರ್ವಜನಿಕರ ಸಹಕಾರದೊಂದಿಗೆ ಉತ್ತಮ ಸೇವೆ ಮುಂದುವರಿಸುವಂತೆ ಅಧಿಕಾರಿಗಳಿಗೆ ಕರೆ ನೀಡಿದರು.

ಬಳ್ಳಾರಿಯ ಡಿಎಆರ್ ಡಿಎಸ್ಪಿ ತಿಪ್ಪೇಸ್ವಾಮಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಸೇನಾಪಡೆಯು ಕೇವಲ ಯುದ್ಧದ ಸಮಯದಲ್ಲಿ ಹೋರಾಡಿದರೆ, ಪೊಲೀಸ್ ಇಲಾಖೆಯು ಪ್ರತಿದಿನ ಹತ್ತು ಹಲವಾರು ಕಷ್ಟಕರ ಸನ್ನಿವೇಶಗಳನ್ನು ಎದುರಿಸಿ ಸಮಾಜದ ರಕ್ಷಣೆಗೆ ಶ್ರಮಿಸುತ್ತದೆ ಎಂದು ಸ್ಮರಿಸಿದರು.

1965 ಏಪ್ರಿಲ್ 2 ರಂದು ಕರ್ನಾಟಕ ರಾಜ್ಯ ಪೊಲೀಸ್ ಕಾಯ್ದೆ ಜಾರಿಗೆ ಬಂದಿದ್ದು, ಅಂದಿನಿಂದ ಈ ದಿನವನ್ನು ಪೊಲೀಸ್ ಧ್ವಜ ದಿನವನ್ನಾಗಿ ಆಚರಿಸಲಾಗುತ್ತಿದೆ. ಈ ದಿನದಂದು ಪೊಲೀಸ್ ಇಲಾಖೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾದ ಅಧಿಕಾರಿಗಳು ಮತ್ತು ಸಿಬ್ಬಂದಿಯ ಸೇವೆಯನ್ನು ಸ್ಮರಿಸಿ ಅವರಿಗೆ ಗೌರವ ಸಲ್ಲಿಸಲಾಗುತ್ತದೆ ಎಂದು ತಿಳಿಸಿದರು.

2025 ರ ಏ.01 ರಿಂದ 2026 ರ ಮಾ.31 ಅವಧಿಯಲ್ಲಿ ಜಿಲ್ಲೆಯ ಒಟ್ಟು 27 ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ನಿವೃತ್ತರಾಗಿದ್ದಾರೆ. ಅವರಲ್ಲಿ 7 ಜನ ಪಿ.ಎಸ್.ಐ, 2 ಜನ ಆರ್.ಎಸ್.ಐ, 13 ಜನ ಎ.ಎಸ್.ಐ, 3 ಜನ ಎ.ಆರ್.ಎಸ್.ಐ ಹಾಗೂ 2 ಜನ ಸಿ.ಎಚ್.ಸಿ ಸೇರಿದ್ದಾರೆ. 2025–26ನೇ ಸಾಲಿನಲ್ಲಿ ಉತ್ತಮ ಕಾರ್ಯನಿರ್ವಹಿಸಿದ ಒಟ್ಟು 160 ಪೊಲೀಸ್ ಅಧಿಕಾರಿಗಳಿಗೆ ತಲಾ 1 ಲಕ್ಷ ರೂ. ನಗದು ಬಹುಮಾನ ವಿತರಿಸಲಾಗಿದೆ ಎಂದು ತಿಳಿಸಿದರು.

ಇದಕ್ಕೂ ಮೊದಲು, ಶ್ರೀನಿವಾಸಲು ಎಂ. ಅವರು ಪೊಲೀಸ್ ತುಕಡಿಗಳಿಂದ ಗೌರವ ವಂದನೆ ಸ್ವೀಕರಿಸಿದರು. ಬಳಿಕ ಆಕರ್ಷಕ ಪಥ ಸಂಚಲನ ನಡೆಯಿತು. ನಂತರ ಪೊಲೀಸ್ ಧ್ವಜಗಳ ವಿತರಣೆ ಮಾಡಲಾಯಿತು.

ಈ ವೇಳೆ ಬಳ್ಳಾರಿ ನಗರ ಉಪವಿಭಾಗ ಡಿಎಸ್ಪಿ ಗೋವಿಂದರಾಜು, ತೋರಣಗಲ್ಲು ಉಪವಿಭಾಗ ಡಿಎಸ್ಪಿ ಪ್ರಸಾದ್ ಗೋಖಲೆ, ಜಿಲ್ಲಾ ಗೃಹರಕ್ಷಕ ದಳದ ಕಮಾಡೆಂಟ್ ಶೇಕ್ ಸಾಬ್ ಸೇರಿದಂತೆ ಜಿಲ್ಲೆಯ ಎಲ್ಲಾ ಹಿರಿಯ ಪೊಲೀಸ್ ಅಧಿಕಾರಿಗಳು, ನಿವೃತ್ತ ಪೊಲೀಸ್ ಅಧಿಕಾರಿ– ಸಿಬ್ಬಂದಿ ವರ್ಗ, ಕುಟುಂಬ ವರ್ಗ ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

# ಸಂಪನ್ನಗೊಂಡ ಶ್ರೀಅರಳಿಬೆಂಚಿ ಉಡುರಾಜಮುಖಿ ಜಾತ್ರಾ ಮಹೋತ್ಸವ

• ಮಲ್ಲಮ್ಮ ನುಡಿವಾರ್ತೆ ಕುಕನೂರ

ತಾಲೂಕಿನ ತಳಕಲ್–ತಳಬಾಳ ಗ್ರಾಮದ ಹೊರವಲಯದಲ್ಲಿರುವ ಶ್ರೀ ಅರಳಿಬೆಂಚಿ ಉಡುರಾಜಮುಖಿ (ಉಡುಚಮ್ಮ ದೇವಿ) ಜಾತ್ರಾ ಮಹೋತ್ಸವ, ನೂತನ ರಥೋತ್ಸವ, ಸಾಮೂಕ ವಿವಾಹ ಕಾರ್ಯಕ್ರಮಗಳು, ಗುರುವಾರ ಸಹಸ್ರಾನು ಭಕ್ತರ ಸಮ್ಮುಖದಲ್ಲಿ ಸಂಪನ್ನಗೊಂಡಿತು.

ಗ್ರಾಮದಲ್ಲಿ ಆಯೋಜಿಸಿದ 21ನೇ ವರ್ಷದ ಜಾತ್ರಾ ಮಹೋತ್ಸವದ ನಿಮಿತ್ಯ ದೇವಸ್ಥಾನದಲ್ಲಿ ಬೆಳಗ್ಗೆ ಮಹಾರುದ್ರಾಭಿಷೇಕ ನಂತರ ತೇರಿನ ಕಳಸ ತರುವುದು, ನಂದಿ ಕೋಲು ಸೇವೆ, ತೇರಿನ ಹಗ್ಗದ ಸೇವೆ ವಿವಿಧ ವಾದ್ಯಗೋಷ್ಠಿಗಳೊಂದಿಗೆ ವಿಜೃಂಭಣೆಯಿಂದ ಜರಗಿ ಸಾಯಂಕಾಲ ಮಹಾರಥೋತ್ಸವ ಸಂಪನ್ನಗೊಂಡಿತು.

ಇದಕ್ಕೂ ಮುನ್ನ ದೇವಸ್ಥಾನದ ಆವರಣದಲ್ಲಿ ಆಯೋಗಿಸಿದ್ದ ವೇದಿಕೆ




ಕಾರ್ಯಕ್ರಮದಲ್ಲಿ ದದೇಗಲ್ ಗ್ರಾಮದ ಸಿದ್ದಾರೂಢ ಮಠದ ಪೂಜ್ಯರಾದ ಶ್ರೀ ಆತ್ಮಾನಂದ ಭಾರತಿ ಮಹಾಸ್ವಾಮಿಗಳ ತುಲಾಭಾರ ಯಶಸ್ವಿಯಾಗಿ ಸಂಪನ್ನಗೊಂಡಿತು.

ಈ ವೇಳೆ ವೇದಿಕೆಯನ್ನು ಉದ್ದೇಶಿಸಿ ಅಳವಂಡಿ ಗ್ರಾಮದ ಸಿದ್ದೇಶ್ವರ ಮಠದ ಪೂಜ್ಯರಾದ ಶ್ರೀ ಮರುಳಾರಾಧ್ಯ ಶಿವಾಚಾರ್ಯರು ಮಾತನಾಡುತ್ತಾ ತಳಕಲ ಹಾಗೂ ತಳಬಾಳ ಅವಳಿ ಗ್ರಾಮಗಳ ಆಧ್ಯಾತ್ಮಿಕ ಸಂಸ್ಕಾರ ಶ್ಲಾಘನೀಯವಾಗಿದ್ದು ಪ್ರತಿಯೊಬ್ಬರೂ ತಮ್ಮ ಮಕ್ಕಳನ್ನು ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸುವುದರ ಮುಖಾಂತರ ಸಂಸ್ಕಾರವಂತರನ್ನಾಗಿಸಿ ಆಗ ಮಾತ್ರ ಜೀವನ ಸಾರ್ಥಕವಾಗುತ್ತದೆ. ಜೊತೆಗೆ ಮಾನವರಾದ ನಾವೆಲ್ಲರೂ ತಮ್ಮ ಮನೆಯ ಮೇಲೆ ಹಾಗೂ ಹೊಲಗದ್ದೆಗಳಲ್ಲಿ ಪ್ರಾಣಿ–ಪಕ್ಷಿಗಳಿಗೆ ನೀರಿನ ವ್ಯವಸ್ಥೆ ಮಾಡಿ ಬೇಸಿಗೆಯಲ್ಲಿ ಪ್ರಾಣಿ–ಪಕ್ಷಿಗಳ ದಾಹ ತೀರಿಸಿ ಎಂದು ಹಿತವಚನ ನುಡಿದರು.

ಈ ವೇಳೆಯಲ್ಲಿ ಕಂಪಸಾಗರ ಗ್ರಾಮದ ಶ್ರೀಶೈಲ ಶಾಖಾಮಠದ ಪೂಜ್ಯರಾದ ಅಭಿನವ ನಾಗಭೂಷಣ ದೇಸಿ ಕೇಂದ್ರ ಮಹಾಸ್ವಾಮಿಗಳು, ಅರಳಿಹಳ್ಳಿ ರೇವಣಸಿದ್ದೇಶ್ವರ ತಾತ ನವರು, ಪ್ರಮುಖರಾದ ಉದಯ ರಾಯರೆಡ್ಡಿ, ಮಾಲಕ ಸಾಬ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

# ಕಾಣೆಯಾದ ವ್ಯಕ್ತಿಯ ಪತ್ತೆಗೆ ಮನವಿ

• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ನಗರದ ಬ್ರೂಸ್ ಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ರಮೇಶ್ ಎನ್ನುವ 57 ವರ್ಷದ ವ್ಯಕ್ತಿ ಮಾ.30 ರಂದು ಮನೆಯಿಂದ ಹೊರ ಹೋಗಿ ಮನೆಗೆ ಬಾರದೇ ಕಾಣೆಯಾಗಿರುವ ಕುರಿತು ಪ್ರಕರಣ ದಾಖಲಾಗಿದ್ದು, ಪತ್ತೆಗೆ ಸಹಕರಿಸಬೇಕು ಎಂದು ಠಾಣಾಧಿಕಾರಿ ಮನವಿ ಮಾಡಿದ್ದಾರೆ.

ವ್ಯಕ್ತಿಯ ಚಹರೆ: ಅಂದಾಜು ಎತ್ತರ 5.5 ಅಡಿ, ಕೋಲು ಮುಖ, ಸಾಧಾರಣ ಮೈಕಟ್ಟು, ಬಿಳಿ ಕೂದಲು ಹೊಂದಿದ್ದು, ಬಲಗೈ ಮೇಲೆ ಆಂಜಿನೇಯನ ಹಚ್ಚೆ ಹಾಕಿಸಿಕೊಂಡಿರುತ್ತಾನೆ.

ವ್ಯಕ್ತಿಯು ನಿಧಾನವಾಗಿ ಕುಂಟುತ್ತಾ ನಡೆಯುತ್ತಾನೆ. ಮನೆಯಿಂದ ಹೊರಡುವಾಗ ಬಿಳಿ ಬಣ್ಣದ ಅಂಗಿ ಹಾಗೂ ಗ್ರೇ ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ. ಕನ್ನಡ, ತೆಲುಗು ಮತ್ತು ತಮಿಳು ಭಾಷೆ ಮಾತನಾಡುತ್ತಾನೆ.

ಕಾಣೆಯಾದ ವ್ಯಕ್ತಿಯ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಳ್ಳಾರಿ ಪೊಲೀಸ್

ಕಂಟ್ರೋಲ್ ರೂಂ ದೂ.08392–258100 ಗೆ ಕರೆ ಮಾಡಿ ಮಾಹಿತಿ ನೀಡಬಹುದಾಗಿದೆ ಎಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

# 28ರ ಚುನಾವಣೆಗೆ ದಿಕ್ಸೂಚಿಯಾಗಲಿ: ಯತ್ನಾಳ್



• ಮಲ್ಲಮ್ಮ ನುಡಿ ವಾರ್ತೆ
ಬಾಗಲಕೋಟೆ

ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಗೆದ್ದರೂ ಕಾಂಗ್ರೆಸ್ ಸರ್ಕಾರ ಬೀಳದು. ಆದ್ರೆ 2028 ರ ಚುನಾವಣೆಯಲ್ಲಿ ಹಿಂದುತ್ವದ ಸರ್ಕಾರ ಅಧಿಕಾರಕ್ಕೆ ಬರೋದಕ್ಕೆ ದಿಕ್ಸೂಚಿಯಾಗಬೇಕು ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಬಾಗಲಕೋಟೆ ಉಪಚುನಾವಣೆಯ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಭಗವತಿ ಗ್ರಾಮದಲ್ಲಿ ಗುರುವಾರ ಮತಯಾಚನೆ ಮಾಡಿದ ಅವರು, ಈ ಚುನಾವಣೆಯಲ್ಲಿ ಬಿಜೆಪಿಯನ್ನು ಗೆಲ್ಲಿಸಿ ಕಾಂಗ್ರೆಸ್ಸಿಗೆ ಮನೆಗೆ ಕಳಿಸುವ ಮುನ್ಸೂಚನೆ ನೀಡಿ ಎಂದರು.

ಇದು ಜಾತಿ ಚುನಾವಣೆ ಅಲ್ಲ. ಹಿಂದುತ್ವ ರಕ್ಷಿಸುವ ಸಂದರ್ಭ. ಹೀಗಾಗಿ ಎಲ್ಲರೂ ಜಾತಿ, ಮತ ಮರೆತು ಒಗ್ಗಟ್ಟಾಗಿ ಮುಂದೆ ಹಿಂದುತ್ವದ ಸರ್ಕಾರ ಸ್ಥಾಪಿಸುವ ಸಂಕಲ್ಪ ಮಾಡಬೇಕಾದ ಅಗತ್ಯತೆಯಿದೆ ಎಂದ ಯತ್ನಾಳ, ನಾವು ಅಧಿಕಾರಕ್ಕೆ ಬಂದ್ರೆ ಮಹಿಳೆಯರಿಗೆ ಪ್ರತಿ ತಿಂಗಳು 3 ಸಾವಿರ, ಗಂಡಸರಿಗೆ 2 ಸಾವಿರ ರೂ. ನೀಡುವುದಾಗಿ ಹೇಳಿದರು.

ಕಾಂಗ್ರೆಸ್ ಸರ್ಕಾರ ಮುಸ್ಲಿಮರ ತುಷ್ಟೀಕರಣಕ್ಕೆ ಮುಂದಾಗಿರುವುದನ್ನು ನೋಡಿದರೆ ರಾಜ್ಯದಲ್ಲಿ ತಾಲಿಬಾನ್ ಆಡಳಿತದ ವ್ಯವಸ್ಥೆ ಕಾಣುತ್ತಿದೆ ಎಂದ ಬಸನಗೌಡ ಪಾಟೀಲ, ಇದಕ್ಕೆ ಕೊನೆಹಾಡುವ ನಿಟ್ಟಿನಲ್ಲಿ ಉಪ ಚುನಾವಣೆಯಲ್ಲಿ ಅಭಿವೃದ್ಧಿಯ ಹರಿಕಾರ, ಪ್ರಾಮಾಣಿಕ ವ್ಯಕ್ತಿ ವೀರಣ್ಣ ಚರಂತಿಮಠ ಅವರನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಮಾಜಿ ಸಂಸದ ಪ್ರತಾಪಸಿಂಹ ಮಾತನಾಡಿ, ರಾಜ್ಯದಲ್ಲಿ ಹಿಂದುತ್ವ ಸರ್ಕಾರ ಅಧಿಕಾರಕ್ಕೆ ಬರಬೇಕು. ಆ ಹಿನ್ನೆಲೆಯಲ್ಲಿ ಹಿಂದೂಗಳು ಎಚ್ಚೆತ್ತುಕೊಳ್ಳಬೇಕು. ಉಪ ಚುನಾವಣೆಯಲ್ಲಿ ಬಿಜೆಪಿ ಗೆಲ್ಲಿಸಿ ಮುಂಬರುವ ಚುನಾವಣೆಗೆ ನಾಂದಿ ಹಾಡಬೇಕು ಎಂದರು.

ಮುಖಂಡರಾದ ಮಹಾಂತೇಶ ಮಮದಾಪೂರ, ಕುಮಾರ ಜನಾಲಿ, ಮೋಹನ ಜಾಧವ, ಹಣಮಂತ ಮಾವಿನಮರದ, ರಾಜು ಮುದೇನೂರು, ಹಣಮಂತ ಚಿಮ್ಮಲಗಿ ಇದ್ದರು.

> “ವೀರಣ್ಣ ಚರಂತಿಮಠ ಒಳ್ಳೆಯ ವ್ಯಕ್ತಿ, ಕೆಲಸಗಾರ. ಆದ್ರೆ ಸ್ವಲ್ಪ ಸಿಟುಕು. ಅದಕ್ಕೆ ನಾನು ಅವರಿಗೆ ಹೇಳಿದ್ದೇನೆ. ಸಿಟ್ಟು ಬಿಟ್ಟು ಬಂದವರ ಜೊತೆ ನಗುನಗುತಾ ಮಾತಾಡ್ರಿ. ಸಿಡುಕು ಮುಖ ಬಿಟ್ಟು ನಕ್ಕೊಂತ ಇರಿ ಎಂದು ಹೇಳಿದ್ದೇನೆ. ಆದರೆ ಬಹಳಷ್ಟು ಪ್ರಾಮಾಣಿಕ ಮನುಷ್ಯ.
> **ಬಸನಗೌಡ ಪಾಟೀಲ ಯತ್ನಾಳ**

# ದೇಶಕ್ಕೆ ಬಿಜೆಪಿ ಕೊಡುಗೆ ಶೂನ್ಯ: ರಾಮಲಿಂಗಾರೆಡ್ಡಿ



• ಮಲ್ಲಮ್ಮ ನುಡಿ ವಾರ್ತೆ
ಬಾಗಲಕೋಟೆ

ಬಿಜೆಪಿ ದೇಶಕ್ಕೆ ಕೊಟ್ಟ ಕೊಡುಗೆ ಶೂನ್ಯ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು. ಬಾಗಲಕೋಟೆ ಉಪ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪರವಾಗಿ ಗುರುವಾರ ಬೇವೂರು, ಹಳ್ಳೂರ, ಭೈರಮಟ್ಟಿ ಹಾಗೂ ಬೆನಕಟ್ಟಿ ಗ್ರಾಮಗಳಲ್ಲಿ ಜರುಗಿದ ಪ್ರಚಾರ ಸಭೆಯಲ್ಲಿ ಮಾತನಾಡಿ, ಸುಳ್ಳಿಗೆ ಇನ್ನೊಂದು ಹೆಸರೇ ಬಿಜೆಪಿ ಹಾಗೂ ಮೋದಿ ಎಂದರು.

ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಮುನ್ನ ಮೋದಿ, ಪ್ರತಿ ವ್ಯಕ್ತಿಯ ಖಾತೆಗೆ 15 ಲಕ್ಷ ಹಣ ಹಾಕುವುದಾಗಿ ಮತ್ತು ಪ್ರತಿವರ್ಷ 2 ಕೋಟಿ ಉದ್ಯೋಗ ನೀಡುವುದಾಗಿ ನೀಡಿದ್ದ ಭರವಸೆಗಳನ್ನು ಇಂದಿಗೂ ಈಡೇರಿಸದೇ ದೇಶದ ಜನತೆಗೆ ಮೋಸ ಮಾಡಿದ್ದಾರೆ ಎಂದ ರಾಮಲಿಂಗಾರೆಡ್ಡಿ, ಹೇಳಿದಂತೆ ಉದ್ಯೋಗ ನೀಡಿದ್ದರೆ ದೇಶದಲ್ಲಿ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುತ್ತಿತ್ತು ಎಂದು ಹೇಳಿದರು. ಸಿದ್ಧರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ನುಡಿದಂತೆ ನಡೆದು ನೀಡಿದ್ದ ಭರವಸೆ ಈಡೇರಿಸಿದೆ. ಮುಂಬಯಿ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದೆ. ಯುವಕರು ಬಿಜೆಪಿಯ ಬಣ್ಣದ ಮಾತಿಗೆ ಕಿವಿಗೊಡದೆ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ ಉಮೇಶ ಮೇಟಿ ಅವರನ್ನು ಗೆಲ್ಲಿಸಬೇಕು ಎಂದರು. ಮಾಜಿ ಸಚಿವ ಎಸ್.ಆರ್.ಪಾಟೀಲ ಮಾತನಾಡಿ, ರಾಜ್ಯ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳ ಮೂಲಕ ಬಡ ಕುಟುಂಬಗಳಿಗೆ ಆರ್ಥಿಕ ಸಬಲತೆ ನೀಡಿದೆ. ರಾಜ್ಯದ ಅಭಿವೃದ್ಧಿ ಕಾಂಗ್ರೆಸ್ ದಿಂದ ಮಾತ್ರ. ಬಿಜೆಪಿ ಬರೀ ಸುಳ್ಳು ಹೇಳಿ ಜನರನ್ನು ಮೋಸಗೊಳಿಸುತ್ತದೆ. ಮತದಾರರು ಆ ಪಕ್ಷ ನಂಬದೆ ಸಜ್ಜನ ರಾಜಕಾರಣಿಯಾಗಿದ್ದ ದಿ.ಎಚ್.ವೈ.ಮೇಟಿ ಅವರ ಪುತ್ರ ಉಮೇಶ ಮೇಟಿ ಅವರನ್ನು ಬೆಂಬಲಿಸಿ ಕಾಂಗ್ರೆಸ್ ಪಕ್ಷ ಗೆಲ್ಲಿಸಿ ಎಂದರು.

ಶಾಸಕರಾದ ಜೆ.ಟಿ.ಪಾಟೀಲ, ಎನ್.ಎಚ್.ಕೋನರಡ್ಡಿ ಹಾಗೂ ಗದಗ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಗೌಡ ಪಾಟೀಲ ಮಾತನಾಡಿ, ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಸಾಧನೆಗಳು, ನೀಡಿರುವ ಜನಪರ ಕಾರ್ಯಕ್ರಮಗಳನ್ನು ತಿಳಿದು ಮತದಾರರು ಉಮೇಶ ಮೇಟಿ ಅವರನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು. ಸಿದ್ದು ಕೊಣ್ಣೂರ, ರಮೇಶ ಬದ್ನೂರ, ಎಂ.ಎಲ್.ಕೆಂಪಲಿಂಗಣ್ಣವರ, ರಮೇಶ ಯಡಹಳ್ಳಿ, ಪಂಡಿತ ಮಾಚಾ, ಮಂಜುಳಾ ಕಮತಗಿ ಹಾಗೂ ಪಕ್ಷದ ಸ್ಥಳೀಯ ಮುಖಂಡರು, ಕಾರ್ಯಕರ್ತರು ಇದ್ದರು.

# ಕಾರ್ ಬೈಕ್ ಅಪಘಾತದಲ್ಲಿ ಬೈಕ್ ಸವಾರ ಸ್ಥಳದಲ್ಲಿಯೇ ಸಾವು



• ಮಲ್ಲಮ್ಮ ನುಡಿ ವಾರ್ತೆ
ಮುದಗಲ್

ಸಮೀಪದ ಆಮದಿಹಾಳ ಗ್ರಾಮದ ಹೊರವಲಯದ ದೇವಿಗುಡಿ ಹತ್ತಿರ ಕಾರ್ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ ಪರಿಣಾಮ ಬೈಕ್ ಸವಾರ ಸ್ಥಳದಲ್ಲಿಯೇ ಸಾವನ್ನಪ್ಪಿ ಇನ್ನಿಬ್ಬರಿಗೆ ಗಾಯವಾದ ಘಟನೆ ಗುರುವಾರ ಸಂಜೆ ಜರುಗಿದೆ.

ಕಾರ್ ಇಲಕಲ್ಲದಿಂದ ಲಿಂಗಸ್ಗೂರು ಕಡೆ ಪ್ರಯಾಣ ಮಾಡುತ್ತಿದ್ದಾಗ, ಬೈಕ್ ಸವಾರ ಸಾಮೂಹಿಕ ಮದುವೆಗೆ ಲೆಕ್ಕಿಹಾಳ ಗ್ರಾಮಕ್ಕೆ ತೆರಳುತ್ತಿದ್ದಾಗ ನವೋದಯ ಶಾಲೆಯ ಸಮೀಪ ದೇವಿ ಗುಡಿ ಹತ್ತಿರ ಅಪಘಾತ ಸಂಭವಿಸಿದ್ದು, ಸ್ಥಳದಲ್ಲಿಯೇ ಒಬ್ಬ ಅಸುನಿಗಿದ್ದಾನೆ, ಸಾವನ್ನಪ್ಪಿದ ವ್ಯಕ್ತಿ ಮಟ್ಟೂರ್ ಸಮೀಪದ ಹಳ್ಳಿ ಗ್ರಾಮದ ನಿವಾಸಿಯಾಗಿದ್ದಾರೆ. ಇನ್ನೂ ಇಬ್ಬರಿಗೆ ಗಾಯಗಳಾಗಿದ್ದು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪೋಲಿಸ್ ಇಲಾಖೆ ಸಿಪಿಐ ರಾಮಣ್ಣ ಜಲಗೇರಿ, ಪಿಎಸ್ಐ ವೆಂಕಟೇಶ ಮಾಡಗೇರಿ ಸೇರಿದಂತೆ ಪೊಲೀಸ್ ಸಿಬ್ಬಂದಿಗಳು ಸ್ಥಳ ಪರಿಶೀಲನೆ ಮಾಡಿದರು.

# ಸಮಿತಿಗೆ ನೀಡಿದ ಹಣದಲ್ಲಿ ಅವ್ಯವಹಾರ: ರಾಜು



ಅಂಕೋಲಾ: ತಾಲೂಕಿನ ಕೇಣಿಯಲ್ಲಿ ಜೆ.ಎಸ್.ಡಬ್ಲ್ಯೂ ಕಂಪನಿಯ ವಾಣಿಜ್ಯ ಬಂದರು ನಿರ್ಮಾಣ ವಿರೋಧಿಸಿ ಕಳೆದ ಒಂದು ವರ್ಷದಿಂದ ನಡೆಯುತ್ತಿರುವ ಹೋರಾಟಕ್ಕೆ ಬೆಂಬಲವಾಗಿ ಕೇಣಿಯ ಪ್ರತಿ ಮೀನುಗಾರ ಕುಟುಂಬದವರು ಹೋರಾಟ ಸಮಿತಿಗೆ ಸಹಾಯ ಮಾಡಿದ ಹಣದಲ್ಲಿ ಭಾರೀ ಅವ್ಯವಹಾರವಾಗಿದೆ ಎಂದು ಹೋರಾಟ ಸಮಿತಿಯ ಸದಸ್ಯ ರಾಜು ಹರಿಕಂತ್ರ ಕಣಗೀಲ್ ಆರೋಪಿಸಿದರು.

ಪಟ್ಟಣದ ಖಾಸಗಿ ಹೋಟೆಲ್ ನಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕೇಣಿಯ 373 ಮನೆಯಿಂದ ಒಟ್ಟು 746000 ರೂಪಾಯಿ ಹಾಗೂ ಜಿಲ್ಲೆಯ ವಿವಿಧ ಉದ್ಯಮಿಗಳಿಂದ, ಸಂಘ ಸಂಸ್ಥೆಯವರಿಂದ, ಮೀನುಗಾರರ ಯೂನಿಯನ್ ಗಳಿಂದ ಒಟ್ಟು 10 ಲಕ್ಷಕ್ಕೂ ಹೆಚ್ಚಿನ ಹಣ ಸಂಗ್ರಹಿಸಲಾಗಿದೆ. ಈ ಹಣವು ಕೇವಲ ಐದಾರು ಜನ ಊರ ಪ್ರಮುಖರೆನಸಿಕೊಂಡ ಹೋರಾಟಗಾರ ಹತ್ತಿರ ಇದ್ದು, ಯಾರಾದರೂ ಹೋರಾಟದ ಖರ್ಚಿನ ವೆಚ್ಚ ಕೇಳಿದರೆ ಹಾರಿಕೆಯ ಉತ್ತರ ನೀಡುತ್ತಾರೆ. ಅಲ್ಲದೇ ಬೆದರಿಕೆಯ [illegible] ಡಿಸಿ ಯವರಿಗೆ ಇಲ್ಲಿಗೆ ಬರಲು ಕಾರಿನ ಡೀಸೆಲ್ ಗೆ ಹಣವಿಲ್ಲದಿದ್ದರೆ ನಾವು ಹಣ ನೀಡುತ್ತೇವೆ ಎಂದು ನೆರೆದ ಸಾರ್ವಜನಿಕರಿಂದ ಹಣ ಸಂಗ್ರಹಿಸಿದ್ದು ಇಲ್ಲಿಯವರೆಗೆ ಆ ಹಣ ಎಲ್ಲಿದೆ ಎಂಬುದು ಯಾರಿಗೂ ತಿಳಿದಿಲ್ಲ. ಈ ಎಲ್ಲ ಪ್ರಕ್ರಿಯೆಗಳು ನಡೆಯುತ್ತಿರುವಾಗಲೇ ಹೋರಾಟ ಸಮಿತಿಯ ಸದಸ್ಯರಲ್ಲದ ಹರಿಕಂತ್ರ ಸಮಾಜದ ಕೇಣಿ ಭಾಗದ 15 ಯುವಕರನ್ನು ಮಾತ್ರ ಅಧ್ಯಯನ ಪ್ರವಾಸಕೆಂದು ಗುಜರಾತ್, ಕೇರಳ, ಮಹಾರಾಷ್ಟ್ರ ಸೇರಿದಂತೆ ಇನ್ನಿತರ ಸ್ಥಳಗಳಿಗೆ 15 ದಿನಗಳ ಕಲಾ ಹೋಗಿ ಬಂದಿದ್ದು, ಇವರ ಖರ್ಚು ವೆಚ್ಚಗಳನ್ನು ನೋಡಿಕೊಂಡ ಸಂಸ್ಥೆ ಅಥವಾ ಉದ್ಯಮಿ ಯಾರು, ಕೇವಲ ಒಂದು ಸಮಾಜದವರು ಹೋಗುವ ಬದಲು ಹೋರಾಟಕ್ಕೆ ಬೆಂಬಲ ನೀಡಿದ ಇತರ ಸಮಾಜದವರು ಕೆರೆದು-ಕೊಂಡು ಹೋಗಬಹುದಿತ್ತು. ಅಧ್ಯನ ಮಾಡಿ ಬಂದ ನಂತರ ಇನ್ನಿತರ ಹೋರಾಟಗಾರರಿಗೆ ಮಾಹಿತಿಯಾದರೂ ನೀಡಿಬೇಕಲ್ಲವೇ ಎಂದು ಪ್ರಶ್ನಿಸಿದರು.

ಹೋರಾಟ ಸಮಿತಿಯ ಕೇಣಿ ಹರಿಕಂತ್ರ ಭಾಗದ ಪ್ರಮುಖರು ಸೇರಿಕೊಂಡು ಒಂದು ಎನ್ ಜಿ ಓ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡು ಜೆ ಎಸ್ ಡಬ್ಲ್ಯೂ ಕಂಪನಿಗೆ ಕೋಟಿಗಟ್ಟಲೆ ಹಣಕ್ಕೆ ಬೇಡಿಕೆ ಇಟ್ಟಿದ್ದು ಈ ಹಣ ಸಂದಾಯವಾದರೆ ಯಾವುದೇ ಹೋರಾಟ ಮಾಡುವುದಿಲ್ಲ ಎಂದು ವಾಗ್ದಾನ ಮುಂದಿಟ್ಟಿದ್ದಾರೆ ಎಂಬ ಮಾಹಿತಿಯು ಇದ್ದು, ಅಲ್ಲದೇ ಇವರು ಅಂಕೋಲಾದಲ್ಲಿ ಮನೆ ಹಾಗೂ ತೋಟಗಳನ್ನು ಖರೀದಿಸಲು ಸಾರ್ವಜನಿಕವಾಗಿ ವಿಚಾರಿಸುತ್ತಿರುವ ಮಾಹಿತಿಯೂ ಇದೆ, ಆದ್ದರಿಂದ ಸಾರ್ವಜನಿಕರು ಈಗಲೇ ಎಚ್ಚೆತ್ತುಕೊಂಡು ಇಂತಹ ಡೋಂಗಿ ಹೋರಾಟಗಾರರನ್ನು ದೂರವಿಟ್ಟು ಬೇರೆಯವರ ನಾಯಕತ್ವದಲ್ಲಿ ಹೋರಾಟ ನಡೆಸಿದಾಗ ಮಾತ್ರ ಬಂದರು ಬರದಂತೆ ತಡೆಯಬಹುದು. ಇಲ್ಲದಿದ್ದರೆ ನಾವು ಇಷ್ಟುದಿನ ನಡೆಸಿದ ಹೋರಾಟ ವ್ಯರ್ಥವಾಗಲಿದೆ ಎಂದರು.

# ನಾಯನೇಗಲಿ ಮಾರುತೇಶ್ವರ ಜಾತ್ರೆ

• ಮಲ್ಲಮ್ಮ ನುಡಿ ವಾರ್ತೆ , ಬಾಗಲಕೋಟೆ

ತಾಲ್ಲೂಕಿನ ನಾಯನೇಗಲಿ ಗ್ರಾಮದ ಮಾರುತೇಶ್ವರ ಜಾತ್ರಾ ಮಹೋತ್ಸವ ಮಾ.4 ಹಾಗೂ 5 ರಂದು ಜರುಗಲಿದೆ.

ಶನಿವಾರ ಬೆಳಿಗ್ಗೆ 6 ಗಂಟೆಗೆ ದೇವಸ್ಥಾನದಲ್ಲಿ ಪಂಚಾಮೃತ ಅಭಿಷೇಕ, ಮಧ್ಯಾಹ್ನ 12 ಗಂಟೆಗೆ ಕಳಸ ಮತ್ತು ಬಾಳೆಕಂಬದ ಮೆರವಣಿಗೆ ನಡೆಯುವುದು.

ಮಧ್ಯಾಹ್ನ.1 ಗಂಟೆಗೆ ನೈವೇದ್ಯ ಸಮರ್ಪಣೆ, ಮಹಾಪ್ರಸಾದ ನಂತರ ರಾಜೇಂದ್ರ ಕುಲಕರ್ಣಿ ಅವರಿಂದ ಅನ್ನಸಂತರ್ಪಣೆ ಸೇವೆ ಜರುಗಲಿದೆ. ಸಂಜೆ 6 ಗಂಟೆಗೆ ಸಂಗೀತ ಕಾರ್ಯಕ್ರಮ ನಡೆಯುವುದು.

ಭಾನುವಾರ ಬೆಳಿಗ್ಗೆ 6 ಗಂಟೆಗೆ ಪಂಚಾಮೃತ ಅಭಿಷೇಕ, 7 ಗಂಟೆಗೆ ಹೊಂಡಕ್ಕೆ ಕೃಷ್ಣಾ ನದಿ ನೀರು ತುಂಬಿಸುವುದು, 10 ಗಂ-ಟೆಗೆ ಸತ್ಯನಾರಾಯಣ ಪೂಜೆ, 11 ಗಂಟೆಗೆ ಹೊಂಡದ ಪೂಜೆ ನೆರವೇರಿದ ನಂತರ ಮಧ್ಯಾಹ್ನ 12 ಗಂಟೆಗೆ ಮಲ್ಲನಗೌಡ ಪಾಟೀಲ ಕುಟುಂಬದವರಿಂದ ದಾಸೋಹ ಕಾರ್ಯಕ್ರಮ, 1 ಗಂಟೆಗೆ ದೇಶಪಾಂಡೆ ಹಾಗೂ ನಾಗಸಂಪಗಿ ಬಂಧುಗಳಿಂದ ಮಹಾಪ್ರಸಾದ ಜರುಗುವುದು.

ಸಾಯಂಕಾಲ 6 ಗಂಟೆಗೆ ವೀರಭದ್ರೇಶ್ವರ ದೇವಸ್ಥಾನದಿಂದ ಮಗಿ ಮೆರವಣಿಗೆ ನಡೆಯಲಿದ್ದು, 7 ಗಂಟೆಗೆ ಮಾರುತೇಶ್ವರ ಓಕುಳಿ ಕಾರ್ಯಕ್ರಮ ನಂತರ ರಾತ್ರಿ 9 ಗಂಟೆಗೆ ಸ್ಥಳೀಯ ಮಾರುತೇಶ್ವರ ಗೆಳೆಯರ ಸಂಗೀತ ಬಳಗದಿಂದ ರಸಮಂಜರಿ ಕಾರ್ಯಕ್ರಮ ಜರುಗಲಿವೆ ಎಂದು ಮಾರುತೇಶ್ವರ ದೇವಸ್ಥಾನ ಮಂಡಳಿ ಪ್ರಕಟಣೆ ತಿಳಿಸಿದೆ.

# ಪೊಲೀಸರ ಕರ್ತವ್ಯ, ಶೌರ್ಯ, ತ್ಯಾಗ ನಂಬೊಕೆಯ ಪ್ರತೀಕ: ಸಲೀಮ



ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ಪೊಲೀಸರ ಶೌರ್ಯ, ತ್ಯಾಗ ಮತ್ತು ಸಾರ್ವಜನಿಕರು ಅವರ ಮೇಲಿಟ್ಟ ನಂಬಿಕೆಯ ಪ್ರತೀಕ ದಿನವಾಗಿದೆ ಎಂದು ನಿವೃತ್ತ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಲೀಮ ಪಾಶ ಹೇಳಿದರು.

ನಗರದ ಜಿಲ್ಲಾ ಪೊಲೀಸ್ ಮೈದಾನದಲ್ಲಿ ಗುರುವಾರ ಹಮ್ಮಿಕೊಳ್ಳಲಾಗಿದ್ದ ಪೊಲೀಸ್ ಧ್ವಜ ದಿನಾಚರಣೆಯ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ಪೊಲೀಸ್ ಇಲಾಖೆಯ ಕಾಯ್ದೆಯನ್ನು 1963ರಲ್ಲಿ ಅಂಗೀಕರಿಸಿ, 1965 ಏಪ್ರಿಲ್ 2 ರಂದು ಜಾರಿಗೆ ತರಲಾಯಿತು. ಈ ಕಾಯ್ದೆಯು ಇಲಾಖೆಗೆ ಸಂಘಟನೆ ಮತ್ತು ಕಾನೂನು ಚಲಾಯಿಸುವ ಅಧಿಕಾರವನ್ನು ನೀಡಿತು. ಈ ಐತಿಹಾಸಿಕ ದಿನದ ನೆನಪಿಗಾಗಿ ಪ್ರತಿ ವರ್ಷ ಪೊಲೀಸ್ ಧ್ವಜ ದಿನವನ್ನು ಆಚರಿಸಲಾಗುತ್ತದೆ. ಪೊಲೀಸರ ಸೇವೆಯನ್ನು ಶ್ಲಾಘಿಸಿದ ಅವರು, ಪೊಲೀಸರು ಸರ್ಕಾರದ ಅವಿಭಾಜ್ಯ ಅಂಗವಾಗಿ ಸಾರ್ವಜನಿಕರಿಗೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಬೇಕು. ಈ ಪೊಲೀಸರು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗಿರಬೇಕು. ಕೆಲಸದ ಅವಧಿಯಲ್ಲಿ ಎಷ್ಟೇ ಒತ್ತಡಗಳಿದ್ದರೂ, ಅದನ್ನು ಮನೆಗೆ ಕೊಂಡೊಯ್ಯಬಾರದು. ಕುಟುಂಬದವರ ಮೇಲೆ ಒತ್ತಡ ಹೇರದೆ ಸಾಮಾಜಿಕವಾಗಿ ಆರೋಗ್ಯಕರವಾಗಿ ಕರ್ತವ್ಯ ನಿರ್ವಹಿಸಬೇಕು ಎಂದು ಅವರು ಕಿವಿಮಾತು ಹೇಳಿದರು. ಇದೇ ಸಂದರ್ಭದಲ್ಲಿ ಇಲಾಖೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಶ್ರೀಹರಿ ಬಾಬು, ಸಂತೋಷ್ ಚೌವ್ಹಾಣ್, ಕೋದಂಡ ಪಾಣಿ ಮೂವರು ಅಧಿಕಾರಿಗಳಿಗೆ ಮುಖ್ಯಮಂತ್ರಿ ಪದಕ ದೊರೆತಿರುವುದು ಸಂತಸ ತಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ ಮಾತನಾಡಿ, ವಿಜಯನಗರ ಜಿಲ್ಲಾ ಪೊಲೀಸ್ ಘಟಕವು ತನ್ನ ಅಧಿಕಾರಿಗಳು ಮತ್ತು ಸಿಬ್ಬಂದಿಯ ಹಿತರಕ್ಷಣೆಗಾಗಿ 2025-26ನೇ ಸಾಲಿನಲ್ಲಿ ಹಮ್ಮಿಕೊಂಡಿರುವ ವಿವಿಧ ಕಲ್ಯಾಣ ಕಾರ್ಯಕ್ರಮಗಳ ವಿವರಗಳನ್ನು ಬಿಡುಗಡೆ ಮಾಡಿದೆ. ಸಿಬ್ಬಂದಿಗಾಗಿ ವಾರ್ಷಿಕ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸಲಾಗಿದೆ. ಆರೋಗ್ಯ ಭಾಗ್ಯ ಯೋಜನೆಯಡಿ 2025 ಏಪ್ರಿಲ್ 1 ರಿಂದ ಈವರೆಗೆ ಒಟ್ಟು 268 ಜನರು (ಸಿಬ್ಬಂದಿ ಮತ್ತು ಕುಟುಂಬದವರು) ವಿವಿಧ ಆಸ್ಪತ್ರೆಗಳಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆದಿದ್ದಾರೆ. ಪೊಲೀಸ್ ಕಲ್ಯಾಣ ನಿಧಿಯಿಂದ ಪೊಲೀಸ್ ಮಕ್ಕಳ ವಿದ್ಯಾಭ್ಯಾಸಕ್ಕಾಗಿ 1.25ಲಕ್ಷ, ಅಧಿಕಾರಿ, ಸಿಬ್ಬಂದಿ ಮತ್ತು ಅವರ ಕುಟುಂಬದವರಿಗೆ ಕನ್ನಡಕ ಖರೀದಿಗಾಗಿ ರೂ.71,540, 4 ಜನರಿಗೆ ಮರಣೋತ್ತರ ಸಹಾಯಧನವಾಗಿ 60 ಸಾವಿರ ಹಾಗೂ 21 ವಿವಿಧ ದರ್ಜೆಯ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಸನ್ಮಾನಕ್ಕಾಗಿ 1.05 ಲಕ್ಷ ಸೇರಿ 12.61ಲಕ್ಷ ಧನ ಸಹಾಯ ನೀಡಲಾಗಿದೆ.

ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯವರ ಆರೋಗ್ಯ ಮತ್ತು ಕಲ್ಯಾಣಕ್ಕಾಗಿ ವಿಜಯನಗರ ಜಿಲ್ಲಾ ಪೊಲೀಸ್ ಘಟಕವು ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಪ್ರಗತಿ ವರದಿ ಬಿಡುಗಡೆಯಾಗಿದೆ. ಅರೋಗ್ಯ ಭಾಗ್ಯ ಯೋಜನೆಯಡಿ 2025 ರ ಏಪ್ರಿಲ್ 1 ರಿಂದ ಈವರೆಗೆ ಒಟ್ಟು 32 ಜನ ನಿವೃತ್ತ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಹಾಗೂ ಅವರ ಕುಟುಂಬದವರು 'ಆರೋಗ್ಯ ಭಾಗ್ಯ' ಯೋಜನೆಯಡಿ ವೈದ್ಯಕೀಯ ಚಿಕಿತ್ಸೆ ಪಡೆದಿದ್ದಾರೆ. ಪ್ರಸಕ್ತ ಸಾಲಿನಲ್ಲಿ ನಿವೃತ್ತ ಸಿಬ್ಬಂದಿಗಳಿಗೆ ಒಟ್ಟು ರೂ. 2.36 ಲಕ್ಷ ಧನ ಸಹಾಯ ನೀಡಲಾಗಿದೆ.

ಧ್ವಜ ಮಾರಾಟ ದಿಂದ 26.82 ಲಕ್ಷ ನಿಧಿ ಸಂಗ್ರಹ: 2025ರ ಪೊಲೀಸ್ ಧ್ವಜ ದಿನಾಚರಣೆಯ ಅಂಗವಾಗಿ ಜಿಲ್ಲೆಯಾದ್ಯಂತ ಧ್ವಜ ಮಾರಾಟದಿಂದ ಒಟ್ಟು 26,82,600 ರೂ. ನಿಧಿ ಸಂಗ್ರಹಿಸಲಾಗಿದೆ. ಈ ಮೊತ್ತವನ್ನು ಶೇ. 50 ರೂ.13,41,300 ನಿವೃತ್ತ ಪೊಲೀಸ್ ಅಧಿಕಾರಿಗಳ ಕಲ್ಯಾಣ ನಿಧಿಗೆ ಹಾಗೂ ಶೇ. 50 ಅಂದರೆ ರೂ.13,41,300 ಗಳನ್ನು ಸಮಾನವಾಗಿ ಕೇಂದ್ರ ಪೊಲೀಸ್ ಕಲ್ಯಾಣ ನಿಧಿಗೆ ಜಮಾ ಮಾಡಲಾಗಿದೆ. ಇದರಿಂದ ನಿವೃತ್ತ ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಹೆಚ್ಚಿನ ವೈದ್ಯಕೀಯ ಸಹಾಯ ಮಾಡಲು ಅನುಕೂಲವಾಗಲಿದೆ ಎಂದರು.

ಕಾರ್ಯಕ್ರಮದ ಆರಂಭದಲ್ಲಿ ಇಲಾಖೆಯ 6 ತುಕಡಿಗಳಿಂದ ಆಕರ್ಷಕ ಪರೇಡ್ ನಡೆಸಲಾಯಿತು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಂಜುನಾಥ್ ಸ್ವಾಗತಿಸಿದರು. ಪೊಲೀಸ್ ಉಪಾಧೀಕ್ಷಕ ಡಾ.ಮಂಜುನಾಥ್ ವಂದಿಸಿದರು. ಕಾರ್ಯಕ್ರಮದಲ್ಲಿ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಇದ್ದರು.

# ಬೇಸಿಗೆ: ಮಕ್ಕಳನ್ನು ಸುರಕ್ಷಿತ ಕ್ರಿಯಾಶೀಲವಾಗಿ ಬಳಸಿಕೊಳ್ಳಿ: ಡಿಸಿ

• ಮಲ್ಲಮ್ಮ ನುಡಿವಾರ್ತೆ
ಕೊಪ್ಪಳ



ಮಕ್ಕಳ ನೆಚ್ಚಿನ ಬೇಸಿಗೆ ರಜೆಯಲ್ಲಿ ಮಕ್ಕಳು, ವಿದ್ಯಾರ್ಥಿಗಳು ವಹಿಸಬೇಕಾದ ಆರೋಗ್ಯ ಮುಂಜಾಗ್ರತೆ, ಹವ್ಯಾಸ, ವಿವಿಧ ಸುರಕ್ಷತಾ ಕ್ರಮಗಳ ಕುರಿತು ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ ಅವರು ಮಕ್ಕಳಿಗೆ ಸಲಹೆಗಳನ್ನು ನೀಡಿದ್ದಾರೆ.

ಬೇಸಿಗೆ ಅವಧಿಯಲ್ಲಿ ವಾತಾವರಣದಲ್ಲಿ ತಾಪಮಾನ ಹೆಚ್ಚಿರುವುದರಿಂದ ಮಕ್ಕಳು ಶರೀರವನ್ನು ರಕ್ಷಿಸಿಕೊಳ್ಳಲು ಹಗುರವಾದ ಹತ್ತಿಯ ಬಟ್ಟೆಯನ್ನು ಧರಿಸಿ, ಮನೆಯಿಂದ ಹೊರಗೆ ಹೋಗುವಾಗ ಬಿಸಿಲಿನ ಪ್ರಖರತೆಯಿಂದ ನಿಮ್ಮನ್ನು ಕಾಪಾಡಿಕೊಳ್ಳಿ ಹಾಗೂ ದೇಹದಲ್ಲಿ ನಿರ್ಜಲೀಕರಣವನ್ನು ತಡೆಗಟ್ಟಲು ಸಾಕಷ್ಟು ಪ್ರಮಾಣದಲ್ಲಿ ನೀರನ್ನು ಸೇವಿಸಬೇಕು.

ಬೇಸಿಗೆ ರಜೆಯಲ್ಲಿ ಕ್ರೀಯಾಶೀಲರಾಗಿರಲು ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಬೇಕು. ಜೀವನ ಕೌಶಲ್ಯಗಳನ್ನು ಪಡೆಯಲು ಪ್ರಯತ್ನಿಸಿ ಹಾಗೂ ನಿಮ್ಮ ಬೆಳವಣಿಗೆಗೆ ಪೂರಕವಾಗಿರುವ ಪಠ್ಯ/ಪಠ್ಯೇತರ ಚಟುವಟಿಗೆಯಲ್ಲಿ ನಿಮ್ಮನ್ನು ನೀವೇ ತೊಡಗಿಸಿಕೊಳ್ಳಿ. ಆಟವಾಡುವಾಗ, ಪ್ರವಾಸ ಕೈಗೊಂಡಾಗ ಮತ್ತು ಇತರ ಎಲ್ಲಾ ಸಂದರ್ಭದಲ್ಲಿ ನಿಮ್ಮ ಸುರಕ್ಷತೆಯ ಬಗ್ಗೆ ಗಮನವಹಿಸಿ. ನೀರಿನ ಪ್ರದೇಶಗಳು, ಕೃಷಿಹೊಂಡ, ವಿದ್ಯುತ್ ಉಪಕರಣ ಇತ್ಯಾದಿಗಳ ಬಗ್ಗೆ ಜಾಗೃತೆಯನ್ನು ವಹಿಸಬೇಕು.

ಬಾಲ್ಯವಿವಾಹ, ಮಕ್ಕಳ ದುಡಿಮೆ ಮತ್ತು ಲೈಂಗಿಕ ಅಪರಾಧ ಇತ್ಯಾದಿಗಳು ಮಕ್ಕಳ ಬಾಲ್ಯವನ್ನು ಮತ್ತು ಅವರ ಹಕ್ಕುಗಳನ್ನು ಕಸಿದುಕೊಳ್ಳುವ ಸಾಮಾಜಿಕ ಸಮಸ್ಯೆಗಳಾಗಿವೆ. ಇಂತಹ ಸಮಸ್ಯೆಗಳಿಂದ ನಿಮ್ಮನ್ನು ಮತ್ತು ನಿಮ್ಮ ಗೆಳೆಯ/ಗೆಳತಿಯರನ್ನು ರಕ್ಷಿಸಿ. ಇಂತಹ ಯಾವುದೇ ಘಟನೆಗಳ ಬಗ್ಗೆ ಮಾಹಿತಿ ಇದ್ದರೆ ತಕ್ಷಣ ಮಕ್ಕಳ ಸಹಾಯವಾಣಿ 1098/112ಕ್ಕೆ ಕರೆಮಾಡಿ ಮಾಹಿತಿ ನೀಡಿ ಹಾಗೂ ಸ್ಥಳೀಯ ಗ್ರಾಮ ಪಂಚಾಯತ್ ಅಥವಾ ನಗರ ಸ್ಥಳೀಯ ಸಂಸ್ಥೆಗಳ ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿಗಳಿಗೆ ತಿಳಿಸಬೇಕು. ಡಿಜಿಟಲ್ ಉಪಕರಣಗಳಾದ ಮೊಬೈಲ್, ಟಿ.ವಿ ಇತ್ಯಾದಿಗಳ ವೀಕ್ಷಣೆಯ ಅವಧಿಯ ಮಿತಿಯನ್ನು ಹಾಕಿಕೊಳ್ಳಿ. ಸುರಕ್ಷಿತವಾದ ಮೊಬೈಲ್ ಬಳಕೆಯ ನಿಯಮ ನಿಮ್ಮ ಮತ್ತು ನಿಮ್ಮ ಕುಟುಂಬದ ರಕ್ಷಣೆಗೆ ಸೂಕ್ತವೆಂದು ತಿಳಿದುಕೊಳ್ಳಿ. ಸೈಬರ್ ವಂಚಕರ ವಂಚನೆಗೆ ಸಿಲುಕಬೇಡಿ. 10ನೇ ತರಗತಿ ಮತ್ತು ದ್ವಿತೀಯ ಪಿ.ಯು.ಸಿ ಫಲಿತಾಂಶಗಳು ಬಂದ ನಂತರ ಮುಂದಿನ ವಿದ್ಯಾಭ್ಯಾಸದ ಬಗ್ಗೆ ಸರಿಯಾದ ತೀರ್ಮಾನಗಳನ್ನು ತೆಗೆದುಕೊಳ್ಳಿ. ಅನುತ್ತೀರ್ಣವಾದರೆ ಯಾವುದೇ ದುಡುಕಿನ ನಿರ್ಧಾರಗಳನ್ನು ತೆಗೆದುಕೊಳ್ಳದೇ ಮರಳಿ ಪ್ರಯತ್ನಗಳನ್ನು ಮಾಡಿ ಯಶಸ್ವಿಯಾಗಿ. ಜಿಲ್ಲೆಯಲ್ಲಿ ಅಪ್ರಾಪ್ತ ವಯಸ್ಸಿನ ಮಕ್ಕಳು ವಾಹನ ಚಲಾಯಿಸಿ ಅಪಘಾತ ಎಸಗಿದ ಪ್ರಕರಣಗಳು ಕಂಡುಬಂದಿವೆ. 18 ವರ್ಷದೊಳಗಿನ ಮಕ್ಕಳು ವಾಹನ ಚಲಾಯಿಸುವಂತಿಲ್ಲ. ರಸ್ತೆಯಲ್ಲಿ ಸಂಚರಿಸುವಾಗ ಜಾಗರೂಕರಾಗಿರಿ ಮತ್ತು ರಸ್ತೆ ಸುರಕ್ಷತಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿ. ಈ ಅಂಶಗಳ ಬಗ್ಗೆ ನಿಮ್ಮ ಶಿಕ್ಷಕರೊಂದಿಗೆ, ಕುಟುಂಬದೊಂದಿಗೆ ಚರ್ಚಿಸುವಂತೆ ನಿಮ್ಮಲ್ಲಿ ನನ್ನ ಮನವಿ ಹಾಗೂ ನಿಮ್ಮ ಜೀವನವನ್ನು ರೂಪಿಸುವಲ್ಲಿ ಸಹಕರಿಸಲು ಜಿಲ್ಲಾಡಳಿತ ಸದಾ ನಿಮ್ಮ ಜೊತೆ ಕೈ ಜೋಡಿಸುತ್ತದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

# ಅನಾಮಧೇಯ ಮೃತ ವ್ಯಕ್ತಿ: ವಾರಸುದಾರರ ಪತ್ತೆಗೆ ಮನವಿ



ಬಳ್ಳಾರಿ: ಬಳ್ಳಾರಿ ರೈಲ್ವೇ ಪೊಲೀಸ್ ಠಾಣೆ ವ್ಯಾಪ್ತಿಯ ಹೊಸಪೇಟೆ ರೈಲ್ವೇ ನಿಲ್ದಾಣದ ವೇದಿಕೆ ನಂ.01 ರ ಎಫ್‌ಓಬಿ ಕೆಳಗಡೆ ರೈಲ್ವೇ ಕಿ.ಮೀ. ನಂ.143/100 ರಲ್ಲಿ ಅಂದಾಜು 60 ವರ್ಷದ ವ್ಯಕ್ತಿಯು ಚಲಿಸುವ ಯಾವುದೋ ರೈಲು ಗಾಡಿಗೆ ಆತ್ಮಹತ್ಯೆ ಮಾಡಿಕೊಂಡು ಮೃತಪಟ್ಟಿದ್ದು, ಮೃತನ ವಾರಸುದಾರರ ಬಗ್ಗೆ ಮಾಹಿತಿ ಇರುವುದಿಲ್ಲ. ಈ ಕುರಿತು ಪ್ರಕರಣ ದಾಖಲಾಗಿದ್ದು, ಮೃತನ ವಾರಸುದಾರರ ಪತ್ತೆಗೆ ಸಹಕರಿಸಬೇಕು ಎಂದು ಪಿಎಸ್ಐ ಮನವಿ ಮಾಡಿದ್ದಾರೆ.

ಚಹರೆ ಗುರುತು: ಸುಮಾರು 5.5 ಅಡಿ ಎತ್ತರ, ಗೋಧಿ ಮೈಬಣ್ಣ, ಸಾಧಾರಣ ಮೈಕಟ್ಟು ಹೊಂದಿದ್ದು, ತಲೆಯಲ್ಲಿ ಸುಮಾರು 1 ಇಂಚು ಬಿಳಿಯ ಕೂದಲು, ಬಿಳಿಯ ಗಡ್ಡ ಮತ್ತು ಮೀಸೆ ಬಿಟ್ಟಿರುತ್ತಾನೆ. ಮೃತನ ಮೈಮೇಲೆ ತಿಳಿ ನೀಲಿ ಬಣ್ಣದ ತುಂಬು ತೋಳಿನ ಅಂಗಿ, ನೀಲಿ ಬಣ್ಣದ ಫುಲ್ ಬನಿಯನ್, ಬಿಳಿ ಮಿಶ್ರಿತ ಪಂಚೆ, ತಿಳಿ ಬೂದು ಬಣ್ಣದ ಒಳ ಉಡುಪು ಧರಿಸಿರುತ್ತಾನೆ. ಮೃತನ ವಾರಸುದಾರರ ಬಗ್ಗೆ ಮಾಹಿತಿ ಇದ್ದಲ್ಲಿ ಬಳ್ಳಾರಿ ರೈಲ್ವೇ ಪೊಲೀಸ್ ಠಾಣೆಯ ದೂ.08392-276063 ಅಥವಾ ರೈಲ್ವೇ ಪೊಲೀಸ್ ಕಂಟ್ರೋಲ್ ರೂಂ ದೂ.080-22871291 ಗೆ ಕರೆ ಮಾಡಿ ಮಾಹಿತಿ ನೀಡಬಹುದು ಎಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಯುಗಾದಿ ವಿಶೇಷಾಂಕಕ್ಕೆ ಗಣ್ಯರಿಂದ ಶುಭಾಶಯ



ಮಲ್ಲಮ್ಮ ನುಡಿ ಪತ್ರಿಕೆಯ ಯುಗಾದಿ ವಿಶೇಷಾಂಕಕ್ಕೆ ಗಣ್ಯರಿಂದ ಶುಭಾಶಯಗಳು ವ್ಯಕ್ತವಾಗಿವೆ.

IAS ಅಧಿಕಾರಿ ಗೋವಿಂದ ರೆಡ್ಡಿ, ಸಕ್ಕರೆ ಶಾಖೆಯ ಆಯುಕ್ತರು (ಪೂರ್ವ ಬೀದರ್ ಜಿಲ್ಲಾಧಿಕಾರಿಗಳು), ಯಾದಗಿರಿ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಮಹೇಶ್ ಬಿರಾದಾರ(DHO) ಹಾಗೂ ಯಾದಗಿರಿ ತಾಲೂಕು ಆರೋಗ್ಯಾಧಿಕಾರಿ ಡಾ. ಹನಮಂತರೆಡ್ಡಿ (THO)ಅವರು ಯುಗಾದಿ ಸಂಚಿಕೆಗೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಗೋವಿಂದ ರೆಡ್ಡಿ ಅವರು, ಮಲ್ಲಮ್ಮ ನುಡಿ ಪತ್ರಿಕೆ ಕಲ್ಯಾಣ ಕರ್ನಾಟಕದ ಧ್ವನಿಯಾಗಿ ಜನಸಾಮಾನ್ಯರ ಸಮಸ್ಯೆಗಳು ಹಾಗೂ ಸಮಗ್ರ ಸುದ್ದಿಗಳನ್ನು ಪರಿಣಾಮಕಾರಿಯಾಗಿ ಬಿತ್ತರಿಸುತ್ತಿದ್ದು, ಸಮಾಜದ ಅಭಿವೃದ್ದಿಗೆ ಮಹತ್ವದ ಪಾತ್ರವಹಿಸುತ್ತಿದೆ ಎಂದು ಪ್ರಶಂಸಿಸಿದರು.

ಮುಂದಿನ ದಿನಗಳಲ್ಲಿ ಪತ್ರಿಕೆ ಇನ್ನಷ್ಟು ಉನ್ನತ ಮಟ್ಟಕ್ಕೆ ಬೆಳೆಯಲಿ, ಜನಸೇವೆ ಇನ್ನಷ್ಟು ವಿಸ್ತಾರವಾಗಲಿ ಎಂದು ಶುಭ ಹಾರೈಸಿದರು.



ಕೇರಳ ಚುನಾವಣೆ ಪ್ರಚಾರದಲ್ಲಿರುವ ಸಚಿವ ಜಮೀರ್ ಅಹಮದ್ ಖಾನ್ ಅವರು ಮಂಜೇಶ್ವರ ವಿಧಾನ ಸಭೆ ಕ್ಷೇತ್ರದ ಯು ಡಿ ಎಫ್ ಅಭ್ಯರ್ಥಿ ಎ ಕೆ ಎಂ ಅಶ್ರಫ್ ಪರ ಪ್ರಚಾರ ಸಭೆಯಲ್ಲಿ ಮಾತಯಾಚನೆ ಮಾಡಿದರು. ಮಾಜಿ ಸಚಿವ ರಮಾನಾಥ್ ರೈ ಉಪಸ್ಥಿತರಿದ್ದರು.

# ಸೂಕ್ತ ಸಮಯದಲ್ಲಿ ಹೈಕಮಾಂಡ್ ತೀರ್ಮಾನ

**ದಾವಣಗೆರೆ:** "ದಾವಣಗೆರೆ ಹಾಗೂ ಬಾಗಲಕೋಟೆ ಜಿಲ್ಲೆಗಳಿಗೆ ಶಾಮನೂರು ಶಿವಶಂಕರಪ್ಪ ಹಾಗೂ ಹೆಚ್.ವೈ. ಮೇಟಿ ಅವರ ಕೊಡುಗೆ ಅದ್ಭುತವಾಗಿದೆ" ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಬಣ್ಣಿಸಿದರು. ದಾವಣಗೆರೆಯಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಗುರುವಾರ ಪ್ರತಿಕ್ರಿಯಿಸಿದರು. ದಾವಣಗೆರೆ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಪ್ರಚಾರ ಕುರಿತು ಕೇಳಿದಾಗ, "ಶಿವಶಂಕರಪ್ಪ ಹಾಗೂ ಮೇಟಿ ಅವರು ನಮ್ಮ ಪಕ್ಷದ ಹಿರಿಯ ನಾಯಕರು. ಶಾಸಕರಾಗಿ, ಸಚಿವರಾಗಿ ಹಾಗೂ ಸಂಸದರಾಗಿ ಅವರು ಕೆಲಸ ಮಾಡಿದ್ದಾರೆ. ಈ ಎರಡು ಕ್ಷೇತ್ರಗಳಲ್ಲಿ ನಾನು ಸಂಚಾರ ಮಾಡಿದ್ದು, ಬೆಂಗಳೂರಿಗಿಂತ ಉತ್ತಮವಾಗಿ ಅಭಿವೃದ್ಧಿ ಹೊಂದಿವೆ. ಈ ನಾಯಕರ ಕೊಡುಗೆ ಬಗ್ಗೆ ನನಗೆ ಹೆಮ್ಮೆ ಇದೆ" ಎಂದರು. "ಸಮಾಜದ ಎಲ್ಲಾ ವರ್ಗದವರು ಇವರ ಕೆಲಸದಿಂದ ಸಂತೋಷವಾಗಿದ್ದಾರೆ. ನಾನು ಇಲ್ಲಿ ಅಲ್ಪಸಂಖ್ಯಾತ ನಾಯಕರನ್ನು ಭೇಟಿ ಮಾಡಿದೆ. ಅವರಿಗೆ ಏನೇ ತೊಂದರೆ ಆದರೂ ಅವರಿಗೆ ಸ್ಪಂದಿಸುತ್ತಿದ್ದ ಒಂದು ಕುಟುಂಬ ಎಂದರೆ ಅದು ಶಿವಶಂಕರಪ್ಪ ಅವರ ಮನೆ. ಇದು ಈ ಕ್ಷೇತ್ರದ ಜನ ಅವರ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ಸಾಕ್ಷಿ. ಈ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿರುವುದು ಬಹಳ ಸಂತೋಷವಾಗಿದೆ" ಎಂದರು.

# ಮಂಗಗಳ ಕಾಟಕ್ಕೆ ಬೇಸತ್ತ ಕೇಶ್ವಾರ ಗ್ರಾಮಸ್ಥರು

• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ತಾಲೂಕಿನ ಚಂಡರಕಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೇಶ್ವಾರ ಗ್ರಾಮದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ತೀವ್ರವಾಗಿದ್ದು, ವಿಶೇಷವಾಗಿ ಚರಂಡಿ ವ್ಯವಸ್ಥೆಯ ಅಭಾವ ಹಾಗೂ ಮಂಗಗಳ ಕಾಟದಿಂದ ಜನಜೀವನ ದುಸ್ತರವಾಗಿದೆ.

ಗ್ರಾಮದಲ್ಲಿ ಚರಂಡಿ ನೀರು ಸರಿಯಾಗಿ ಹರಿಯದ ಕಾರಣ ಮನೆಗಳ ಮುಂದೆ ಸಂಗ್ರಹವಾಗಿ ದುರ್ವಾಸನೆ ಹರಡುತ್ತಿದ್ದು, ಸಾಂಕ್ರಾಮಿಕ ರೋಗಗಳಿಗೆ ಕಾರಣವಾಗುತ್ತಿದೆ. ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿ, ತಕ್ಷಣ ಸಮರ್ಪಕ ಚರಂಡಿ ನಿರ್ಮಾಣ ಕಾಮಗಾರಿ ಕೈಗೊಳ್ಳಬೇಕೆಂದು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸೇರಿದಂತೆ ಮೇಲಾಧಿಕಾರಿಗಳಿಗೆ ಆಗ್ರಹಿಸಿದ್ದಾರೆ.

ಇನ್ನೊಂದೆಡೆ, ಕಳೆದ ಎರಡು ವರ್ಷಗಳಿಂದ ಗ್ರಾಮದಲ್ಲಿ ಮಂಗಗಳ ಕಾಟ ದಿನೇದಿನೇ ಹೆಚ್ಚುತ್ತಿದ್ದು, ಮಕ್ಕಳು ಹಾಗೂ ಮಹಿಳೆಯರ ಮೇಲೆ ದಾಳಿ ನಡೆಸುತ್ತಿರುವ ಘಟನೆಗಳು ಹೆಚ್ಚಾಗಿವೆ. ಮನೆಗಳೊಳಗೆ ನುಗ್ಗಿ ಆಹಾರ ವಸ್ತುಗಳನ್ನು ಹಾಳು ಮಾಡುತ್ತಿರುವ ಮಂಗಗಳ ಹಾವಳಿ ಜನರಲ್ಲಿ ಭೀತಿಯ ವಾತಾವರಣ ನಿರ್ಮಾಣ ಮಾಡಿದೆ. ಈ ಕುರಿತು ಪಿಡಿಓ ಗೀತಾ ಅವರಿಗೆ ಮಾಹಿತಿ ನೀಡಿದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಮಂಗಗಳನ್ನು ನಿಯಂತ್ರಿಸಲು ಸಂಬಂಧಪಟ್ಟ ಇಲಾಖೆ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.



ಇದೇ ವೇಳೆ, ಗ್ರಾಮದಲ್ಲಿ ಸಾರ್ವಜನಿಕ ಶೌಚಾಲಯದ ವ್ಯವಸ್ಥೆಯಿಲ್ಲದಿರುವುದರಿಂದ ಹೆಣ್ಣು ಮಕ್ಕಳು ಬಯಲು ಶೌಚಕ್ಕೆ ತೆರಳಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ. "ಸಾರ್ವಜನಿಕ ಶೌಚಾಲಯ ನಿರ್ಮಾಣ ಯಾವಾಗ?" ಎಂಬ ಪ್ರಶ್ನೆಯನ್ನು ಗ್ರಾಮಸ್ಥರು ಅಧಿಕಾರಿಗಳ ಮುಂದಿಟ್ಟಿದ್ದಾರೆ.

ಕುಡಿಯುವ ನೀರಿನ ಸಮರ್ಪಕ ಸರಬರಾಜು ಇಲ್ಲದಿರುವುದರಿಂದ ಜನರು ದಿನನಿತ್ಯದ ಅಗತ್ಯಗಳಿಗೆ ಪರದಾಡುವಂತಾಗಿದೆ.

> ಜನರ ಮನೆ ಮನೆ ತಿರುಗಿ ಕರ ವಸೂಲಿ ಮಾಡುತ್ತಿರ ನಮ್ಮ ಸಮಸ್ಯೆಗಳಾದ ಚರಂಡಿ ಕಾಮಗಾರಿ, ಮಂಗಗಳ ಕಾಟಕ್ಕೆ ಶಾಶ್ವತ ಪರಿಹಾರ, ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ.
>
> –ಅಶೋಕ್ ರೆಡ್ಡಿ ಗ್ರಾಮಸ್ಥರು

> ಗ್ರಾಮದ ಸಮಸ್ಯೆಗಳ ಕುರಿತು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಈಗಾಗಲೇ ಸೂಚನೆ ನೀಡಿದ್ದು ಈ ವಾರದ ಒಳಗಾಗಿ ಬಗೆಹರಿಸುವ ಪ್ರಯತ್ನ ಮಾಡುತ್ತೇವೆ.
>
> –ಅಂಬರೀಷ ಪಾಟೀಲ, ತಾಲೂಕ ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ಗುರುಮಠಕಲ್.

ಇದಲ್ಲದೆ, ಗ್ರಾಮದ ಮೂಲಕ ಸಾಗುವ ರಾಜ್ಯ ಹೆದ್ದಾರಿ ಗುಂಡಿಗಳಿಂದ ತುಂಬಿಕೊಂಡಿದ್ದು, ಪ್ರತಿದಿನ ಅಪಘಾತಗಳು ಸಂಭವಿಸುತ್ತಿವೆ. ಪ್ರಾಣಾಪಾಯದ ನಡುವೆ ವಾಹನ ಸವಾರರು ಸಂಚರಿಸುವ ಪರಿಸ್ಥಿತಿ ಉಂಟಾಗಿದೆ ಎಂದು ಸಾರ್ವಜನಿಕರು ತಿಳಿಸಿದ್ದಾರೆ.

ಈ ಎಲ್ಲಾ ಸಮಸ್ಯೆಗಳ ಕುರಿತು ಹಲವು ಬಾರಿ ಮೇಲಾಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

# ಎಲ್ಲಿದೆ ಯತ್ನಾಳ್ ಸ್ವಾಭಿಮಾನ..?: ಸಚಿವ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ





ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮರಳಿ ಬಿಜೆಪಿ ಸೇರುವುದಕ್ಕಾಗಿ ಬಾಗಲಕೋಟೆ ಉಪಚುನಾವಣೆಯ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಪ್ರಚಾರ ಮಾಡುವ ನಾಟಕ ಮಾಡುತ್ತಿದ್ದಾರೆ ಎಂದು ಸಚಿವ ಎಂ.ಬಿ.ಪಾಟೀಲ್ ಟೀಕಿಸಿದ್ದಾರೆ.

ಬಾಗಲಕೋಟೆ ನಗರ ಕ್ಷೇತ್ರದ ಉಪಚುನಾವಣೆ ಹಿನ್ನೆಲೆ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಬಿಜೆಪಿಯಿಂದ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ಪ್ರಚಾರ ಕುರಿತು ನಗರದಲ್ಲಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಮಾಜಿ ಸಿಎಂ ಯಡಿಯೂರಪ್ಪ ಮತ್ತು ಮಗ ವಿಜಯೇಂದ್ರ ವಿರುದ್ಧ ಯತ್ನಾಳ್ ಮಾತನಾಡುತ್ತಾರೆ.

ಬಾಗಲಕೋಟೆ ಅಭ್ಯರ್ಥಿ ಚರಂತಿಮಠ ಅವರು ಯಡಿಯೂರಪ್ಪ, ಗೋವಿಂದ ಕಾರಜೋಳ ಬಣದವರು. ಇವರ ಬಣದವರ ಪ್ರಚಾರಕ್ಕೆ ಯತ್ನಾಳ್ ಹೊರಟಿದ್ದಾರೆ. ಅದೇ ದಾವಣಗೆರೆಯ ಬಿಜೆಪಿ ಅಭ್ಯರ್ಥಿ ಯಡಿಯೂರಪ್ಪ ಬಣವಲ್ಲ, ಮಾಜಿ ಸಂಸದ ಸಿದ್ದೇಶ್ವರ ಬಣದವರು. ಯಡಿಯೂರಪ್ಪ ಅವರಿಗೆ ಹೇಳದೇ ಅಲ್ಲಿ ಬಿಜೆಪಿ ಟಿಕೆಟ್ ನೀಡಲಾಗಿದೆ. ಹೀಗಾಗಿ ಯತ್ನಾಳ ಸುಮ್ಮನೇ ನಾಟಕ ಮಾಡುತ್ತಿದ್ದಾರೆ ಎಂದು ಕುಟುಕಿದ್ದಾರೆ. ಬಿಜೆಪಿಯಲ್ಲಿ ಅಪಮಾನ ಮಾಡಿ ಯತ್ನಾಳ್ ಅವರನ್ನು ಹೊರಹಾಕಲಾಗಿದೆ. ಈಗ ಮಾನ–ಮರ್ಯಾದೆ ಬಿಟ್ಟು ಪ್ರಚಾರಕ್ಕೆ ಹೋಗಿದ್ದಾರೆ. ಹಾಗಾದರೆ, ಯತ್ನಾಳ್ ಸ್ವಾಭಿಮಾನ ಎಲ್ಲಿ ಹೋಯ್ತು? ಸುಮ್ಮನೆ ನನ್ನನ್ನು ಬಿಜೆಪಿಗೆ ವಾಪಸ್ ತೆಗೆದುಕೊಳ್ಳಿ ಅಂತಾ ಯತ್ನಾಳ್ ಕೈಮುಗಿದು ಕೇಳಿಕೊಳ್ಳಲಿ ಎಂದಿದ್ದಾರೆ.

# ಖಂಡ್ರೆ ಭರ್ಜರಿ ಪ್ರಚಾರ ಮತಬೇಟೆ

• ಮಲ್ಲಮ್ಮ ನುಡಿ ವಾರ್ತೆ ದಾವಣಗೆರೆ

ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶ್ರೀ ಸಮರ್ಥ ಶಾಮನೂರು ಅವರ ಪರವಾಗಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ರಾಷ್ಟ್ರಾಧ್ಯಕ್ಷರು ಹಾಗೂ ಅರಣ್ಯ – ಪರಿಸರ ಸಚಿವರಾದ ಶ್ರೀ ಈಶ್ವರ ಖಂಡ್ರೆ ಅವರು ಭರ್ಜರಿ ಪ್ರಚಾರ ಮತಬೇಟೆ ಮಾಡಿದರು.

ಉಪಚುನಾವಣೆಯನ್ನು ಯಾರೂ ಬಯಸಿಲ್ಲ. ನಮ್ಮೆಲ್ಲರ ನೆಚ್ಚಿನ ಹಿರಿಯ ನಾಯಕರು ಶ್ರೀ ಶಾಮನೂರು ಶಿವಶಂಕ್ರಪ್ಪ ಅಣ್ಣನವರ ನಿಧನದಿಂದ ತೆರವಾದ ಸ್ಥಾನಕ್ಕೆ ಈ ಉಪಚುನಾವಣೆ ನಡೆ–ಯುತ್ತಿದ್ದು, ಅವರ ಆದರ್ಶಗಳು ಹಾಗೂ ಜನಪರ ಸೇವೆಯನ್ನು ಮುಂದುವರಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿರುವುದಾಗಿ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ದಾವಣಗೆರೆಯ ಡಿಸಿಎಂ ಬಡಾವಣೆ, ದೇವರಾಜ ಅರಸು ಬಡಾವಣೆ, ಕಾಯಿಪೇಟೆ, ಮೈಸೂರು ಮಠ ಸೇರಿದಂತೆ ವೀರಶೈವ ಲಿಂಗಾಯತ ಸಮುದಾಯದ ವಿವಿಧ ಬಡಾವಣೆಗಳಲ್ಲಿ ಪ್ರಮುಖರೊಂದಿಗೆ ಸಭೆ ನಡೆಸಿ, ಕಾಂಗ್ರೆಸ್ ಅಭ್ಯರ್ಥಿ ಶ್ರೀ ಸಮರ್ಥ ಶಾಮನೂರು ಅವರಿಗೆ ಬೆಂಬಲ ಸೂಚಿಸುವಂತೆ ಮನವಿ ಮಾಡಿದರು. ಕ್ಷೇತ್ರದ ಅಭಿವೃದ್ಧಿ, ಸಮುದಾಯದ ಹಿತಾಸಕ್ತಿ ಹಾಗೂ ಜನಪರ ಆಡಳಿತವನ್ನು ಮುಂದುವರಿಸಲು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವ ಅಗತ್ಯವಿದೆ ಎಂದು ಅವರು ಹೇಳಿದರು.



# ಶ್ರದ್ಧಾಭಕ್ತಿಯಿಂದ ಪವಿತ್ರ ಹಬ್ಬ, ಶುಭ ಶುಕ್ರವಾರ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ ಚಿಕ್ಕಬಳ್ಳಾಪುರ

ವಿಶೇಷ ಪ್ರಾರ್ಥನಾ ಕೂಟಗಳಲ್ಲಿ ಏಸು ಕ್ರಿಸ್ತನನ್ನು ಸ್ತುತಿ ಮಾಡುವ ಮೂಲಕ ಪವಿತ್ರ ಹಬ್ಬ ಶುಭ ಶುಕ್ರವಾರವನ್ನು ಕ್ರೈಸ್ತರು ಶ್ರದ್ಧಾ ಭಕ್ತಿಯಿಂದ ಆಚರಿಸಿದರು.

ಕ್ರೈಸ್ತರ ಪ್ರಮುಖ ದೇವಾಲಯಗಳಾದ ಸಿಎಸ್ಐ ಕ್ರೈಸ್ಟ್ ಚರ್ಚ್, ಸೆಂಟ್ ಕ್ಸೇವಿಯರ್ ಚರ್ಚ್, ವಾಪಸಂದ್ರದಲ್ಲಿನ ಚರ್ಚ್ ಸೇರಿದಂತೆ ಇತರೆ ಚರ್ಚ್‌ಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿದ ಕ್ರೈಸ್ತರು ಏಸು ಕ್ರಿಸ್ತನ ಸಂದೇಶಗಳನ್ನು ಆಲಿಸಿದರು.

ಶುಭ ಶುಕ್ರವಾರವಾದ ಬೆಳಗ್ಗೆ 11 ಘಂಟೆಗೆ ಹಮ್ಮಿಕೊಂಡಿದ್ದ ವಿಶೇಷ ಸಭೆಗಳಿಗೆ ಉಪವಾಸದೊಂದಿಗೆ ಆಲಯದಲ್ಲಿ ಸೇರಿದ ಕ್ರೈಸ್ತರು, ಏಸುಕ್ರಿಸ್ತನ ಸಂದೇಶಗಳ ಬಗ್ಗೆ ಸಭಾ ಪಾಲಕರು ನೀಡಿದ ಬೋಧನೆಯನ್ನು ಆಲಿಸಿದರು. ಶುಭ ಶುಕ್ರವಾದ ಅಂಗವಾಗಿ ವಿಶೇಷ ಪ್ರಾರ್ಥನೆ ಹಾಗೂ ಗೀತೆಗಳನ್ನು ಹಾಡಲಾಯಿತು.



ಸಿಎಸ್ಐ ಚರ್ಚ್ ಸಭಾಪಾಲಕ ರೆ. ವಿ.ಪ್ರವೀಣ್ ಸಂದೇಶ ನೀಡಿ ಮಾತನಾಡಿ, ಏಸು ಸ್ವಾಮಿಯ ಪ್ರೀತಿಯಲ್ಲಿ ವ್ಯತ್ಯಾವಿಲ್ಲ, ಕ್ಷಮಾಪಣೆಯಲ್ಲಿ ಆಯ್ಕೆಗಳಿಲ್ಲ. ಎಲ್ಲರಿಗಾಗಿ ದೇವರದಲ್ಲಿ ಪ್ರಾರ್ಥನೆಯನ್ನು ಮಾಡುವ ಸ್ವಾಮಿ, ಶಿಲುಬೇರಿದಾಗಲೂ ಜನರಿಗಿಯೇ ವಿವಿಧ ಅರ್ಥವುಳ್ಳ, ದೃಷ್ಟಿಕೋನವುಳ್ಳ ಮಾತುಗಳನ್ನಾಡಿದ್ದಾರೆ. ಸ್ವಾಮಿಯ ಸಂದೇಶ ಜೀವನದಲ್ಲಿ ಅಳವಡಿಸಿಕೊಂಡರೆ ಜೀವನ ಸುಂದರಮಯವಾಗುವುದು ಎಂದು ಹೇಳಿದರು.

ಶಾಂತಿ ಕ್ಷಮಾಪಣೆಯ ಸಂದೇಶವನ್ನು ಏಸುವು ಸಾರಿದ್ದು, ಸಣ್ಣ ತಪ್ಪುಗಲು ಹಾಗೂ ಕ್ಷಣಿಕಕ್ಕೆ ಮಾತ್ರ ಕ್ಷಮಾಪಣೆಯನ್ನು ಸೀಮಿತಗೊಳಿಸಿದೆ, ಎಲ್ಲ ವಿಷಯಗಳನ್ನು ಮರೆಯುವುದಾಗಿದೆ. ಕ್ಷಮಿಸುವುದು ಎಂಬುದು ಬಲಹೀನತೆ ಅಲ್ಲ ಎಂದು ಸ್ವಾಮಿಯು ಸಾರಿದ್ದಾರೆ ಎಂದು ಹೇಳಿದರು. ಪ್ರಸ್ತುತ ಸನ್ನಿವೇಶ ಮಾತಿನ ಯುದ್ಧ ಮಾಡುವ ವ್ಯಕ್ತಿಯ ಚಾರಿತ್ರ ಹರಣ ಮಾಡುವ ಪ್ರಸಂಗ ಹೆಚ್ಚಾಗುತ್ತಿದ್ದು, ಒಬ್ಬರಿಂದ ಒಬ್ಬರನ್ನು ನೋಯಿಸಲಾಗುತ್ತಿದೆ. ಅವಮಾನಕ್ಕೆ ತಕ್ಕ ಪ್ರತಿಕಾರವಿಲ್ಲದೆ ಸಮಾಧಾನ ಇಲ್ಲ ಎಂಬಂತಾಗಿದೆ. ಆದ್ದರಿಂದ ಪ್ರಸ್ತುತ ಸಮಾಜಕ್ಕೆ ಸ್ವಾಮಿಯ ಸಂದೇಶ ಅಗತ್ಯವಿದೆ. ಕ್ಷಮಿಸುವ ವ್ಯಕ್ತಿಗಳಾಗಿ ಜೀವಿಸಬೇಕು. ಷರತ್ತು, ಆಯ್ಕೆಗಳನ್ನು ಬಿಟ್ಟು ಕ್ಷಮಾಗುಣ ಬೆಳೆಸಿಕೊಳ್ಳಬೇಕೆಂದರು. ಉಪವಾಸ ನಿರತ ಕ್ರೈಸ್ತರಿಗೆ ಚರ್ಚ್‌ಗಳಲ್ಲಿ ಪ್ರಾರ್ಥನೆಯ ನಂತರ ಲಘು ಉಪಹಾರ, ಪಾನಕ, ಮಜ್ಜಿಗೆ ಹಾಗೂ ಕೋಸಂಬರಿ ವಿತರಿಸಲಾಯಿತು. ಈ ಸಂದರ್ಭದಲ್ಲಿ ಘನ ಇಮ್ಯಾನುಯಲ್ ಪುನೀತ್, ಚರ್ಚಿನ ಕಾರ್ಯದರ್ಶಿ ವಿ ದಾಸ್, ಖಜಾಂಚಿ ಹೆನ್ರಿ ಪ್ರಸನ್ನ ಕುಮಾರ್, ಅರುಣ್ ಕುಮಾರ್, ಪಾಲ್ ಅಬ್ರಹಮ್, ಕಿರಣ್ ವಿಕ್ಟರಿ, ಆದರ್ಶ್, ಸ್ವಾಮಿ ದಾಸ್ ಎಸ್, ಸಂದೀಪ್ ಎಸ್, ರಾಜಶೇಖರ್ ಇತರರು ಉಪಸ್ಥಿತರಿದ್ದರು.


# ಮ್ಯೂಸಿಯಂಗಳು ಇತಿಹಾಸದ ಕಿಟಕಿಗಳು, ಆಧುನಿಕತೆಗೆ ಬಾಗಿಲುಗಳು




ಇತಿಹಾಸ, ಪರಂಪರೆ, ಜೀವವೈವಿಧ್ಯತೆ, ಮುಂತಾದ ವಿಭಿನ್ನ ವಸ್ತು ವಿಷಯಗಳ ಬಗ್ಗೆ ತಿಳಿದುಕೊಳ್ಳಲು ಮಾಹಿತಿ ಒದಗಿಸುವ ಅತ್ಯಮೂಲ್ಯ ಸಂಗ್ರಹಾಲಯಗಳೆಂದರೆ ಈ ನಮ್ಮ ವಸ್ತುಸಂಗ್ರಹಾಲಯಗಳು. ಇತ್ತೀಚೆಗೆ ಕ್ಯಾಪಿಟೋಲಿನ್ ವಸ್ತುಸಂಗ್ರಹಾಲಯವನ್ನು ವಿಶ್ವದ ಅತ್ಯಂತ ಹಳೆಯ ವಸ್ತುಸಂಗ್ರಹಾಲಯವೆಂದು ಪರಿಗಣಿಸಲಾಗಿದೆ. ಇದನ್ನು 1471 ರಲ್ಲಿ 4 ನೇ ಪೋಪ್ ಸಿಕ್ಸಸ್ ಹಲವಾರು ರೋಮನ್ ಪ್ರತಿಮೆಗಳು ಮತ್ತು ಕಲಾಕೃತಿಗಳನ್ನು ದಾನ ಮಾಡಿದಾಗ ಈ ಸಂಗ್ರಹಾಲಯವನ್ನು ಸ್ಥಾಪಿಸಲಾಯಿತು. ರೋಮ್‌ನ ಕೊಲೋಸಿಯಮ್ ಬಳಿ ಇರುವ ಇದನ್ನು 1734 ರಲ್ಲಿ ಸಾರ್ವಜನಿಕರಿಗೆ ಮುಕ್ತಗೊಳಿಸಲಾಯಿತು.

ವಸ್ತುಸಂಗ್ರಹಾಲಯಗಳು ಇತಿಹಾಸ, ಕಲೆ, ಸಂಸ್ಕೃತಿ ಮತ್ತು ಜ್ಞಾನವನ್ನು ಸಂರಕ್ಷಿಸಿ ಜನರೊಂದಿಗೆ ಹಂಚಿಕೊಳ್ಳುವ ಸ್ಥಳಗಳಾಗಿವೆ. ವಿಶ್ವದ ಕೆಲವು ಹಳೆಯ ವಸ್ತುಸಂಗ್ರಹಾಲಯಗಳು ರಾಜರು, ಪೋಪ್‌ಗಳು ಅಥವಾ ವಿದ್ವಾಂಸರ ಖಾಸಗಿ ಸಂಗ್ರಹಗಳಾಗಿ ಪ್ರಾರಂಭವಾದವು, ನಂತರ ಸಾರ್ವಜನಿಕರಿಗೆ ತೆರೆಯಲ್ಪಟ್ಟವು. ಈ ವಸ್ತುಸಂಗ್ರಹಾಲಯಗಳು ಪ್ರಾಚೀನ ಸಂಪತ್ತನ್ನು ರಕ್ಷಿಸುವುದಲ್ಲದೆ ನಾಗರಿಕತೆಗಳ ಕಥೆಗಳನ್ನು ಸಹ ಹೇಳುತ್ತವೆ, ಅವುಗಳನ್ನು ಭೂತಕಾಲದ ಕಿಟಕಿಗಳಾಗಿ ಮತ್ತು ಎಲ್ಲರಿಗೂ ಅಮೂಲ್ಯವಾದ ಕಲಿಕೆಯ ಕೇಂದ್ರಗಳಾಗಿ ಮಾಡುತ್ತವೆ. ವಿಶ್ವದ ಟಾಪ್–10 ಅತ್ಯಂತ ಹಳೆಯ ವಸ್ತುಸಂಗ್ರಹಾಲಯಗಳು ಯಾವುವೆಂದು ನೋಡಲು ಹೊರಟಾಗ ನಮಗೆ ಎದುರಾಗುವ ಸಂಗ್ರಹಾಲಯಗಳು ಈ ಕೆಳಗಿನವು. 1471 ರಲ್ಲಿ ಸ್ಥಾಪಿಸಲಾದ ಮತ್ತು ರೋಮ್ ಇಟಲಿಯಲ್ಲಿರುವ ಕ್ಯಾಪಿಟೋಲಿನ್ ವಸ್ತುಸಂಗ್ರಹಾಲಯಗಳು ವಿಶ್ವದ ಅತ್ಯಂತ ಹಳೆಯ ವಸ್ತುಸಂಗ್ರಹಾಲಯವಾಗಿ ನಿಂತಿದೆ. ನಂತರ ವ್ಯಾಟಿಕನ್ ವಸ್ತುಸಂಗ್ರಹಾಲಯ, ರಾಯಲ್ ಆರ್ಮರೀಸ್ ಮತ್ತು ಕುನ್ಸ್ಟ್‌ಮ್ಯೂಸಿಯಂ ಸೇರಿವೆ. ಇಂತಹ ವಸ್ತುಸಂಗ್ರಹಾಲಯಗಳ ಶ್ರೇಣಿ, ವಸ್ತುಸಂಗ್ರಹಾಲಯ, ಸ್ಥಳ ಹಾಗೂ ಅವುಗಳ ಸ್ಥಾಪನಾ ವರ್ಷಗಳು ಈ ಕೆಳಗಿನಂತಿವೆ.

1. ಕ್ಯಾಪಿಟೋಲಿನ್ ವಸ್ತುಸಂಗ್ರಹಾಲಯ, ರೋಮ್, ಇಟಲಿ. 1471
2. ವ್ಯಾಟಿಕನ್ ವಸ್ತುಸಂಗ್ರಹಾಲಯ, ವ್ಯಾಟಿಕನ್ ನಗರ.1506.
3. ರಾಯಲ್ ಆರ್ಮರೀಸ್, ಲಂಡನ್, ಇಂಗ್ಲೆಂಡ್.1660.
4. ಕುನ್ಸ್ಟ್‌ಮ್ಯೂಸಿಯಂ, ಬಾಸೆಲ್, ಸ್ವಿಟ್ಜರ್‌ಲ್ಯಾಂಡ್.1661.
5. ಆಶ್ಮೋಲಿಯನ್ ವಸ್ತುಸಂಗ್ರಹಾಲಯ, ಆಕ್ಸ್‌ಫರ್ಡ್, ಇಂಗ್ಲೆಂಡ್. 1683.
6. ಲೌವ್ರೆ ವಸ್ತುಸಂಗ್ರಹಾಲಯ, ಪ್ಯಾರಿಸ್, ಫ್ರಾನ್ಸ್.1793.
7. ಬೆಲ್ವೆಡೆರೆ ಅರಮನೆ, ವಿಯೆನ್ನಾ, ಆಸ್ಟ್ರಿಯಾ.1781.
8. ಚಾರ್ಲ್ಸ್‌ನ್ ವಸ್ತುಸಂಗ್ರಹಾಲಯ, ದಕ್ಷಿಣ ಕೆರೊಲಿನಾ, ಯುಎ.1773.
9. ಹರ್ಮಿಟೇಜ್ ವಸ್ತುಸಂಗ್ರಹಾಲಯ, ಸೇಂಟ್ ಪೀಟರ್ಸ್‌ಬರ್ಗ್, ರಷ್ಯಾ.1764.



10. ಭಾರತೀಯ ವಸ್ತುಸಂಗ್ರಹಾಲಯ, ಕೋಲ್ಕತ್ತಾ, ಭಾರತ.1814.

**ಕ್ಯಾಪಿಟೋಲಿನ್ ವಸ್ತುಸಂಗ್ರಹಾಲಯ, ವಿಶ್ವದ ಅತ್ಯಂತ ಹಳೆಯ ವಸ್ತುಸಂಗ್ರಹಾಲಯ:** ಕ್ಯಾಪಿಟೋಲಿನ್ ವಸ್ತುಸಂಗ್ರಹಾಲಯವನ್ನು ವಿಶ್ವದ ಅತ್ಯಂತ ಹಳೆಯ ವಸ್ತುಸಂಗ್ರಹಾಲಯವೆಂದು ಪರಿಗಣಿಸಲಾಗಿದೆ. ಇದನ್ನು 1471 ರಲ್ಲಿ 4 ನೇ ಪೋಪ್ ಸಿಕ್ಸಸ್ ಹಲವಾರು ರೋಮನ್ ಪ್ರತಿಮೆಗಳು ಮತ್ತು ಕಲಾಕೃತಿಗಳನ್ನು ದಾನ ಮಾಡಿದಾಗ ಇದನ್ನು ಸ್ಥಾಪಿಸಲಾಯಿತು. ರೋಮ್‌ನ ಕೊಲೋಸಿಯಮ್ ಬಳಿ ಇರುವ ಇದನ್ನು 1734 ರಲ್ಲಿ ಸಾರ್ವಜನಿಕರ ದರ್ಶನಕ್ಕೆ ಮುಕ್ತ ಅವಕಾಶ ನೀಡಲಾಯಿತು. ಈ ವಸ್ತುಸಂಗ್ರಹಾಲಯವು ಪ್ರಾಚೀನ ರೋಮ್‌ನ ಅನೇಕ ಸಂಪತ್ತನ್ನು ಸಂರಕ್ಷಿಸುತ್ತದೆ, ಇದರಲ್ಲಿ ಕ್ಯಾಪಿಟೋಲಿನ್ ವುಲ್ಫ್‌ನಂತಹ ಶಿಲ್ಪಗಳು ಸೇರಿವೆ, ಇದು ಇದನ್ನು ಇತಿಹಾಸ ಮತ್ತು ಕಲೆಯ ಕೇಂದ್ರವನ್ನಾಗಿ ಮಾಡಿದೆ.

**ವ್ಯಾಟಿಕನ್ ವಸ್ತುಸಂಗ್ರಹಾಲಯ:** 1506 ರಲ್ಲಿ 2 ನೇ ಪೋಪ್ ಜೂಲಿಯಸ್ ಸ್ಥಾಪಿಸಿದ ವ್ಯಾಟಿಕನ್ ವಸ್ತುಸಂಗ್ರಹಾಲಯ ವಿಶ್ವದ ಅತ್ಯಂತ ಪ್ರಸಿದ್ಧ ವಸ್ತುಸಂಗ್ರಹಾಲಯ. ಇದರಲ್ಲಿ ಈ ಪೋಪ್ ರ ಮೊದಲ ಕಲಾಕೃತಿ ಲಾವೊಕೂನ್ ಮತ್ತು ಅವನ ಮಕ್ಕಳು, ನಂತರ ಮೈಕೆಲ್ಯಾಂಜೆಲೊನ ಕೊನೆಯ ತೀರ್ಪು ಮತ್ತು ಅಥೆನ್ಸ್‌ನ ರಾಫೆಲ್ ಶಾಲೆಯಂತಹ ಮೇರುಕೃತಿಗಳು ಸೇರಿಕೊಂಡವು. ಸಿಸ್ಟೀನ್ ಚಾಪೆಲ್ ಅನ್ನು ನೋಡಲು ಲಕ್ಷಾಂತರ ಜನರು ವಾರ್ಷಿಕವಾಗಿ ಭೇಟಿ ನೀಡುತ್ತಾರೆ, ಇದು ಧಾರ್ಮಿಕ ಕಲೆ, ಸಂಸ್ಕೃತಿ ಮತ್ತು ನವೋದಯದ ವೈಭವದ ಜಾಗತಿಕ ಸಂಕೇತವಾಗಿದೆ.

**ರಾಯಲ್ ಆರ್ಮರೀಸ್:** ಲಂಡನ್‌ನಲ್ಲಿರುವ ರಾಯಲ್ ಆರ್ಮರೀಸ್ ಅತ್ಯಂತ ಹಳೆಯ ವಸ್ತುಸಂಗ್ರಹಾಲಯಗಳಲ್ಲಿ ಒಂದಾಗಿದೆ. ಇದನ್ನು ಮೊದಲು 1660 ರಲ್ಲಿ ತೆರೆಯಲಾಯಿತು. ಇದು ಆಭರಣಗಳಿಂದ ಶೋಭಿತವಾದ ಕಿರೀಟವನ್ನು ಪ್ರದರ್ಶಿಸಿತು ಮತ್ತು ನಂತರ ವಿಶ್ವದ ಅತಿದೊಡ್ಡ ರಕ್ಷಾಕವಚ ಮತ್ತು ಶಸ್ತ್ರಾಸ್ತ್ರಗಳ ಸಂಗ್ರಹಕ್ಕೆ ನೆಲೆಯಾಗಿ ವಿಸ್ತರಿಸಿತು. ಈ ವಸ್ತುಸಂಗ್ರಹಾಲಯವು ಕತ್ತಿಗಳು, ಗುರಾಣಿಗಳು, ಬಂದೂಕುಗಳು ಮತ್ತು ರಾಜಮನೆತನದ ಸಂಪತ್ತಿನ ಮೂಲಕ ಬ್ರಿಟನ್‌ನ ಮಿಲಿಟರಿ ಇತಿಹಾಸವನ್ನು ಎತ್ತಿ ತೋರಿಸುತ್ತದೆ. ಇದು ಇತಿಹಾಸ ಮತ್ತು ಯುದ್ಧದಲ್ಲಿ ಆಸಕ್ತಿ ಹೊಂದಿರುವವರಿಗೆ ಆಕರ್ಷಕ ತಾಣವಾಗಿದೆ.

**ಕುನ್ಸ್ಟ್‌ಮ್ಯೂಸಿಯಂ:** ಕುನ್ಸ್ಟ್‌ಮ್ಯೂಸಿಯಂ ಬಾಸೆಲ್ ಅನ್ನು 1661 ರಲ್ಲಿ ಅಮೆರ್‌ಬಾಚ್ ಕ್ಯಾಬಿನೆಟ್‌ನೊಂದಿಗೆ ಸ್ಥಾಪಿಸಲಾಯಿತು. ಇದು ಒಂದು ದೊಡ್ಡ ಕಲಾ ಸಂಗ್ರಹವಾಗಿದೆ. ವಿಶ್ವದ ಮೊದಲ ನಾಗರಿಕ ವಸ್ತುಸಂಗ್ರಹಾಲಯ ಎಂದು ಕರೆಯಲ್ಪಡುವ ಇದು ಕಲಿಕೆ ಮತ್ತು ಸಂಸ್ಕೃತಿಯನ್ನು ಉತ್ತೇಜಿಸಲು ಸಾರ್ವಜನಿಕರಿಗೆ ಮುಕ್ತವಾಗಿದೆ. ಇಂದು, ಇದು ನವೋದಯದಿಂದ ಆಧುನಿಕ ಕಲೆಯವರೆಗಿನ ಕೃತಿಗಳನ್ನು ಒಳಗೊಂಡಿದೆ. ಇದು ಪ್ರಸಿದ್ಧ ಯುರೋಪಿಯನ್ ಕಲಾವಿದರನ್ನು ಪ್ರದರ್ಶಿಸುತ್ತದೆ. ಸ್ವಿಟ್ಜರ್‌ಲ್ಯಾಂಡ್‌ನ ಅತ್ಯಂತ ಪ್ರಮುಖ ಕಲಾ ವಸ್ತುಸಂಗ್ರಹಾಲಯವಾಗಿ ಮತ್ತು ವಿಶ್ವದಾದ್ಯಂತ ಅತ್ಯಂತ ಹಳೆಯದಾದ ಸಂಗ್ರಹಾಲಯವಾಗಿ ನಿಂತಿದೆ.

**ಆಶ್ಮೋಲಿಯನ್ ವಸ್ತುಸಂಗ್ರಹಾಲಯ:** ಆಶ್ಮೋಲಿಯನ್ ವಸ್ತುಸಂಗ್ರಹಾಲಯವು 1683 ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಪ್ರಾರಂಭವಾಯಿತು. ಇದು ವಿಶ್ವದ ಮೊದಲ ವಿಶ್ವವಿದ್ಯಾಲಯ ವಸ್ತುಸಂಗ್ರಹಾಲಯವಾಗಿದೆ. ಎಲಿಯಾಸ್ ಆಶ್ಮೋಲ್ ತನ್ನ ವೈಯಕ್ತಿಕ ಕಲಾಕೃತಿಗಳ ಸಂಗ್ರಹವನ್ನು ದಾನ ಮಾಡಿದಾಗ ಇದನ್ನು ಸ್ಥಾಪಿಸಲಾಯಿತು. ಈ ವಸ್ತು ಸಂಗ್ರಹಾಲಯವು ಪುರಾತತ್ವ ಶಾಸ್ತ್ರ, ಪ್ರಾಚೀನ ನಾಣ್ಯಗಳು ಮತ್ತು ಈಜಿಪ್ಟಿನ ಮಮ್ಮಿಗಳಿಂದ ಹಿಡಿದು ನವೋದಯ ಕಲೆಯವರೆಗಿನ ವಸ್ತುಗಳನ್ನು ಪ್ರದರ್ಶಿಸುತ್ತದೆ. ಇದು ಪ್ರಮುಖ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದ್ದು, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಇತಿಹಾಸ ಮತ್ತು ಕಲಾ ಅನ್ವೇಷಕರಿಗೆ ಅನುವು ಮಾಡಿಕೊಡುತ್ತದೆ.

**ಲೌವ್ರೆ ವಸ್ತು ಸಂಗ್ರಹಾಲಯ:** ಲೌವ್ರೆ 13 ನೇ ಶತಮಾನದಲ್ಲಿ ರಾಜಮನೆತನದ ಅರಮನೆಯಾಗಿ ಪ್ರಾರಂಭವಾಯಿತು ಮತ್ತು 1793 ರಲ್ಲಿ ವಸ್ತು ಸಂಗ್ರಹಾಲಯವಾಗಿ ಪರಿವರ್ತಿಸಲಾಯಿತು. ಇಂದು, ಇದು ವಿಶ್ವದ ಅತಿ ಹೆಚ್ಚು ಭೇಟಿ ನೀಡುವ ವಸ್ತು ಸಂಗ್ರಹಾಲಯವಾಗಿದ್ದು, ಮೋನಾ ಲಿಸಾ ಮತ್ತು ವೀನಸ್ ಡಿ ಮಿಲೋ ನಂತಹ ಮೇರುಕೃತಿಗಳನ್ನು ಹೊಂದಿದೆ. ಪ್ರಾಚೀನ ಈಜಿಪ್ಟ್‌ನಿಂದ ಯುರೋಪಿಯನ್ ಕಲೆಯವರೆಗೆ ಸಾವಿರಾರು ವರ್ಷಗಳನ್ನು ಒಳಗೊಂಡ ಸಂಗ್ರಹಗಳು ಲೌವ್ರೆ ಸಂಗ್ರಹಾಲಯದಲ್ಲಿವೆ. ಇದು ಸಂಸ್ಕೃತಿ ಮತ್ತು ಇತಿಹಾಸದ ಜಾಗತಿಕ ಹೆಗ್ಗುರುತಾಗಿದೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)